ಕಲ್ಯಾಣ ಕಿರಣ

ಸಂಪುಟ ೬] ಜನವರಿ 1981 [ಸಂಚಿಕೆ ೯

ಸೃಷ್ಟಿಕರ್ತಗೆ

ನುಡಿ ನೈವೇದ್ಯ

ಹರಿವ ನೀರು ಉರಿವ ಬೆಂಕಿ ಎಲ್ಲ ನಿನ್ನ ದಾನವು
ಸುಳಿವ ಗಾಳಿ ಉಲಿವ ಹಕ್ಕಿ ದೇವ ನಿನ್ನ ಗಾನವು ‖
ಉರುಳ್ವ ತಿರೆಯು ಬರುವ ಋತುವು ಎಲ್ಲ ನಿನ್ನ ಲೀಲೆಯು
ಮೂಡ್ವ ರವಿಯು ಆಡ್ವ ನವಿಲು ನಿನ್ನರಮನೆ ಬೊಂಬೆಗಳು ‖
ಸುರಿವ ಮಳೆಯು ಹರಿವ ಝರಿಯು ನಿನ್ನ ಮನೆಯ ಬುಗ್ಗೆಯು
ಮೊರೆವ ಶರಧಿ, ನಲಿವ ಮರುತ ಹಾಡುತಿರುವ ವಾದ್ಯಗಳು ‖ ೧ ‖

ಮುಗಿಲ ಮುಸುಕು ಹೊದ್ದು ಓಡ್ವ ಚಂದಿರನು ಆಟಗೆಯು
ಬಾನ ಬಯಲ ತುಂಬಿ ತುಳುಕಿ ಹೊಳೆವ ಚುಕ್ಕೆ ಗೊಂಡೆಗಳು
ಅರಳ್ವ ಹೂವು, ತಳಿತ ತರುವು, ಕಾತ ಫಲದ ಸೊಬಗದು
ಬೆರಗುವೊಡೆಸುವಂಥ ಸಿರಿಯ ಇಳೆಯುಮಳಿಗೆ ಹೊಂದಿದೆ ‖ ೨ ‖

ಅಂಚೆವಿಂಡು ಹಾರುವಂಥ ಮುಗಿಲ ಸಿರಿಯ ನೋಡಲೆ?
ಪುಂಚ ತೆರೆದು ಕುಣಿಯುವಂಥ ನವಿಲಿನಲ್ಲಿ ಕಾಣಲೆ?
ಕುಂಚ ಹಿಡಿದು ನೀ ಬರೆಯುವ ಕಲೆಯ ಕಂಡು ನಲಿಯಲೆ?
ಇಂಚರದ ಹಕ್ಕಿ ದನಿಗೆ ನನ್ನ ನಾನು ಮರೆಯಲೆ? ‖ ೩ ‖

ನಿನ್ನ ಸೃಷ್ಟಿ ಕಲೆಯೋ? ಹಾಡೋ? ವಿಜ್ಞಾನಿಯ ಯೋಗಶಾಲೆ?
ಅರ್ಥವಾಗದಿರಲು ನಾನು ಮೌನವೊಡೆದು ನಿಲ್ಲುವೆ!
ಎಂಥ ಮನೆಯು ನಿನ್ನದಯ್ಯಾ ಸೃಷ್ಟಿಗೊಡೆಯ ದೇವನೇ!
ನಿತ್ಯ ಚೆಲುವ, ಸತ್ಯ-ಶಿವನೇ ಸಚ್ಚಿದಾನಂದ ಧೇನುವೇ ‖ ೪ ‖

10–12–1980

ಬರ್ಕ್, ವರ್ಜೀನಿಯಾ

—ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ

ಮಾಸ ಪತ್ರಿಕೆ


ವಾರ್ಷಿಕ ಚಂದಾ ರೂ. ೧೬ ಆಜೀವ ಸದಸ್ಯತ್ವ ೧೫೧ ರೂ.

ಬಿಡಿ ಪ್ರತಿ ೧-೫೦

ಕಿರಣ ಗನ್ನಡಿ

ಮುಖಪುಟ : ವಾಷಿಂಗ್‌ಟನ್ ನಗರ, ಶ್ವೇತ ಭವನ, ಜೆಫರ್‌ಸನ್ ಮೆಮೋರಿಯಲ್, ಯುನೈಟೆಡ್ ಸ್ಟೇಟ್ಸ್, ಕೇಂದ್ರ ಆಡಳಿತ ಕಛೇರಿ, ಲಿಂಕನ್ ಮೆಮೋರಿಯಲ್ ವೀರರ ಸ್ಮಾರಕ.

೨ನೆ ಪುಟ : ಅಬ್ರಾಹಾಂ ಲಿಂಕನ್ ಮೆಮೋರಿಯಲ್. ಹಿಂಬದಿ ಚಿತ್ರ : ಬೀಳ್ಕೊಡುಗೆ ಸಮಾರಂಭ.



ಅಮೆರಿಕಾದೇಶ ನಮಗೆ ಕಲಿಸುವುದೇನು ?

ಕೇವಲ ಎರಡು ನೂರು ವರುಷಗಳ ಇತಿಹಾಸದಲ್ಲಿ ಅತ್ಯದ್ಭುತವಾದ ಒಂದು ನಾಡನ್ನು ಕಟ್ಟಿ ತೋರಿದ ಹಿರಿಮೆ ಈ ನೆಲದ್ದು. ಪ್ರಕೃತಿಯ ವಿರುದ್ಧ ಸೆಣಸುತ್ತಲೇ ಅದನ್ನು ಗೆದ್ದ ವೈಶಿಷ್ಟ್ಯವನ್ನು ಇಲ್ಲಿ ಕಾಣಬಹುದು. ನಮ್ಮ ದೇಶದಲ್ಲಿ ತೋರಿ ಬರುವಷ್ಟು ಸಸ್ಯ ಸಂಪತ್ತು, ಅಲ್ಲಿ ಬೆಳೆಯುವಷ್ಟು ವೈವಿಧ್ಯಮಯ ಬೆಳೆಗಳು, ಮತ್ತು ಹೆಚ್ಚು ಶ್ರಮಕೊಡದ ಹವೆ ಇಲ್ಲಿಲ್ಲ. ನಾವು ಅಷ್ಟೆಲ್ಲ ಇದ್ದೂ ಹಿಂದುಳಿದವರು, ಇವರು ಅಷ್ಟೆಲ್ಲಾ ಇಲ್ಲದೆ ಮುಂದುವರಿದವರು. ಹಿಂದುಳಿದ ದೇಶ, ಅಭಿವೃದ್ಧಿ ಶೀಲ ರಾಷ್ಟ್ರ ಎಂದು ಘೋಷಿಸಿ (declare) ಕೊಳ್ಳಲು ನಮ್ಮ ರಾಷ್ಟ್ರಕ್ಕೆ ಅಭಿಮಾನ, ಹಿಂದುಳಿದ ಜಾತಿ ಎಂದು ಘೋಷಿಸಿಕೊಳ್ಳಲು ನಮ್ಮ ಜನಗಳಲ್ಲಿ ಪೈಪೋಟಿ. ಈ ದೇಶ, ಈ ಜನರಿಗೆ ಹಿಂದುಳಿದವರು ಎನ್ನಿಸಿಕೊಳ್ಳಲು ಅಪಮಾನ, ಮುಂದುವರಿಯಲು ಸತತ ಪರಿಶ್ರಮ! ನಾವು ಹೀಗಾಗುವುದೆಂದು ? ಎಂಬುದು ನನ್ನ ಚಿಂತೆ. ನಮ್ಮ ಜನರ ಸ್ವಾಭಿಮಾನ ಕೆರಳುವದೆಂದು ? ಕರ್ತವ್ಯ ಪ್ರಜ್ಞೆ ಮೂಡುವುದು ಇನ್ನೆಂದು ?

ಈ ಚಳಿಗಾಲದಲ್ಲಿ ಇಲ್ಲಿ ಸೂರ್ಯೋದಯ ತೀರಾ ತಡ, ಸೂರ್ಯಾಸ್ತ ತೀರಾ ಬೇಗ. ಆದರೆ ಜನರು ಆರೂವರೆ ಏಳಕ್ಕೆಲ್ಲ ಎದ್ದು ಬೆಚ್ಚನೆಯ ಬಟ್ಟೆ ಹಾಕಿಕೊಂಡು ಓಡತೊಡಗುವರು. ಇಲ್ಲಿ ಕರ್ತವ್ಯ ಚ್ಯುತಿಗೆ ಅವಕಾಶವೇ ಇಲ್ಲ. ಭಾರತದಿಂದ ಅಪರೂಪಕ್ಕೆ ಬಂದ ಸ್ನೇಹಿತರೊಬ್ಬರು ರಜೆ ಪಡೆಯಲು ತಮ್ಮ ಮಿತ್ರರಿಗೆ

ಹೇಳಿದರಂತೆ. 'ಸಾಧ್ಯವಿಲ್ಲ, ರಜೆ ಸಿಗದು' ಎಂದರಂತೆ. 'ಇಲ್ಲಿ ದೇವರೆ, ಆದರೂ ವಾರಾಂತ್ಯಕ್ಕೆ ಕಾಯಬೇಕು' ಎಂದು ಹಾಸ್ಯ ಮಾಡುವುದುಂಟು. ನಮ್ಮಲ್ಲಿ ರಜೆ ಸಿಗುವುದು ಹಾಗಿರಲಿ, ಆಫೀಸಿಗೆ ಬಂದ ನಾಟಕವಾಡಿ, ಬ್ರೀಫ್‌ಕೇಸ್ ಟೇಬಲ್ ಮೇಲಿಟ್ಟು ಕೋಟನ್ನು ಖುರ್ಚಿಗೆ ತಗುಲಿಸಿ, ಮಿತ್ರರನ್ನು ಕರೆದುಕೊಂಡು ಊರು ತೋರಿಸಲು ಆರಾಮಾಗಿ ಹೋಗಬಹುದು. ರಜೆ ಪಡೆಯದೆಯೇ ಎಲ್ಲಾ ಕೆಲಸ ಮಾಡಬಹುದು. ನಮ್ಮ ಸರ್ಕಾರಿ ಯಂತ್ರದ ಗತಿ ನೋಡಿದರಂತೂ ಆಕ್ರೋಶ ಬರುವುದುಂಟು. "ಹೊಟ್ಟೆಯಲ್ಲಿನ ಸಿಟ್ಟು ರಟ್ಟೆಯಲ್ಲಿಲ್ಲ" ಎಂದುಕೊಂಡು, ನೊಂದು ಕೊಂಡು ಕೈ ಹಿಸುಕಿಕೊಳ್ಳುವುದು ಬಿಟ್ಟರೆ ಇನ್ನೇನೂ ಸಾಧ್ಯವಿಲ್ಲ. ಪ್ರಕೃತಿ ಇಷ್ಟು ಅನಾನುಕೂಲಕರವಿದ್ದೂ ಹೀಗೆ ಹೇಗೆ ಈ ಜನ ಮುಂದುವರಿದರು ಎಂದು ಸೋಜಿಗ ವಾಗುವುದು. ಆದರೆ ಮತ್ತೆ ಅನ್ನಿಸುವುದು ಸೆಣಸಾಟವಿದ್ದರೆ ಮಾತ್ರವೇ ಸಾಹಸ ಪ್ರಜ್ಞೆ ಬೆಳೆಯುವುದು. ಎಲ್ಲ ಸೌಲಭ್ಯ ಜಾಸ್ತಿ ಇದ್ದಷ್ಟು ಸೋಮಾರಿತನ ವೃದ್ಧಿ ಯಾಗುವುದು. ಏನೋ ಅಷ್ಟು ತಿಂದು, ರಸ್ತೆ ಮಗ್ಗುಲಲ್ಲಿ ಮಲಗಿ ನಮ್ಮ ದೇಶದಲ್ಲಿ ಕಾಲ ಕಳೆಯಬಹುದು. ಇಲ್ಲಿ ಮನುಷ್ಯ ಒಂದು ಗಂಟೆ ಹಾಗೆ ಕಾಲಕಳೆದರೆ ಹಿಮದ ಗಡ್ಡೆಯೇ ಸರಿ.

ವಿದ್ಯಾರ್ಜನೆ ಅಥವಾ ಧನಾರ್ಜನೆಗೆ ಮನಸೋತು ಬಂದ ಭಾರತೀಯರು ಅನೇಕರು ತಮ್ಮ ದೇಶಕ್ಕೆ ವಾಪಸ್ಸು ಹೋಗಬೇಕೆಂದು ಬಂದವರು, ಹೋಗಲಾರದೆ ಇಲ್ಲಿ ಉಳಿದು ಬಿಡುವರು. ಕೇವಲ ಕೆಲವರಲ್ಲಿ ಇದು ಸ್ವೇಚ್ಛಾಚಾರದ ಬಯಕೆಗಾಗಿ ಇದ್ದರೂ, ಬಹುಪಾಲು ಜನರಲ್ಲಿ ಆರಾಮಜೀವನಕ್ಕಾಗಿ ಇರುವುದು. ಇಲ್ಲಿ ಆರಾಮ ಎಂದರೆ Easy going ಅಥವಾ ಸ್ವೇಚ್ಛೆ ಎಂದು ನಾನು ಬಳಸುತ್ತ ಲಿಲ್ಲ. ನಮ್ಮಲ್ಲಿ ಜೀವನ ತುಂಬಾ ಒತ್ತಡಮಯ. ಸೀಮೆ ಎಣ್ಣೆ, ಸಕ್ಕರೆ, ರವೆ ಎಲ್ಲಕ್ಕೂ ಕ್ಯೂ. ಹಣಕೊಟ್ಟರೂ ಸಿಗದ ಪೇಚಾಟ. ಈ ಹೊತ್ತು ಸಿಮೆಂಟಿನ ಪರಿ ಸ್ಥಿತಿ ನೆನೆಸಿಕೊಂಡರಂತೂ ಭಯಾನಕ. ಅದರಲ್ಲೂ ಸಾಲಪಡೆದು ಮನೆ ಕಟ್ಟುವವರ, ಮತ್ತು ವಿಶಿಷ್ಟ ಕಾಲಾವಧಿಯಲ್ಲಿ ಕಟ್ಟಡ ಮುಗಿಸಬೇಕೆನ್ನುವವರ (ಶಾಲೆ, ಹಾಸ್ಟೆಲ್ ಕಟ್ಟಡಗಳು) ಅವಸ್ಥೆ ಹೇಳತೀರದು. ಮುಂಬಾಗಿಲಿನಿಂದ ಹೋಗಿ ಪರವಾನಗಿ ಪಡೆಯ ಬೇಕೆನ್ನುವವರ ಕ್ಯೂ ಕರಗದೆ ಹಾಗೇ ನಿಂತಿರುತ್ತೆ; ಹಿಂಬಾಗಿಲಿನಿಂದ ಹೋಗಿ ಲಾರಿ ಗಟ್ಟಳೆ ಲೋಡಿಗೆ ಪರವಾನಗಿ ಪಡೆಯುವವರು ಯಾವ ಅದೃಶ್ಯ ರೂಪದಲ್ಲಿ ಹೋಗಿಬರು ವರೋ ದೇವರಿಗೇ ಗೊತ್ತು. ಲಾರಿಗಳೇನೋ ಮೂಟೆ ಹೊತ್ತು ಬರುತ್ತವೆ; ಆದರೆ ಆ ಸಿಮೆಂಟು ಎಲ್ಲಿಗೆ ತಲಪುವುದೋ ಅರ್ಥವೇ ಆಗದು. "ಹೋಗಲಿ ಬಿಡಿ, ಸತ್ಯ-ನ್ಯಾಯ-ಧರ್ಮಗಳ ಮಾತಾಡುತ್ತ ನಾವು ಮೂಲೆಯಲ್ಲಿ ಕುಳಿತಿರುವುದೇಕೆ ? ಕಾಳಸಂತೆಯಲ್ಲಿ

ಸಿಗುವ ಸಿಮೆಂಟನ್ನೇ ಒಂದಕ್ಕೆರಡೋ-ಮೂರೋ ಕೊಟ್ಟು ತರೋಣ" ಎಂದರೆ ಅದರಲ್ಲಿ ಬೂದಿ ಬೆರೆಸಿಲ್ಲ ಎಂಬುದು ಏನು ಗ್ಯಾರಂಟಿ ? ಸಾಲತೆಗೆದು ಮನೆ ಕಟ್ಟಿದ ಓರ್ವ ಸರ್ಕಾರಿ ನೌಕರದಾರರು ತಮ್ಮ ರಜೆ ಸದುಪಯೋಗ ಪಡೆಯಲು ಕಾಳಸಂತೆಯಲ್ಲಿ ಸಿಮೆಂಟ್ ತಂದು ಮೇಲುಛಾವಣಿ ಹಾಕಿದರಂತೆ. ನೀರು ಕಟ್ಟುವ ಅವಧಿ ಮುಗಿದು ಸೆಂಟ್ರಿಂಗ್ ತೆಗೆಯುತ್ತಲೇ ಇಡೀ ಛಾವಣಿಯೇ ಕುಸಿದು ಬಿತ್ತಂತೆ. ಇಂತಹ ಅನ್ಯಾಯಕ್ಕೆ ಅಮೇರಿಕಾ-ಇಂಗ್ಲೆಂಡಿನಂತಹ ದೇಶಗಳಲ್ಲಿ ಪರಿಹಾರ ಧನವುಂಟು. ನಮ್ಮಲ್ಲಿ ಕೇಳುವುದುಂಟೆ ? ಮಾರಿದವ ಕೊಂಡವ ಇಬ್ಬರೂ ಕಳ್ಳಸಂತೆಯವರೇ ! ತೀರಾ ಚಳಿಗಾಲದಲ್ಲಿ ಇಲ್ಲಿ ಹಿಮ ಸುರಿಯುವುದುಂಟಂತೆ. ಆಗ ಹಿಮಸುರಿತ ನಿಂತ ನಂತರ ಮುಖ್ಯ ರಸ್ತೆಗಳನ್ನು ವಾಹನ ಸಂಚಾರಕ್ಕೆ ಟೌನ್ ಮುನಿಸಿಪಾಲಿಟಿಯವರು ಸ್ವಚ್ಛ ಗೊಳಿಸುವರಂತೆ. ಅವರವರ ಮನೆಯ ಮುಂದಿನ ಸೈಡ್‌ವಾಕ್‌ಗಳನ್ನು ಮನೆಯವರೇ ಹಿಮಸರಿಸಿ ಸ್ವಚ್ಛಗೊಳಿಸಬೇಕಂತೆ. ಅಕಸ್ಮಾತ್ ಸ್ವಚ್ಛಗೊಳಿಸದಿದ್ದರೆ, ಯಾರಾದರೂ ನಡೆಯುವಾಗ ಬಿದ್ದು ಪೆಟ್ಟಾದರೆ ಮನೆಯವರ ವಿರುದ್ಧ ಕೋರ್ಟಿಗೆ ಹೋಗಿ ಪರಿಹಾರ ಪಡೆಯುವರಂತೆ; ರಸ್ತೆಯಲ್ಲಿ ಅಪಘಾತವಾದರೆ ಮುನಿಸಿಪಾಲಿಟಿ ದಂಡ ತೆರಬೇಕಂತೆ! ಇಲ್ಲಿ ಹಣಕೊಟ್ಟರೆ ಏನೂ ಪರದಾಡಬೇಕಿಲ್ಲ. ಕಾಳಸಂತೆ ಇಲ್ಲವೇ ಇಲ್ಲ. ಕಷ್ಟವೇ ಇರಲಿ, ಸುಖವೇ ಇರಲಿ ಹಂಚಿಕೊಂಡು ತಿನ್ನಬೇಕು. 1976ರಲ್ಲಿ ನಾನು ಇಂಗ್ಲೆಂಡಿಗೆ ಹೋದಾಗ ನೀರಿನ ಕೊರತೆ ತೀವ್ರವಾಗಿತ್ತು. ಆಗ ಒಂದೊಂದು ಹನಿ ನೀರನ್ನು ಉಳಿಸಲೂ ಟೆಲಿವಿಷನ್, ರೇಡಿಯೋ ಮುಖಾಂತರ ಸೂಚನೆ ಕೊಡುತ್ತಿದ್ದರು, ಜನರು ಹಾಗೆಯೇ ಪಾಲಿಸುತ್ತಿದ್ದರು. ಈಗ ಇರಾನ್-ಇರಾಕ್ ಯುದ್ಧಗಳಿಂದ ಇಂಧನಗಳು ಬರುತ್ತಿಲ್ಲ ವಾದ್ದರಿಂದ ಅದನ್ನು ಉಳಿಸಲು ಇಲ್ಲಿಯ ಜನ ಎಚ್ಚರಿಕೆ ತೆಗೆದುಕೊಳ್ಳುತ್ತಿರುವರು. ಅಂಗಡಿಗಳಿಗಾಗಿ ಜನರು ಪರದಾಡಬೇಕಿಲ್ಲ, ಅಲ್ಲಿ ಹೋದಾಗ ಚೌಕಾಶಿ ಮಾಡ ಬೇಕಾಗಿಲ್ಲ. ಒಂದು ರೀತಿಯ ಸೌಮ್ಯವಾದ ಜೀವನ. ಶಾಂತವಾದ ಬದುಕು, ಇಲ್ಲಿ ಕೆಲಸಗಾರರು ಮನೆಕೆಲಸಕ್ಕೆ ಸಿಗರು; ಸಿಕ್ಕರೂ ತುಂಬಾ ಸಂಬಳ ಕೊಡಬೇಕು. ಆದರೂ ಯಂತ್ರಗಳ ಸಹಾಯದಿಂದ ಎಲ್ಲ ಕೆಲಸವನ್ನೂ ಹೆಣ್ಣುಮಕ್ಕಳು ಸಲಭವಾಗಿ ನಿರ್ವಹಿಸಬಲ್ಲರು.

ನಮ್ಮಲ್ಲಿ ಜೀವನಾವಶ್ಯಕತೆಯ ಒಂದೊಂದು ಸಣ್ಣ ಸಾಮಾನಿಗೂ ಪರದಾಡ ಬೇಕು. ಈ ಎಲ್ಲ ತೊಂದರೆ ಕೇವಲ ಬಡತನ, ಮತ್ತು ಜನಸಂಖ್ಯಾ ಹೆಚ್ಚಳದ ಕಾರಣ ದಿಂದ ಮಾತ್ರವೇ ಆಗಿವೆಯೆ ? ದುಡಿತದಲ್ಲಿ ಮೈಗಳ್ಳತನ ಮತ್ತು ಅಪ್ರಮಾಣಿಕತನ ಈ ಎರಡೂ ಮುಖ್ಯಕಾರಣಗಳು ಎಂದು ನನ್ನ ಭಾವನೆ. ಅಮೇರಿಕಾದ ರಸ್ತೆಗಳಲ್ಲಿ ಹೋಗುವಾಗ ಅಕಸ್ಮಾತ್ ಎಲ್ಲಿಯಾದರೂ ಒಂದು ಅಪಘಾತವಾದರೆ ಐದು ನಿಮಿಷ

ಗಳಲ್ಲಿ ಮೈಲಿಗಟ್ಟಳೆ ವಾಹನಗಳು ನಿಂತು ಬಿಡುತ್ತವೆ. ಅತ್ಯಂತ ತ್ವರಿತಗತಿಯಿಂದ ಪೋಲೀಸರು, ಸಹಾಯಕ ಸಿಬ್ಬಂದಿ ಬಂದು ರಸ್ತೆ ತೆರವು ಮಾಡುತ್ತಾರೆ. ಆದರೂ ಅಷ್ಟು ಬೇಗನೆ ವಾಹನಗಳು ನಿಲ್ಲುತ್ತವೆ. ಈ ಉದಾಹರಣೆಯನ್ನು ಅನ್ವಯಿಸಿ ನೋಡಿದರೆ, ಸರ್ಕಾರಿ ಯಂತ್ರದಲ್ಲಿ ಹೀಗೆ ಎಲ್ಲೋ ಒಂದು ಕಡೆ ವಿಲಂಬ ನೀತಿ ಭ್ರಷ್ಟಾಚಾರದಿಂದ ಅನಾಹುತ ಸಂಭವಿಸಿದರೆ, ಉಳಿದ ಎಲ್ಲರ ಮೇಲೂ ಪ್ರಭಾವ ಬೀರುತ್ತದೆ. ಒಂದೊಂದು ಸರ್ಕಾರಿ ಆಫೀಸಿನಲ್ಲೂ ಗಂಟೆಗಟ್ಟಳೆ ಕಾಯಬೇಕು; ಅಲೆಯಬೇಕು. ಆಗ ವರ್ತಕರು ತಮ್ಮ ದಿನದ ಖರ್ಚು—ವೆಚ್ಚವನ್ನೂ ವಸ್ತುಗಳಿಗೆ ಸೇರಿಸಿ ಬೇಲೆ ಏರಿಸುವರು. ಎಂದೋ ಕೊಂಡ ದಾಸ್ತಾನಿಗೆ ಸಿಕ್ಕಾಪಟ್ಟೆ ಬೆಲೆ ಏರಿಸಿ ಮಾರಿದಾಗ ವಿಪರೀತ ಲಾಭಗಳಿಸುವರು. ತಿನ್ನುವ ವಸ್ತುಗಳಿಗೆ ಏನೆಲ್ಲ ದುರ್ಮಿಶ್ರಣ ಮಾಡಿ ಮಾಡಿ ಶ್ರೀಮಂತರಾಗುವರು. ಆ ವರ್ತಕನ ಮನೆ ಆದಷ್ಟು ಬೇಗ ದೊಡ್ಡ ಹರ್ಮ್ಯವಾದರೆ, ಅನೇಕರ ಬಡತನ ವೃದ್ಧಿಯಾಗುವುದು.

"ಇದಕ್ಕೆಲ್ಲ ಪರಿಹಾರವೇನು ?" ನಿಮ್ಮಲ್ಲಿ ರಾಜಕಾರಣಿಗಳು ಇದನ್ನೆಲ್ಲಾ ಆಲೋಚಿಸರೆ ? ಅವರ ಕರ್ತವ್ಯವೇನು ? ಎಂದು ಓರ್ವ ಪ್ರೌಢಬಾಲಿಕೆ ನನ್ನನ್ನು ಇಲ್ಲಿನ ಸಮಾರಂಭವೊಂದರಲ್ಲಿ ಕೇಳಿದಳು. ನಮ್ಮ ರಾಜಕಾರಣಿಗಳಿಗೆ ರಾಷ್ಟ್ರ-ಸಮಾಜ ಗಳ ಬಗ್ಗೆ ಚಿಂತಿಸಲು ಪುರುಸೊತ್ತೆಲ್ಲಿ ? ಅವರ ಸಮಸ್ಯೆಗಳೇ ಬೇರೆ. "ಅಧಿಕಾರಕ್ಕೆ ಬರುವ ತನಕ ಅದನ್ನು ಪಡೆಯುವ ಚಿಂತೆ; ಪಡೆದ ನಂತರ ಅದನ್ನು ಉಳಿಸಿಕೊಂಬ ಚಿಂತೆ; ಉಳಿಸಿಕೊಂಡನಂತರ ಬಿಡದಿರುವ ಚಿಂತೆ. ಭಾಷಣ ಬಿಗಿಯುವ ಚಿಂತೆ, ಮನೆ ಮಂದಿಗೆ ಆಸ್ತಿಮಾಡುವ ಚಿಂತೆ. ಸುಂದರ ಭವನವ ನಿರ್ಮಿಸುವ ಚಿಂತೆ, ಅಧಿ ಕಾರದಲ್ಲಿರುವಾಗಲೇ ಮಕ್ಕಳ ಮದುವೆ ಮಾಡುವ ಚಿಂತೆ, ವಿದೇಶಗಳ ತಿರುಗಿ ಬರುವ ಚಿಂತೆ, ಇಂತೀ ಹಲವು ಚಿಂತೆಯಲ್ಲಿದ್ದವರ ನಾ ಕಂಡೆ. ರಾಷ್ಟ್ರದ ಜನತೆಯ ಚಿಂತೆಯ ಲ್ಲಿಪ್ಪ ಕೆಲವರನೂ ಕಾಣೆ" ಎಂದು ವಚನ ಬರೆಯಬೇಕು ಎನ್ನಿಸುತ್ತೆ. ಬೆಳೆಗಿಂತ ಕಳೆಯೇ ಜಾಸ್ತಿಯಾದಾಗ ಏನೂ ಮಾಡಲಾರದೆ ರೈತನು ತಲೆಯ ಮೇಲೆ ಕೈಯಿಟ್ಟು ಕುಳಿತುಕೊಂಬಂತೆ, ತಲೆಯಿದ್ದ ಜನ ಅಗಾಧವಾಗಿ ಚಿಂತಾಕ್ರಾಂತರಾಗಿ ಕೂಡ್ರ ಬೇಕಾಗುತ್ತದೆ. ಇಂತಹ ಸಂಕಷ್ಟ, ಕ್ಲಿಷ್ಟವಾದ ವಾತಾವರಣದಲ್ಲಿ ನಮ್ಮ ದೇಶದ ರಾಜಕೀಯಕ್ಕೆ, ಜನ ಜೀವನ ಗತಿಗೆ ತಿರುವುಕೊಡುವ ಯಾವ ಕ್ರಾಂತಿ ಪುರುಷ ಎಂದು ಬರುವನೋ ಎಂದು ನಿರೀಕ್ಷಿಸಬೇಕಾಗಿದೆ.

ಉತ್ತರ ಅಮೇರಿಕಾದ ದಕ್ಷಿಣ ಪ್ರದೇಶ ಉಷ್ಣ ವಾತಾವರಣದಿಂದ ಕೂಡಿದ್ದು ಅಲ್ಲಿಂದ ದವಸಧಾನ್ಯ ತರಿಸಿಕೊಂಡು ಅಥವಾ ಬೇರಿತರ ದೇಶಗಳಿಂದ ಆವಶ್ಯಕ ಸಾಮುಗ್ರಿಕೊಂಡು, ಶೀತಲವಾದ ವಾತಾವರಣದ ವಿರುದ್ಧ ಹೋರಾಡುತ್ತ ಇಲ್ಲಿಯ

ಜನ ಮತ್ತು ದೇಶ ಮುಂದುವರಿಯುವುದು ನೋಡಿದರೆ, ಅಭಿಮಾನ ಮೆಚ್ಚುಗೆ ಮೂಡು ವುದೇ ಅಲ್ಲದೆ ನಾವೆಂದು ಈ ಮಟ್ಟಕ್ಕೇರುವುದು ಎಂಬ ಚಿಂತೆಯೂ ಮೂಡುವುದು.

ಅಮೆರಿಕಾದ ಜನ ಸ್ನೇಹಶೀಲರು, ಹಸನ್ಮುಖಿಗಳು. ಪರಿಚಯವಿರಲಿ, ಇಲ್ಲ ದಿರಲಿ ಕಂಡಾಗ ಮುಗುಳ್ನಕ್ಕು 'ಹಲೋ' ಎನ್ನುವರು. ಈ ವಿಷಯದಲ್ಲಿ ಬ್ರಿಟಿಷ್ ಜನರಲ್ಲಿ ಆಢ್ಯತೆ ಜಾಸ್ತಿ. ಅವರೂ ಒಂದು ದೃಷ್ಟಿಯಿಂದ ಗತವೈಭವವನ್ನೆ ಹೊಗಳಿ ಕೊಂಡು ಬಿಮ್ಮನೆ ಕುಳಿತುಕೊಳ್ಳುವ ನಮ್ಮ ದೇಶದವರಂತೆ ನೂರಾರು ವರ್ಷಗಳ ಹಿಂದೆ ಹಾಗಿದ್ದೆವು, ಹೀಗಿದ್ದೆವು; ಹಾಗೆ ಆಳಿದೆವು, ಹೀಗೆ ಆಳಿದೆವು ಎಂದು ಹೇಳಿ ಕೊಳ್ಳುವುದರಲ್ಲಿ ಬ್ರಿಟಿಷರಿಗೆ ಹೆಮ್ಮೆ. ಹಾಗೆ ಭಾರತೀಯರಿಗೂ ಎಂದೋ ಒಂದು ಕಾಲದಲ್ಲಿ ರಸ್ತೆಯಲ್ಲಿ ಮುತ್ತುರತ್ನ ಅಳೆದು ಮಾರಿದ ಬಗ್ಗೆ ಅಭಿಮಾನ, ಇಂದು ಜಲ್ಲಿ ಕಲ್ಲು ರಸ್ತೆಯಲ್ಲಿ ಹಾಕಿದರೂ ಬಿಡದೆ ಕದ್ದೊಯ್ಯುವ ಜನಾಂಗ ಬೆಳೆಸಿದ್ದರೂ! ಕರ್ತವ್ಯ ಶೀಲತೆ, ಪ್ರಾಮಾಣಿಕತೆ ಇಂದು ಹೇಗಾದರೂ ನಮ್ಮಲ್ಲಿ ಬೆಳೆಸಬೇಕಾಗಿದೆ. ಹತ್ತಾರು ವರ್ಷಕಾಲ ಇಲ್ಲಿ ಬಂದು ವಿದ್ಯಾರ್ಜನೆ ಮಾಡಿ, ವಾಪಸ್ಸು ಬಂದು ಅದನ್ನಾದರೂ ನಮ್ಮ ವಿದ್ಯಾವಂತರು ಕಲಿಸುವರೇ ? ಅದನ್ನೂ ನಿರೀಕ್ಷಿಸಲಾಗುತ್ತಿಲ್ಲ.

(1) ಒಳ್ಳೆಯ ವಿದ್ಯಾವಂತರಿಗೆ, ಪ್ರತಿಭಾವಂತರಿಗೆ ನಮ್ಮಲ್ಲಿ ಸೂಕ್ತ ಸ್ಥಾನ ಮಾನ ಸಿಗದೆ, ರಾಜಕಾರಣದ ಅನಿಷ್ಟ ಕೈವಾಡದಿಂದಾಗಿ, ನೌಕರಿ ಗಳಲ್ಲಿ ಹಣದ ಕೈವಾಡದಿಂದಾಗಿ, ಕೆಲಸವನ್ನರಸಿ ಇತ್ತ ಬರುವರು. ವಾಪಸ್ಸು ಬರುವ ಆಸೆ ಇದ್ದರೂ, ತಮ್ಮ ಯೋಗ್ಯತೆಗೆ ತಕ್ಕ ನೌಕರಿ ದೊರೆಯುವುದೋ ಇಲ್ಲವೋ ಎಂದು ಹೆದರಿ ಸ್ವದೇಶಕ್ಕೆ ಬರುವುದೇ ಇಲ್ಲ.

(2) ಇನ್ನು ಕೆಲವರು ಬಂದು ನೆಲೆಸಿದರೂ, ಜನಜೀವನದ ಸುಧಾರಣೆಗೆ ಯತ್ನಿಸದೆ ಕೇವಲ ವೈಭವಪೂರಿತ ಕ್ಲಿನಿಕ್, ನರ್ಸಿಂಗ್ ಹೋಮ್ ತೆರೆದು ತಾವೇ ಬೇರೆಯಾಗಿ ಬಾಳಲಿಚ್ಛಿಸುವರು.

(3) ಇನ್ನು ಕೆಲವರು ಅಮೆರಿಕಾ ಜನರಲ್ಲಿ ಕಷ್ಟಸಹಿಷ್ಣುತೆ, ಕರ್ತವ್ಯ ದಕ್ಷತೆ, ಪ್ರಾಮಾಣಿಕತೆ ಕಲಿಯದೆ ಕೇವಲ ಅವರಲ್ಲಿನ ಮುಕ್ತ ಲೈಂಗಿಕ ಜೀವನ, ಸ್ವೇಚ್ಛಾ ಪ್ರಜ್ಞೆ, ಮಾಂಸಾಹಾರ ಭಕ್ಷಣೆ, ಮಾದಕ ಪೇಯ ಸೇವನೆ ಇಷ್ಟೇ ಕಲಿತು ಬರುವರು.

ಇಷ್ಟೆಲ್ಲ ಅವಾಂತರಗಳ ಮಧ್ಯೆ ಇದ್ದೂ, ಮನುಷ್ಯ ಪರಿಪಕ್ವವಾಗಿ ಅಲ್ಲಿಗೆ ಬಂದುದೇ ಆದರೆ ಗಾಂಧೀಜಿ, ಅರವಿಂದ, ರಾಧಾಕೃಷ್ಣರಂಥ ವಿಶೇಷ ವ್ಯಕ್ತಿಯಾದಾನು.

ಏಕೆಂದರೆ ಇಲ್ಲಿ ಬೆಳವಣಿಗೆಗೂ ಅಷ್ಟೇ ಅವಕಾಶ. ಕೆಡಲೂ ಅಷ್ಟೇ ಅವಕಾಶ. ಮತ್ತು ಅದನ್ನು ಆರಿಸಿಕೊಳ್ಳುವ ಮುಕ್ತ ಸ್ವಾತಂತ್ರ್ಯವೂ ಉಂಟು. "ಸಾಧನೆಗೆ ಬೆಲೆಯುಂಟೇ ವಿನಾ ವಯಸ್ಸಿಗಲ್ಲ" ಎಂಬ ಆಧ್ಯಾತ್ಮಿಕ ನಾಣ್ಣುಡಿಯನ್ನು ಇಲ್ಲಿಯೂ ಅನ್ವಯಿಸಿದರೆ ದೇಶದ ಇತಿಹಾಸ ಎಷ್ಟು ದೊಡ್ಡದು ಎಂಬುದು ಮಹತ್ವಪೂರ್ಣವಲ್ಲ, ಇಂದು ನಾವೇನು ಸಾಧಿಸಿದ್ದೇವೆಂಬುದು ಮುಖ್ಯ. ಏನೇ ಇರಲಿ, ನಮ್ಮ ಇತಿಹಾಸವೂ ಭವ್ಯ ವಿದೆ; ಭೂಮಿ ಫಲವತ್ತಾಗಿದ್ದಂತೆ ನಮ್ಮ ಸಾಮಾಜಿಕ-ನೈತಿಕ-ಆಧ್ಯಾತ್ಮಿಕ ಮೌಲ್ಯ ಗಳೂ ಉತ್ತಮವಿದೆ, ಸತ್ವವುಳ್ಳ ಬೀಜಗಳಂತೆ. ನಾವೀಗ ಬಿತ್ತಿ ಬೆಳೆಯಬೇಕಾಗಿದೆ. ಬೆಳೆಯಲು ನವಜನಾಂಗಕ್ಕೆ ಕಲಿಸಬೇಕಾಗಿದೆ. ಅಂಥ ಪ್ರಯತ್ನದಲ್ಲಿ ತೊಡಗೋಣ ವಿನ್ನು.

8-12-1980

—ಜಗದ್ಗುರು ಮಾತೆ ಮಹಾದೇವಿ

[ಮುಂದಿನ ಮಾತೃ ಹರಕೆಯ ವಿಷಯು : ಭಾರತವು ಅಮೆರಿಕಾಕ್ಕೆ ಕಲಿಸುವುದೇನು ?]

ವೀರಶೈವರಲ್ಲಿ ವಿನಂತಿ

1981ರ ಜನಗಣತಿಯಲ್ಲಿ ನಿಮ್ಮ ಧರ್ಮ ಯಾವುದು ಎಂದು ಕೇಳಿದರೆ ಲಿಂಗಧಾರಿಗಳೆಲ್ಲರೂ ಪ್ರಶ್ನೆ 8 **ಧರ್ಮ** ಎಂಬ ಕಲಂ ಪ್ರಕಾರ "**ವೀರಶೈವ** ಅಥವಾ **ಲಿಂಗಾಯಿತ**" ಎಂದೇ ಹೇಳಿರಿ.

-: ಸೂಚನೆಗಳು :-

1) 1981ರ ಜನಗಣತಿಯಲ್ಲಿ ಜಾತಿಯ ಪ್ರಸ್ತಾಪವೇ ಇಲ್ಲ.
2) ಕುಲಕಸಬು ವಿಚಾರವೇ ಬರುವುದಿಲ್ಲ.
3) ಕಲಂ 15 (ಅ) ಪ್ರಕಾರ ನೀವು ಏನು ಕೆಲಸ ಮಾಡುತ್ತಿದ್ದೀರಿ ಎಂದು ಮಾತ್ರ ಕೇಳುತ್ತಾರೆ. ಆಗ ನಿಮ್ಮ ಉದ್ಯೋಗ ತಿಳಿಸಿ.

ಐ. ಎಂ. ಮುಗದುಂ,
ಅಧ್ಯಕ್ಷ
ಅಖಿಲ ಭಾರತ ವೀರಶೈವ ಮಹಾ ಸಭೆ,
ಬೆಂಗಳೂರು ಜಿಲ್ಲಾ ಸಮಿತಿ ಮತ್ತು ಬೆಂಗಳೂರು
ವಿಭಾಗದ ಸಂಚಾಲಕರು.

ವಚನ ಪರುಷ

ಜಗದ್ಗುರು ಮಾತೆ ಮಹಾದೇವಿ

ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ
ಆಕಾಶ ಗಂಗೆಯಲ್ಲಿ ಮಜ್ಜನ
ಹೂವಿಲ್ಲದ ಪರಿಮಳದ ಪೂಜೆ
ಹೃದಯ ಕಮಲದಲ್ಲಿ ಶಿವಶಿವ ಎಂಬ ಶಬ್ಧ
ಇದು ಅದ್ವೈತ ಕಾಣಾ ಗುಹೇಶ್ವರಾ।

—ಅಲ್ಲಮಪ್ರಭು

ಸರ್ವಾಂಗದಿಂದಲೂ ದೇವನನ್ನು ಆರಾಧಿಸಿ, ಅಣು ಅಣುವಿನಲ್ಲಿಯೂ ಅವನನ್ನು ತುಂಬಿಕೊಳ್ಳಬಯಸಿದ ಶರಣರು ಪೂಜೆಗೆ ಮೂಬಗೆಯ ವಸ್ತುಗಳನ್ನು ಆರಿಸಿ ಕೊಂಡರು. 1. ಕರಸ್ಥಲದಿ ಕುರುಹಾಗಿ ಬಂದು ಸ್ಥೂಲ ಪೂಜೆ ಕೈಗೊಳ್ಳುವ ಇಷ್ಟಲಿಂಗ. 2. ಹೃದಯ ಸ್ಥಲದಲ್ಲಿ ಪ್ರಕಾಶಗೊಂಡು ಸೂಕ್ಷ್ಮಪೂಜೆ ಕೈಗೊಳ್ಳುವ ಪ್ರಾಣಲಿಂಗ. 3. ಸುಬುದ್ಧಿಯಲ್ಲಿ (Divine intellect) ಗೋಚರಿಸಲ್ಪಟ್ಟು ದಿವ್ಯಾನುಭವ ನೀಡುವ ಭಾವಲಿಂಗ ಪರಮನ ಪೂಜೆ. ಸ್ಥೂಲ, ಸೂಕ್ಷ್ಮ, ಕಾರಣಗಳೆಲ್ಲದರಲ್ಲೂ ನಡೆಯಬೇಕೆಂಬ ಮಹತ್ತರ ಆಕಾಂಕ್ಷೆ ಬಸವೋಕ್ತ ಶಿವಯೋಗದ್ದು.

ಅಲ್ಲಮ ಪ್ರಭುಗಳ ಮೇಲ್ಕಂಡ ವಚನದಲ್ಲಿ, ಪ್ರಾಣಲಿಂಗಪೂಜೆ (Worship of the Self) ಹೇಗೆ ನಡೆಯುವುದೆಂಬ ವಿವರಣೆ ಇದೆ. ಪ್ರಾಣಲಿಂಗವೆಂದರೆ ಆತ್ಮ ತತ್ತ್ವ; ವಚನ ಶಾಸ್ತ್ರ ಪ್ರಕ್ರಿಯೆಯಲ್ಲಿ ಅದಕ್ಕೆ ಚಿಲ್ಲಿಂಗವೆಂಬ ಹೆಸರೂ ಇದೆ. ಸಾಕ್ಷಿ ಎಂಬ ಮತ್ತೊಂದು ಹೆಸರೂ, ಕರ್ತೃ, ಭೋಕ್ತೃ, ಜ್ಞಾತೃ ಎಂಬ ಹೆಸರೂ ಇವೆ.

1. ಆತ್ಮವೆಂದರೆ ಎಲ್ಲೆಡೆಯಲ್ಲಿ ವ್ಯಾಪಕವಾಗಿರುವುದು. ಬ್ರಹ್ಮಾಂಡಗತವಾಗಿ ವ್ಯಾಪಕ ವಾಗಿರುವುದು ವಿಶ್ವಾತ್ಮ, ಪರಮಾತ್ಮ. ಪಿಂಡಾಂಡದಲ್ಲಿ ವ್ಯಾಪಕವಾಗಿರುವುದು ಪ್ರತ್ಯಗಾತ್ಮ; Psyche.

2. ಅದು ಪ್ರಾಣಲಿಂಗವೆಂಬ ಹೆಸರನ್ನೂ ಹೊಂದಿದೆ. ಪ್ರಾಣಗಳನ್ನೇ ವಾಹನಗಳ ನ್ನಾಗಿ ಮಾಡಿಕೊಂಡು ಅದು ಕಾರ್ಯೋನ್ಮುಖವಾಗಿರುವ ಕಾರಣ, ಅವುಗಳ ಆಶ್ರಯ ದಲ್ಲೇ ಪ್ರಕಾಶಿಸುವ ಕಾರಣ ಅದು ಪ್ರಾಣಲಿಂಗ.

3. ಆತ್ಮನಿಗೆ ಚಿಲ್ಲಿಂಗವೆಂಬ ಇನ್ನೊಂದು ಹೆಸರಿದೆ. ಅದು ಚಿತ್ ಪ್ರಧಾನ ಲಿಂಗ. ಅಂದರೆ ಅರಿವನ್ನು (Consciousness) ವಿಶೇಷ ಸ್ವರೂಪವಾಗಿ ಉಳ್ಳದ್ದು.

4. ಮಾಡುವ ಎಲ್ಲ ಕಾರ್ಯಗಳನ್ನೂ, ಪಾಪ-ಪುಣ್ಯಗಳಿಗೆ ಹೊದ್ದದೇ ನಿರ್ಲಿಪ್ತ ವಾಗಿ ವೀಕ್ಷಿಸುವ ಕಾರಣ ಅದು ಸಾಕ್ಷಿ

5. ದೇಹವು ತನ್ನಿಂದ ತಾನೆ ಮಾಡಲಾರದು, ಅನುಭವಿಸಲಾರದು, ತಿಳಿಯಲಾರದು. ದೇಹದ ಮುಖಾಂತರ ತಿಳಿಯುವ (Knower); ಮಾಡುವ (actor), ಮತ್ತು ಅನುಭವಿಸುವ (enjoyer) ತತ್ತ್ವವು ಆತ್ಮನೇ !

ಇಂಥ ಪ್ರಾಣಲಿಂಗಕ್ಕೆ ದೇಹವೇ ಸಜ್ಜೆ (Bed), ಪೀಠ. ಅದಕ್ಕೆ ಹೊರಗಿನ ವಸ್ತುಗಳನ್ನು ಅರ್ಪಿಸಿ ಪೂಜೆಗೈಯಲು ಬರದು. ಈ ನಿರಾಕಾರಿ ಆತ್ಮನಿಗೆ ನಿರಾಕಾರದ ಪೂಜೆಯೇ ಆಗಬೇಕು. ಸಹಸ್ರಾರ ಚಕ್ರದ ಅಡಿಯಲ್ಲಿರುವ ಕುಂಭಿನಿ ಸರಸಿಯಲ್ಲಿ (ಆಕಾಶವೆಂಬ ಇನ್ನೊಂದು ಅನ್ವರ್ಥನಾಮ) ತುಂಬಿ ತುಳುಕುವ ಸಂತೃಪ್ತಿಯ ಜಲದ ಧಾರೆಯಲ್ಲಿ ಮಜ್ಜನ. ಬಹಿರಂಗದ ಹೂವುಗಳನ್ನೇರಿಸಿ ಪೂಜಿಸುವುದಲ್ಲ; ಅಂತರಂಗಿಕ ಸದ್ಭಾವಗಳನ್ನು ಪೇರಿಸಿ ಪೂಜಿಸಬೇಕು. ಹೃದಯವೊಂದು ವೀಣೆಯಾಗಿ ಶಬ್ದವನ್ನು ನುಡಿಯಬೇಕು. ಆ ಶಬ್ದ ಶಿವಗೀತೆ, ಶಿವಸ್ತೋತ್ರವಲ್ಲದೆ ಬೇರಲ್ಲ. ಇದು ಮೌನವಾಗಿ ನುಡಿವ, ಮಿಡಿವ ಮಂತ್ರ ಸಾಧನೆ.

ಇಂಥದೊಂದು ಅದ್ವೈತ ಸ್ಥಿತಿಯಲ್ಲಿ ಪೂಜ್ಯ–ಪೂಜಕ–ಪೂಜೆಯ ತ್ರಿಪುಟಿ ಇಲ್ಲ. ಪೂಜಿಸುವವನೂ ತಾನೆ, ಪೂಜೆಗೊಳ್ಳುವ ಆತ್ಮನೂ ತಾನೆ, ಪೂಜೆಯ ಮಾಟ ನಿಶ್ಯಬ್ದದಲ್ಲಿ ನೆಲೆ ನಿಂತಿದೆ. ಇದು ಉನ್ನತಮಟ್ಟದ ಒಂದು ದಿವ್ಯಾನುಭವ ಅದ್ವೈತ ಸ್ಥಿತಿ (non-dual state). ಅದ್ವೈತ ಸ್ಥಿತಿ ಬೇರೆ, ಅದ್ವೈತ ಸಿದ್ಧಾಂತ (mouism) ಬೇರೆ. ಎರಡಿಲ್ಲದ ಏಕೋಭಾವ ಅಳವಡುವುದು ಅದ್ವೈತ ಸ್ಥಿತಿ. ಜಗತ್ತನ್ನು ಮಿಥ್ಯವೆಂದು ಪರಮಾತ್ಮನೊಬ್ಬನನ್ನೇ ಸತ್ಯವೆನ್ನುವುದು ಅದ್ವೈತ ಸಿದ್ಧಾಂತ. ಶರಣಧರ್ಮದ್ದು ನೇತಿವಾದವಲ್ಲ, ನಿರಸನವಾದ. ಇಲ್ಲಿ ಶರಣನಿಗೆ ಚೈತನ್ಯ ಸಮಾಧಿ ಆತ್ಯಂತಿಕ ಆಧ್ಯಾತ್ಮ ಸಿದ್ಧಿ. ಮತ್ತು ಅವನು ದೈವಾನುಭವ ಪಡೆದಂತೆಲ್ಲ ಈ ಜಗತ್ತನ್ನು ಮಿಥ್ಯವೆನ್ನದೆ ಇದರ ಅಣು ಅಣುವಿನಲ್ಲೂ ದೈವೀ ಲೀಲೆಯನ್ನು ಕಾಣುವನು. ಪರಮಾತ್ಮನು ಸರ್ವಭರಿತನಾಗಿ ಮೊಗತೋರುವನು ಈ ಚಿನ್ಮಯಜ್ಞಾನಿಗೆ.

ಅಂಜಲದೇಕೊ ಎಲ್ಲೈ ಮಾನವ
ಲೋಕ ವಿಗುರ್ಭಣೆಗೆ

ಸಮಸ್ಯೆ! ಸಮಾಧಾನ!

—ಅರುಣ, ರಾಜಾಜಿನಗರ, ಬೆಂಗಳೂರು.

* ಅಮೆರಿಕಾ, ಬ್ರಿಟನ್‌ಗಳ ಜನರು ಪರಸ್ಪರ ಭೇಟಿಯಾಗುತ್ತಲೇ ಹವಾಮಾನದ ವಿಚಾರ ಮಾತನಾಡುವರಂತೆ. ಹೀಗೇಕೆ?

* ಈ ದೇಶಗಳ ಹವಾಮಾನ ಉಷ್ಣದೇಶಗಳ ಹವಾಮಾನದಂತೆ ಸ್ಥಿರವಾಗಿರದೆ ಗಳಿಗೆ ಗಳಿಗೆಗೂ, ದಿನ ದಿನಕ್ಕೂ ಬದಲಾಗುವುದರಿಂದ ಅವರಿಗದು ಮಹತ್ವಪೂರ್ಣ. ಬಿಸಿಲು ಬಿದ್ದು ಉಷ್ಣತೆಯಿಂದ ಹವಾಮಾನ ಕೂಡಿದ್ದರಂತೂ ಅವರಿಗೆ ಖುಷಿಯೋ ಖುಷಿ. ಆದ್ದರಿಂದ ಅದನ್ನೇ ಪ್ರಸ್ತಾಪಿಸುವರು. ರೇಡಿಯೋ, ದೂರದರ್ಶಕಗಳಲ್ಲೂ ಅದನ್ನೇ ಪ್ರಸ್ತಾಪಿಸುವರು.

—ಸ್ವಾಮಿ ದಯಾನಂದ, ಮಂಡ್ಯ.

* ಅಮೆರಿಕಾ, ಬ್ರಿಟನ್ ಮುಂತಾದಲ್ಲಿ ಇರುವ ಹಿಂದುಗಳು ತಮ್ಮ ಧರ್ಮ–ಸಂಸ್ಕೃತಿಗಳನ್ನು ಎಷ್ಟರ ಮಟ್ಟಿಗೆ ಉಳಿಸಿಕೊಂಡಿದ್ದಾರೆ?

* ಬಹುಪಾಲು ಜನ ಉಳಿಸಿಕೊಂಡಿಲ್ಲ. ಹೊಸದಾಗಿ ಭಾರತ ಬಿಟ್ಟು ಇಲ್ಲಿಗೆ ಬರುವವರಂತೂ ತುಂಬಾ ಬೇಗನೇ ಇಲ್ಲಿಯ ಜೀವನಕ್ಕೆ ಮಾರು ಹೋಗುವರು. ಇಲ್ಲಿಯ ಜನರು ಮಾಡಿದ್ದನ್ನೆಲ್ಲಾ ತಾವೂ ಅನುಕರಿಸ ಹೋಗುವರು. ಆದರೆ ಇತ್ತೀಚೆಗೆ ಕೊಂಚ ಜಾಗೃತಿ, ತಮ್ಮ ಸಂಸ್ಕೃತಿ–ಧರ್ಮಗಳನ್ನುಳಿಸಿಕೊಳ್ಳುವ ಪ್ರಯತ್ನ ಆರಂಭವಾಗಿದೆ. ಸ್ವಲ್ಪ ಹಿಂದೆಯೇ ಭಾರತದಿಂದ ಬಂದು, ತಮ್ಮ ಮಕ್ಕಳು ಮರಿ ಇಲ್ಲಿಯ ವಾತಾವರಣದಲ್ಲಿ ಬೆಳೆಯುವಂತೆ ಮಾಡಿ, ಅನೇಕ ಕಹಿ ಫಲಗಳನ್ನು ಉಂಡಿರುವ ಹಿರಿಯರ ತಲೆಗೆ ಬಿಸಿ ತಟ್ಟಿ ಈಗ ಚಿಂತನೆಗೆ ತೊಡಗಿದ್ದಾರೆ.

—ವರದರಾಜ ಉಲ್ಲಾಳ, ದಕ್ಷಿಣ ಕನ್ನಡ

* ಅಮೆರಿಕಾದ ಹಿಂದುಗಳು ಸಂಘಟನಾ ವಿಷಯದಲ್ಲಿ ಹೇಗಿದ್ದಾರೆ?

* ತಮ್ಮ ಸ್ವದೇಶದಲ್ಲೇ ಸಂಘಟಿತರಾಗದ ಅವರಿಂದ ವಿದೇಶದಲ್ಲಿ ಸಂಘಟನೆ ಬಯಸಬಹುದೆ? ಇವರಿಗೆ ಸೂಕ್ತ ತರಬೇತಿಯೇ ಇಲ್ಲದ ಕಾರಣ ಯಾವ ಜಾಗದಲ್ಲಿದ್ದರೂ ಅಸಂಘಟಿತರಾಗಿಯೇ ಉಳಿಯುವರು. ಮತ್ತು ಕ್ರೈಸ್ತರು, ಮುಸ್ಲೀಮರು ಯಾವ ದೇಶದಲ್ಲಿದ್ದರೂ, ಮತ್ತೆಲ್ಲಿಗೆ ಹೋದರೂ ಸಂಘಟಿತರಾಗಿಯೇ ಸಾಗುವರು.

—ಅಂದಾನಯ್ಯ ಹಿರೇಮಠ, ಹಾವೇರಿ.

* ನೀವು ವಿಶ್ವಗುರು ಬಸವಣ್ಣನವರು ಎಂದು ಸಂಭೋಧಿಸುವಿರಿ. ಗುರುವೆಂದರೆ ಭವಿಯ ತಲೆಯ ಮೇಲೆ ಹಸ್ತವನ್ನಿಟ್ಟು ಪೂರ್ವಾಶ್ರಯ ನಿವೃತ್ತಿ ಮಾಡಿ, ಪುನರ್ಜನ್ಮ ಕೊಡುವವನು. ಹಾಗಾದರೆ ಬಸವಣ್ಣನವರು ವಿಶ್ವದ ಎಲ್ಲ ಜನರ ಮೇಲೆ ಹಸ್ತವನ್ನಿಟ್ಟರೆ?

* ಬಹಳ ಬುದ್ಧಿವಂತ ಪ್ರಶ್ನೆ! ಎಷ್ಟು ಪೆದ್ದು ಪೆದ್ದಾಗಿ ಕೇಳಿರುವಿರಲ್ಲ! ಚಿಂತೆಯಿಲ್ಲ ಉತ್ತರಿಸುವೆ. 'ಗುರು' ಶಬ್ದಕ್ಕೆ ಬಹಳ ಅರ್ಥಗಳಿವೆ. ಒಂದನೇ ಅರ್ಥ, ಭಾರ. ಏಕೆಂದರೆ ಈಗಿನ ಬಹುಪಾಲು ಗುರುಗಳು ಭಾರವೆ! ಪಲ್ಲಕ್ಕಿಯಲ್ಲಿ ಕೂತಾಗ, ಹೊರುವವರಿಗಂತೂ ಭಾರವಷ್ಟೆ? ಅಜ್ಞಾನವೆಂಬ ಅಂಧಕಾರಕ್ಕೆ ಜ್ಯೋತಿ ಸ್ವರೂಪನಾದವನು ಗುರು. ಶಿಷ್ಯನ ಭವವನ್ನು ಪರಿಹರಿಸುವವನು ಗುರುವು. ವೈಯಕ್ತಿಕ ದೀಕ್ಷಾಗುರುವಿನ ವ್ಯಾಖ್ಯಾನ, 'ದೀಕ್ಷೆ ಮಾಡಿ ಅನುಗ್ರಹಿಸಿದವ' ಎಂದಾಗುತ್ತದೆ. "ವಿಶ್ವಗುರು" ಎಂದರೆ ವಿಶ್ವವು ಒಪ್ಪತಕ್ಕಂತಹ (universal truths) ಸಾರ್ವಕಾಲಿಕ ಸತ್ಯಗಳನ್ನು 'ಅವರು–ಇವರು–ಎಲ್ಲರೂ, ಅಲ್ಲಿ–ಇಲ್ಲಿ–ಎಲ್ಲೆಡೆ, ಆಗ-ಈಗ-ಎಲ್ಲಾ ಕಾಲದಲ್ಲೂ' ಅನ್ವಯಿಸುವ ತತ್ತ್ವಗಳನ್ನು ಕೊಟ್ಟವನು ವಿಶ್ವಗುರು. ಬುದ್ಧ, ಏಸು, ಬಸವಣ್ಣ, ನಾನಕ ಮುಂತಾದವರು ಅಂತಹ ವಿಶ್ವಗುರುಗಳು.

—ವಿರುಪಾಕ್ಷ, ಬಳ್ಳಾರಿ

* ನಾನೊಬ್ಬ ಲೌಕಿಕ ಮನುಷ್ಯ. ಲೋಕಿಕನೆಂದರೆ ಕೇವಲ ಸುಖಗಳಲ್ಲಿ ಆಸಕ್ತನಾದವನು ಎಂದಲ್ಲ. ಗೃಹಸ್ಥ ಧರ್ಮ, ಲೋಕ ಕರ್ತವ್ಯ ಮಾಡಿಯೂ ಪರಮಾರ್ಥ ಬದುಕು ನಡೆಸಬೇಕು ಎನ್ನುವವನು. ನನ್ನ ದಿನಚರಿ ಏನಿರಬೇಕು ಹೇಳುವಿರಾ?

* ಸಾಧ್ಯವಾದಷ್ಟು ಬೇಗ, ಅಂದರೆ ಬೆಳಗಿನ ಮೂರರಿಂದ ಆರರವರೆಗಿನ ಅವಧಿಯೊಳಗೆ ಏಳಿರಿ. ಯೋಗಾಸನಗಳನ್ನು ಮಾಡುವುದು ಒಳ್ಳೆಯದು. ಶೌಚಾದಿ

ಕ್ರಿಯೆಗಳನ್ನು ಮುಗಿಸಿ ಯೋಗಾಸನ ಮಾಡಿರಿ. ನಿಮಗೇನಾದರೂ ಶಾಂತ ವಾತಾವರಣದಲ್ಲಿ ಹೆಚ್ಚು ಧ್ಯಾನ ಮಾಡುವ ಆಕಾಂಕ್ಷೆ ಇದ್ದರೆ ಯೋಗಾಸನ ನಂತರ ಮಾಡಬಹುದು. ಎದ್ದು ಶೌಚಾದಿ ಕ್ರಿಯೆಗಳನ್ನು ಮುಗಿಸಿ, ಸ್ನಾನಗೈದು ಪೂಜೆ–ಧ್ಯಾನ ಮಾಡಿ. ಲಿಂಗಾಯತರಿದ್ದರೆ ಲಿಂಗಾರ್ಚನೆ, ಲಿಂಗ ತ್ರಾಟಕ ಮಾಡಿ, ಧ್ಯಾನ ಮಾಡಿ. ಅಲ್ಲದಿದ್ದರೆ, ಸಗುಣ ಬೇಕಾಗಿದ್ದರೆ ನಿಮ್ಮ ಆರಾಧ್ಯ ಮೂರ್ತಿಯಿದ್ದರೆ ಅದರ ಭಾವಚಿತ್ರದ ಮೇಲೆ ಧ್ಯಾನಿಸಿರಿ. ನಿರ್ಗುಣೋಪಾಸನೆ ಬೇಕಾಗಿದ್ದರೆ ಭ್ರೂಮಧ್ಯ, ಹೃದಯ ಕಮಲದಲ್ಲಿ ದೃಷ್ಟಿಯಿರಿಸಿ ಮಂತ್ರ ಧ್ಯಾನ ಮಾಡಿರಿ. ಧ್ಯಾನಾನಂತರ ಯೋಗಾಸನಗಳನ್ನು ಆರೋಗ್ಯ ರಕ್ಷಣೆಗಾಗಿ ಮಾಡಿ. ಕೆಲವು ಅಧ್ಯಾತ್ಮಿಕ ವಿಷಯ ಗ್ರಂಥಗಳನ್ನು ಸುಪ್ರಭಾತದಲ್ಲಿ ಅರ್ಚನೆ, ಧ್ಯಾನದ ನಂತರ ಓದುವುದೊಳ್ಳಿತು. ನಂತರ ತಿಂಡಿ ತಿಂದು ನಿಮ್ಮ ಕಾಯಕಕ್ಕೆ ಹೋಗುವಿರಿ. ಸಂಜೆ ಕಾಯಕ ಮುಗಿಸಿಕೊಂಡು ಬಂದು ಮುಖಮಾರ್ಜನೆ ಮಾಡಿ ಮನೆಯವರನ್ನೆಲ್ಲಾ ಕೂಡ್ರಿಸಿಕೊಂಡು ಸಾಮೂಹಿಕ ಪ್ರಾರ್ಥನೆ ಮಾಡಿರಿ. ಸಾಮೂಹಿಕ ಸಾಹಿತ್ಯಾಧ್ಯಯನ ಮಾಡಿರಿ. ಅಲ್ಲಿಂದ ನಿಮ್ಮ ವೈಯಕ್ತಿಕ ಪೂಜೆ–ಧ್ಯಾನ ಪೂರೈಸಿ ರಾತ್ರಿಯ ಊಟ ಮುಗಿಸಿ, ಸ್ವಲ್ಪ ಕಾಲ ಉತ್ತಮ ತಾತ್ತ್ವಿಕ ಗ್ರಂಥಗಳನ್ನು ಅಧ್ಯಯನ ಮಾಡಿರಿ. ಅಧ್ಯಯನ ಮಾಡುತ್ತ ಟಿಪ್ಪಣಿ ಬರೆದುಕೊಂಡು ಮರುಚಿಂತನೆ ಮಾಡಿರಿ. ಉತ್ತಮ ಶಾಸ್ತ್ರೀಯ ಪ್ರವಚನ, ವ್ಯಾಖ್ಯಾನ ನಡೆಯುತ್ತಿದ್ದರೆ ಅಂಥಲ್ಲಿಗೆ ಹೋಗಿ ಕೇಳಿ, ಜ್ಞಾನ ಸಂಪಾದನೆ ಮಾಡಿಕೊಳ್ಳಿರಿ. ಎಲ್ಲಕ್ಕಿಂತ ಮುಖ್ಯವಾಗಿ ಯೋಗ್ಯ ಗುರುಗಳಿಂದ ದೀಕ್ಷಾ ಸಂಸ್ಕಾರ ಪಡೆದುಕೊಳ್ಳಿರಿ.

—ಫಾಲಾಕ್ಷಯ್ಯ ದಾವಣಗೆರೆ

* ತರಳಬಾಳು ತ್ರೈಮಾಸಿಕ ಓದುವಾಗ ಅದರಲ್ಲಿ ಸ್ವಾಮಿಗಳ ಅಭಿಪ್ರಾಯ ನೋಡಿದೆ. ನಿಮ್ಮ ವಿಚಾರವನ್ನು ಅವರು ಅಲ್ಲಗಳೆಯುತ್ತ "ಬಸವಣ್ಣನವರು ಇಷ್ಟಲಿಂಗದ ಆವಿಷ್ಕರ್ತರಲ್ಲ. ಮಹಾ ಅಂದರೆ ಕಂಥೆಯನ್ನು ಕೊಟ್ಟಿರಬೇಕು. ಇದನ್ನೇನು ಒಬ್ಬ ಕಂಥೆಯ ಅಯ್ಯನವರೂ ಕೊಡಬಹುದು." ಇದಕ್ಕೆ ನಿಮ್ಮ ಅಭಿಪ್ರಾಯವೇನು?

* ಅದನ್ನೇ ನಾವು ಸಾರುತ್ತಾ ಬಂದಿರುವುದು. ಸ್ಥಾವರಲಿಂಗವು ಮೊದಲೇ ಇತ್ತು. ಅದು ದೇವತಾ ಶಿವನ ಪ್ರತೀಕವಾಗಿ ಪೂಜಿಸಲ್ಪಡುತ್ತಿತ್ತು, ಅದರ ಗಾತ್ರ ಕಿರಿದುಗೊಳಿಸಿ, ತನ್ನ ಆತ್ಮದ ಸಂಕೇತ (ಶಾಂಭವೀ ಮುದ್ರೆಯಾಕಾರದಲ್ಲಿ) ವಾಗಿ ಮಾಡಿ, ಮೇಲೆ ಬ್ರಹ್ಮಾಂಡದ ಆಕಾರದ ಕಂಥೆ ಹೊದಿಸಿ ಅದನ್ನು

ವಿಶ್ವಾತ್ಮನ ಸಂಕೇತವಾಗಿ ಮಾಡಿ, ದೇವನಲ್ಲಿ ಜೀವನಿದ್ದಾನೆ, ಬ್ರಹ್ಮಾಂಡದಲ್ಲಿ ಪಿಂಡಾಂಡವಿದೆ ಎಂಬ ತತ್ತ್ವ ಹುದುಗಿಸಿ, ಕೇವಲ ಭಕ್ತಿಯೋಗಕ್ಕೆ ಮಾತ್ರವೇ ಅಲ್ಲದೆ ದೃಷ್ಟಿಯೋಗಕ್ಕೂ ಅದನ್ನು ಅನುಗೊಳಿಸಿ ಹೀಗೆ "ಪ್ರಾಣಲಿಂಗದ ಪೂರ್ವಾಶ್ರಯವ ಕಳೆದ" ವ್ಯಕ್ತಿ ಬಸವಣ್ಣನವರು. ಕಂಥೆಯ ಕಲ್ಪನೆ ಅವರ ವಿಶೇಷ ಕೊಡುಗೆ. ಈಗ ಕಂಥೆ ಅಯ್ಯನವರೂ ಮಾಡಬಹುದು, ನಾಳೆ ಕಂಥೆಯ ಕಾರ್ಖಾನೆಯೇ ಆಗಬಹುದು. ಆದರೆ ಮೂಲ ಕಲ್ಪನೆ ಕೊಟ್ಟುದು ಬಹು ದೊಡ್ಡ ಸಂಶೋಧನೆ, ಕೊಡುಗೆ ಅಲ್ಲವೆ? ಈ ಹೊತ್ತು ಗಡಿಯಾರವನ್ನು ಅನೇಕರು ತಯಾರಿಸಬಹುದು, ಹಾದಿಬೀದಿಯಲ್ಲಿ ರಿಪೇರಿ ಮಾಡುವವರು ಸಿಗಬಹುದು. ಆದರೆ ಗಡಿಯಾರದ ಕಲ್ಪನೆ ಕೊಟ್ಟ ಮೂಲಜನಕನ ಸ್ಥಾನ ಬೇರಾರಿಗಾದರೂ ದೊರತೀತೆ?

ಪೂಜ್ಯ ಮಾತಾಜಿಯವರ ಅಮೆರಿಕಾ ಪ್ರವಾಸಕ್ಕಾಗಿ ಧನ ಸಹಾಯ ಮಾಡಿದ ಶರಣ ವೃಂದ

1.	ನಾಗನೂರ ಮಠಾಧೀಶರಾದ ಪೂಜ್ಯ ಶ್ರೀ ಮ. ನಿ. ಪ್ರ. ಶಿವಬಸವಸ್ವಾಮಿಗಳು, ಬೆಳಗಾಂವ	...	400	00
2.	ಶ್ರೀ ಡಿ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿಗಳು, ಧರ್ಮಸ್ಥಳ	...	1000	00
3.	ಶ್ರೀಮತಿ ಬಸವರಾಜೇಶ್ವರಿ ಸಭಾಧ್ಯಕ್ಷೆ, ವಿಧಾನ ಪರಿಷತ್ತು	...	1001	00
4.	ಶ್ರೀ ಜಿ. ಎಂ. ಹಾಲಪ್ಪನವರು, ದಾವಣಗೆರೆ	...	1001	00
5.	ಶ್ರೀಮತಿ ಜಗದಾಂಬಾ ವಿಶ್ವೇಶ್ವರಯ್ಯ, ತುಮಕೂರು	...	1008	00
6.	ಡಾ॥ ಲಲಿತಾ ಗುರುಬಸವಯ್ಯ, ಬೆಂಗಳೂರು	...	1001	00
7.	ಶ್ರೀ ಐ.ಎಂ. ಮಗ್ದುಂ, ನಿವೃತ ಪ್ರಧಾನ ಇಂಜಿನಿಯರ್, ಬೆಂಗಳೂರು	....	1001	00
8.	ಶ್ರೀ ಎ. ಎಂ. ಬಸವೇ ಗೌಡರು, ಕಾಫಿ ಪ್ಲಾಂಟರ್, ಚಿಕ್ಕಮಗಳೂರು	...	1001	00
9.	ಗುಪ್ತಕಾಣಿಕೆ, ಮಂಗಳೂರು	....	2001	00
10.	ಶ್ರೀ ಬಿ. ಎಸ್. ನಾಯಕ್, ಮಂಗಳೂರು	....	1001	00
11.	ಶ್ರೀಮತಿ ಸರಸ್ವತಮ್ಮ ವಿಶ್ವನಾಥಯ್ಯ, ಬೆಂಗಳೂರು		501	00
12.	ಶ್ರೀ ಪಾಟೀಲರು, ಲೋಟಸ್ ಪ್ರಿಂಟರ್ಸ್, ಬೆಂಗಳೂರು-10	...	502	00
13.	ಶ್ರೀ ಮೆ. ಗಂಗಾಧರ ಸಂಗಪ್ಪಾ ಗಿರಿಗೌಡ, ಬೆಳಗಾಂವ		501	00
14.	ಶ್ರೀ ಜಿ. ಕೆ. ದಿವೇಕರ್, ಶಿವಮೊಗ್ಗ	...	500	00
15.	ಶ್ರೀ ಎಂ. ಪಿ. ಮಲ್ಲೇಗೌಡ, ಗುರುದರ್ಶಿನಿ ಎಸ್ಟೇಟ್, ಅರಸೀಕೆರೆ	...	500	00
16.	ಕರ್ನಾಟಕ ವಿದ್ಯುಚ್ಛಕ್ತಿ ಇಲಾಖೆ ನೌಕರರ ವತಿಯಿಂದ ಬೆಂಗಳೂರು	...	1001	00
17.	ಶ್ರೀಮತಿ ವನಜಾಕ್ಷಮ್ಮ ಓಂಕಾರಸ್ವಾಮಿ	....	501	00

ಮೇಲಿನ ಶರಣರಲ್ಲದೆ ಇನ್ನು ಅನೇಕ ಭಕ್ತರು ಧರ್ಮ ಪ್ರಚಾರರ ಮಹತ್ವವನ್ನು ಅರಿತು ಪ್ರತ್ಯಕ್ಷ ಅಪ್ರತ್ಯಕ್ಷವಾಗಿ ತಮ್ಮ ಭಕ್ತಿ ಶಕ್ತ್ಯಾನುಸಾರ ಕೊಟ್ಟ ಕೊಡುಗೆಗಳನ್ನು ಅತ್ಯಂತ ಕೃತಜ್ಞತೆಯಿಂದ ವಿಶ್ವಾಸ ಪೂರ್ವಕವಾಗಿ ಸ್ವೀಕರಿಸಿ, ವಿಶ್ವಗುರು ಮಂತ್ರ ಪುರುಷ ಬಸವೇಶ್ವರರು ಸರ್ವರಿಗೆ ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ದಯಪಾಲಿಸಲೆಂದು ಹಾರೈಸುತ್ತೇವೆ.

ವಿಶ್ವ ಕಲ್ಯಾಣ ಮಿಷನ್,
ಬೆಂಗಳೂರು-10.

ಭಕ್ತನ ಮನ ಹೆಣ್ಣಿನೊಳಗಾದಡೆ, ವಿವಾಹವಾಗಿ ಕೂಡುವುದು,
ಭಕ್ತನ ಮನ ಮಣ್ಣಿನೊಳಗಾದಡೆ, ಕೊಂಡು ಆಲಯವ ಮಾಡುವುದು;
ಭಕ್ತನ ಮನ ಹೊನ್ನಿನೊಳಗಾದಡೆ, ಬಳಲಿ ದೊರಕಿಸುವುದು.

ಶಿಕ್ಷಕರ ಕಾಯಕಕ್ಕೆ ಅರ್ಜಿ

ಬೆಂಗಳೂರು ದಕ್ಷಿಣ ತಾಲ್ಲೋಕು, ಕುಂಬಳಗೋಡು, ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ "ಶ್ರೀ ಬಸವಭಾರತಿ ವಿದ್ಯಾಲಯದಲ್ಲಿ" (Residential school) ಶಿಕ್ಷಕರಾಗಿ ಕಾಯಕ ಮಾಡಲು ಅವಕಾಶಗಳಿವೆ. ಆಸಕ್ತಿ ಇದ್ದ ಸ್ತ್ರೀ-ಪುರುಷರು ಅರ್ಜಿ ಸಲ್ಲಿಸಬಹುದು.

ಇಂಗ್ಲೀಷ್, ಕನ್ನಡ, ಹಿಂದಿ, ಗಣಿತ, ವಿಜ್ಞಾನ, ಸಮಾಜಶಾಸ್ತ್ರ ಕಲಿಸಲು ಬಿ.ಎ.,ಬಿ.ಎಡ್, ಮತ್ತು ಬಿ.ಎಸ್‌ಸಿ.,ಬಿ.ಎಡ್. ಪಾಸಾದವರು ೧೯೮೧ ಜನವರಿ ೨೫ ರೊಳಗಾಗಿ ಅರ್ಜಿಸಲ್ಲಿಸಬೇಕು.

ನಿಯಮಗಳು

1) ಜಾತಿಯ ನಿರ್ಬಂಧವಿಲ್ಲ. ಹರಿಜನ-ಗಿರಿಜನರಿಗೆ ಮೀಸಲು ಸ್ಥಾನವುಂಟು.
2) ಶಿಕ್ಷಕರು ಶಾಲೆಯ ಕ್ಯಾಂಪಸದಲ್ಲಿಯೇ ಇರಬೇಕು. ವಿವಾಹಿತರು ಹೊರಗೆ ಇದ್ದು ಶಾಲೆಗೆ ಬಂದು ಹೋಗಬೇಕು.
3) ಮಕ್ಕಳ ಬೆಳವಣಿಗೆಯಲ್ಲಿ ಆಸಕ್ತಿ-ಕಳಕಳಿ ಇರಬೇಕು.
4) ಬೀಡಿ-ಸಿಗರೇಟ್, ಕುಡಿತ ಮುಂತಾದ ಯಾವುದೇ ದುಶ್ಚಟವಿರಬಾರದು.
5) ಧರ್ಮದಲ್ಲಿ ಆಸಕ್ತಿ ಇರುವ ಸಾಧಕ-ಸಾಧಕಿಯರಿಗೆ ವಿಶೇಷ ಸದವಕಾಶವುಂಟು.

ಅಧ್ಯಕ್ಷರು
ವಿಶ್ವಕಲ್ಯಾಣ ಮಿಷನ್ ವಿದ್ಯಾಸಂಸ್ಥೆ,
ಬಸವ ಮಂಟಪ, ಕಾರ್ಡ್ ರೋಡ್, 2ನೇ ಬ್ಲಾಕ್
ರಾಜಾಜಿನಗರ ಬೆಂಗಳೂರು-560 010

ದೂರವಾಣಿ :
82335

ಕಾಯಕವೇ ಕೈಲಾಸ
ದಾಸೋಹವೇ ದೇವಧಾಮ

THIRD CONFERENCE OF V.S.N.A.

Dr. G. S. Kori
President V.S.N.A.
Burke, Virginia

A golden oppurtunity awaited for us this year to welcome and to hear Her Holiness Jagadguru Mate Mahadevi, a great religious leader and a beacon light in the religious firmament of India. So, the third conference of V. S. N. A. had attracted many delegates from different parts of U. S. A. as well as Canada. The place of conference was Saddlebrook elementary school, in Layhill road of Maryland, a suburb of Washington– the capital city of U. S. A.

Delegates from New-york, Washington, Virginia. Losangeles, Illinois, Pittsberg, Detroit, Chicago, Toronto, Columbus and some other states were getting into the conference hall with greater enthusiasm and eagerness to welcome Mataji. They were accompanied by their family too. Prior to the invocation, delegates registered their names and got renewed membership for the incoming year.

The conference started by offering a devotional worship to the pictures of Lord Shiva and Lord Basava. Her Holiness Mataji sang a beautiful 'mangala' in her melodius tone, which filled the air with a devotional, serene and thrilling atmosphere. All got up and paying their respect occupied their seats.

The programme started with Bhajans sung by Mrs. Vimala Channabasappa, Mrs. Kanta Kori and Mrs. Girija Suresh Kori, Mr. Guruswami Ayya and Mr, Hiremath gave a good chorus to the Bhajan. Dr. Rajashekhar, the convenor of the programme read out the programme list.

Being the President of V.S.N.A. promotor, and organizer of the conference, I welcomed Her Holiness Jagadguru Mate Mahadevi, on behalf of V. S. N. A, to our 3rd conference as well as to U.S.A. My welcome speech, to put it in a nutshell, runs as follows, "Respectful Mataji and dear participants of this conference, today we are extremely happy to welcome Her Holiness Jagadguru Mate Mahadevi, the first women Jagadguru and a great religious leader of India. Her visit with Veerasaivas in the United States is something comparable to His Holiness, Pope John Paul's visit to the Catholics in the United States. So let us all join together to extend Her Holiness a very warm welcome at this conference.

This year we wanted to have a distinguished guest from Bharata, who is able to give us a rousing call and Inspiration on to march in the organising task. At that time was suggested Her Holiness Mataji's name by some of my brothren who had heard her englightening lectures either in Bharata or in Britain, which she visited in 1976. Many of our executive committee members too recommended her name. So we gave a movement to the idea of inviting her.

Fortunately, she occepted our invitation. And we made necessary arrangements to get her in here in time. Even after, the complications that were involved in getting her were many. We thought that it was quite easy to send a sponsorship for her to come as a visitor. Our distinguished guest was not an ordinary person in Bharata. So, the state department of U.S.A. and consulate of America asked for her security and declaration under H-1 petetion by sponsoring authority. Later on they asked for political clearance. Most of these problems were resolved with the help of top ranking officials such as, Secretary of State Mr. Muskie and others. Anyhow we are really happy for having Mataji with us.

I do not like to stand in between Mataji and you, anymore. But as to fulfill a formality I would like to give a brief introduction of her life and her achievements. At the very young age accomplishments of hers are many. "Though young in years she carries on her shoulders the wisdom of the ages." exclaims everybody who has met her and listened discourses and speeches. Besides being a writer of genius she is a sound scholar, a mystic and an eloquent speaker with revolutionary ideas. She is perhaps the first woman in history who has ascended the pontifical seat of a Jagadguru, so far reserved for men. Being a devoted student of Vacana literature, she has made a special study of Basava's principles and teaching and has given a lucid exposition to them in her writings and speeches.

She was born on 13th March, 1946, her perents being Late Dr. S. R. Basappa and Smt. Gangamma of a holy place Chitradurga. Of course Chitradurga now has become an internationally known place. She was named as Ratna, the gem. Precocious genius that she was, most of her talents, including her aptitude for literature, bloomed at an early age. However she evinced a special liking for things spiritual quite early in her teen years, and developed a keen interest in the study of books and acquisition of knowledge. After her graduation in science she took up to the ascetic life. When she was aspiring for Guru's grace, she met as though by divine will, the reverend Lingananda Swamiji and was initiated on 21st August 1965 into this spiritual path. Once again she took from him the Sanyasa, the oath of asceticism on 5th April 1966. She became a postgraduate in philosophy from Karnatak University. She has written more than forty books which range from scholarly philosophical treatise to children series, from lyrics to novels. To add to her genius and credit, she is running a monthly magazine. At the age of twenty she wrote such a scholarly work like Basava Tatwa Darshan of 800 pages. She

has written a social novel which won State Academy's prize for 1975. She has written another novel entitled Tarangini, "The River" which depicts the entire life of Saint Akkamahadevi and it has won the Amminabhavi Smaraka award of Dharwar.

People of all grades, of all mental equipments from learned pandits to ordinary unschooled men and women are moved and fascinated by her discourses and talks. Her lectures are enriched with profound thoughts and logical reasoning. She masterly exposes the religion as a penacea for all the ills of modern life, which bring comfort and peace to disturbed minds. According to her, religion is not a mere pile of blind customs and worthless superstitions. She re-evaluates the ancient values of religion in the light of modern thought and belief. Thus, she is a great woman, actively dedicated to the service of God, carrying on the mission of God with unparelleled zeal and devotion, actuated by lofty ideal of bringing about cultural unity and religious harmony among the various nations of the world that follow different religions.

I extend my warm welcome to Pujya Mataji. Now you will have the Privilege of hearing her. Your Holiness Mataji, I request you to deliver the inaugural address and also inaugurate our conference. Thank you very much."

Then followed Mataji's lecture. She started her prayer with Omkara and Shantih mantrah. Paying respect first to Lord Basava, she uttered slokas from Upanishads. The utterance of Omkara in her metallic but melodius voice calmed down our minds and converged our attention entirely on her lecture. She sang some bhajans and we joined the chorus. Her next song, "Filling the platter of my heart" attracted all of us.

In her lecture that went on for more than an hour and ten minutes, she dealt with many issues. She dealt with the need for religion in this modern age of Science and technology. On the basis of quality and quantity of consciousness. Classifying the whole world into four categories such as kingdom of matter, vegetation, animals and human kind, she told that man is in rational plane if matter, vegetation and animals are on inorganic, organic and instinctive planes respectively. Man, who is in rational stage has still to achieve spiritual plane. Man being a rational being has to move towards spiritual evolution by conscious effort.

Spiritual Bliss, which is the highest type of happiness one can get through spiritual disciplines like worship, prayer and meditation is the most permanent kind of happiness. In these days of mental tension and depression spiritual pleasure is very necessary. Meditation which is the royal path to acquire spiritual pleasure is also the best medicine to relax the mind. Some people to forget painful experiences of their lives take refuge in alcoholic drinks, sleeping tablets and other such sedatives. But these things introduce into man a deceptive kind of happiness, which makes him unhealthy and dull. On the contrary, meditation introduces, courage to face life ; for it is not a vulgar means of dulling pain and sufferings but is a science of creative intelligence."

Stressing the importance of knowing one's own religion, she said, Unless we know the fundamental tenets of our religion, we will not be able to practice them in our life. Secondly, it is possible to convince others especially your own children only if you have a good knowledge of it.

She referred about Lingayatism saying that it is not a creed, a caste nor a sect but it is an independent religion, by virtue of having a well defined constitution with eleven

articles a religion should have. She told that Lingayatism declares all as equal by birth and provides religious initiation to one and all irrespective of caste, class, creed and sex.

She explained her idea of Hinduism and differed from those who call Lingayats as non-Hindus. According to her, Hinduism is a community of many religions and can be compared to the sea of many rivers, a garland of many flowers, and a garden of many trees. Different religions of Hinduism though they have their own following groups and constitutions still come under Hinduism by virtue of being started by Indian prophets. Lingayatism without losing its individuality exists in the Hindu fold.

Second part of her lecture consisted of fundamental tenets of Lingayatism. She dealt with the concept of God, belief in soul and rebirth, Lingayat weltansauung, concept of Istalinga, and Panchacharas or five socio-ethical codes of conduct. Dealing with concept of God she said :

"Lingayatism is fundamentally a theistic religion. Though very rational in its approach it believes in Creator-God, in His grace and Divine revelation. God, in the Lingayat philosophical system is not an uninvited guest, but the Part and Parcel, Warp and Woof of the entire structure.

God, technically called Linga or Parasiva is qualified by 'Shakti,' cosmic energy. This cosmic and creative energy is instrinsically related with God, being inseparable from Him. It is His very nature, like moon and moon-light, Sun and sun-light. God is both the efficient and material cause of this universe. Just like a spider, spinning a web with the help of its salivary juice becomes both the efficient and meterial cause for that web, God 'weaves' this world with the help of His own Creative Energy.

Existence of 'Soul' and Rebirth

Lingayatism belives in the existence of Psychic being or the individual soul. Like an effulgent fire hidden in water, like the fragrance of flower hidden in a bud, like the flavour hidden in the sap of a tender plant, like maiden's love, God exists in the soul of man in unmanifested form. It is this Soul who is the Knower, Actor, enjoyer and driving force in the human body. This soul establishes a continuity between three stages of mind, Jagra, Swapna and Sushupti and three stages of life childhood, youth and old age. It even establishes continuity among different births.

The concept of soul is necessarily related with the concept of rebirth. According to the theory of rebirth, the soul has to take numerous births depending upon the deeds done in past lives. The soul does not die with the death of the body but continues in cycles of birth and death. This Karma Siddhanta, in a way puts forward the theory of freedom of action and freedom of will stating that whatever man sows he shall reap. Likewise whatever actions he does he has to enjoy the fruits of it. Each life is a fruit of the preceding birth and a seed for the succeding birth. This chain continues until the individual takes up spiritual sadhana. Only God is free from the bondages of Karma and he is called as the Karmadhyaksha. It is only through His grace it is possible to counteract the effect of Karma.

The Lingayat religion preaches a weltanschauung of world and life-affirmation. Neither the world nor the daily round is treated as a hindrance to the achievement of salvation. This world is compared to the Creator's mint, and is addressed as the vale of soul-making. To corroborate this statement we can quote ;

"This mortal world is but the Maker's mint.
Those who succeed here, succeed also there ;
And those who succed not here, succeed neither there
O, Kudala Sangama lord !

Istalinga

The most significant and highly characteristic emblem among the Astavarana is the Istalinga. One must notice in it a glorious concept of shaping the God-head in the form of the universe and worshipping it. The convention of grasping what is formless through form is found both in the spiritual and in the physical realms. We have a concrete watch to know the abstract time, even so, for realising the abstract Godhead, the Istalinga is the concrete symbol. It is not the form of any persons or animal, nor does it represent a Sthavara Linga in the temple, nor the mythological Siva. Since the macrocosm, which is the body of all pervasive God is globular in shape, the Istalinga shaped in that form. It has a wide connotation-philosophical, social, yogic, scientific and spiritual. Since it has a black but shining cover, it serves as a useful means in Dristiyoga or Tratakayoga. The black in the eye ball, and the black of the Istalinga's cover mutually attract. This attraction soon brings the fickle eyes to a one pointed gaze and steadies the unsteady mind.

Five socio-ethical codes of conduct.

Panchacharas are five socio-ethical codes of conduct profounded by Lord Basava. By virtue of preaching these, he made his Faith, a national religion as well as a universal religion. He means, 'An Individual is not a seperate entity in himself but he is to work as the part and parcel of the society'. If we take an example of the solar system we realise one point. Every planet including the earth while revolving on its own axis revolves round in the solar orbit. The earth if forgets either to revolve round its own axis or in the solar orbit,

there will be an utter chaos. Likewise every individual has to think about the world around him. This world is a great gift of God and man is entitled to utilise this great treasure. When it is so, it is his bounden duty to maintain it properly according to the satisfaction of this Divine will.

The five socio-ethical codes of conduct are :

(1) Lingachara (2) Sadachara (3) Shivachara (4) Ganachara and (5) Brityachara. These words are sheathed in technical terminology of Lingayat religion and hence need an explanation.

(1) Lingachara means cosistent monotheism, Belief in one only God and worshipping Him in only form. Lingayatism, essentially being theistic religion preaches a staunch faith in the existence of absolute reality, God. It clearly says that the creator of this world is one and it is a heinous sin to believe in the existence of many gods.

Sadachara or economic equality is the second principle of 5 acharas. This preaches a unique theory of earning money through honest means and utilising it for the welfare of society, after satisfying his fundamental necessities of life. The essence of this principle consists of two formulae (1) Kayakave Kailasa (work itself is the Bliss Divine) and Dasohave Devadhama (Service itself is abode of God) The first one preaches the theory of production and the second one the theory of utilisation.

Shivachara is the doctrine wich preaches social equality. All human beings are children of God. Hence there should be no room for caste or colour barriers in the human race. This doctrine also preaches religious democracy. It admits that every human being irrespective of caste, colour, and sex. has a right to obtain deliverance through initiation and through Guru's grace.

The zeal to build up the kingdom of God on earth, after fighting out evils both external and internal, with self confidence is Ganacara. To conquer, with the weapon of patience and perseverance, wickedness by goodness, violence by non-violence, hatred by love is Ganacara. It does not denote cruelty but courage. It implies a sincere concern for mending society, with valour coupled with modesty.

Brutyachara means the sincere serving spirit. Society which serves the larger interests common to all the individuals is more esteemed than the individual. Therefore, an individual must work for the welfare of the society and the nation with modesty and humility, thinking that he is a servent of the society which in turn is the master of him.

Kingdom of God on earth

Before concluding this part of her lecture Mataji dealt with the aim of Lingayat religion as well as Basava's philosophy Quoting the Vacana uttered by Basava,

Don't make me hear all day
'Whose man, whose man, whose man is this?'
Let me hear, 'This man is mine, mine, this man is mine'.
O Lord of the meeting rivers,
Make me feel I am a son of thy house.

Mataji said it is the goal of Lingayatism to establish the Kingdom of God on earth. One must ever strive hard to turn this mortal world into the kingdom of God. Every citizen of the world must have the lofty goal of accomplishing self-realisation, the welfare of the society, the nation and the world, and strive to establish the kingdom of God on earth itself and be qualified for the grace of God.

The last and concluding part of her lecture gave us some practical advice and reminded us of our responsibilities,

Mataji insisted on our responsibility of retaining our culture. She said, "You have a great and noble cultural heritage behind you. Your cultural heritage consists of two main streams: one of Hindu culture and the other of Sarana tradition flowing since twelfth. Wherever we be we should not leave it away."

Devices she suggested to retain our culture are

1. Holding conferences yearly once or twice.
2. Conducting family prayers daily in one's own house.
3. Reading religious scriptures daily as a part of life's routine.
4. Training up children and feeding them with necessary religious ideas.
5. Celebrating religious festivals and birthdays of Hindu Saints.
6. Celebrating Shivaratri and Basava Jayanthi.
7. Running residential schools to inculcate in childen Hindu values of life.
8. Couducting yearly retreats to give the followers an intensive religious coaching.
9. To adopt a kind of missionary zeal which helps in practising once own religion and to share the greatness and fruitfulness of it with others.
10. The missionary zeal implemented in following one's own religion need not confine him to any set of dogmas, or to any sect. One can become a genuine follower of

religion as well as a patroit of the country which he belongs. Religion in any way should not come in the way of loyalty to his nation. So there should not be or need not be any conflict between one's personal belief and his patriotism. Through

religious commitment one must aim to establish a kind of universal brotherhood.

Expressing thankfulness for creating her an oppurtunity, to meet us, Mataji ended her inaugural talk. She also released a book "Omkara" a collection of songs edited by Mrs' Vimala-Channabasappa and spoke about the meaning of "Omkara" for ten minutes.

Her lecture was very impressive and all were impressed and inspired to hear her fluent tongue, and thoughtful narration. Her art of presenting things, logical consistency in explaining them, and her motherly affection in creating curiosity about religion in us, are tremendous. We sat spell bound and nobody knew that we had spent more than an hour and ten minutes in hearing her.

With greatefulness I served her vote of thanks for taking so much of pain to cover a long distance and to speak to us.

After the coffee break for fifteen minutes the congregation once again came together to hear Dr. K. Iswaran, Prof of Sociology at York University, Toronto,Canada.Dr.K. Iswaran is a profound scholar who knows the depth and uniqueness of Lingayat religion. He enlightened the audience on many issues like its antiquity, development and the urge behind the starting of this movement by Basava. He clearly presented the theory that Lingayatism is founded by Basava and it is wrongly told that it has been started by somebody else long long ago. The fact that Basava humbly says, 'Don't call me the Primal Guru, Dharma Bhandari. I am only a servant in this great house of God' and other Saranas praising him has the First Guru proves that he is the Primordial Guru.' Dr. Iswaran staying in this country since many decades discussed many problems faced by Hindu immigrants in retaining their culture. H. Siddhalingayya, gave a brief introduction of Dr.K. Iswaran. After his key note address there were plenary

sessions which discussed both religious and social aspects of Virasaivas in North America. Dr. S. V. Hulbanni of Detroit and Dr. S. M. Desai of Rosslyn talked about these issues respectively as chair persons. They fundamentally discussed about the problem of coming generation going astray from Indian culture, Hindu values of life and Lingayat mod of living. How to make them realise the greatness of Hindu culture and how to make them have zeal to retain this heritage? Many suggestions were given. Mr. Ayya said that there is a great necessity to open Hindu religious organisations to teach the younger generation about Hinduism.

An entertainment programme was arranged in the conference Smt. Vimala Channabaspppa sang two Vacanas in her melodious tune. Mrs. Uma Ettigi played on veena wonderfully. Her performance, which included Vatapi Ganapate, Himagiri Tanaye and a Vacana, was extremely good. Mrs. Saroja Desai's singing of Vacana was very classical and melodious. Sweet little girl of eight years, Miss. Apsara daughter of Jayashivamurthy displayed a dance piece Sathyam-Shivam-Sundaram which fascinated everybody. She has already given many performances in T. V. Smt. Gouramma Channarasappa sang a folk-song which pleased many audience. The conference as its last item had an extremely interesting Yoga demonstration by Sister Kumuda, assistant of Her Holiness Mataji. Sister Kumuda is well versed in performing yogasanas. Her performance was appreciated by one and all including Children and youngsters who watched the demonstration with greater curiosity.

The conference ended with Mahamangalarati followed by dinner. Though it was conducted for only one day, the deliberations had a greater singnificance, the impact of which will determine the programmes for the years to come. Participants carried with them much to think, more to act, as well as much more to impliment.

★

ಪಾಲಕರಿಗೆ ಸೂಚನೆ

"ಬಸವ ಭಾರತಿ" ವಿದ್ಯಾಲಯವು ತನ್ನ ಐದು ಆರು ಮತ್ತು ಎಂಟನೆಯ ತರಗತಿಯೊಡನೆ ಪ್ರಾರಂಭವಾಗಿದೆ. ಆಂಗ್ಲ ಮತ್ತು ಕನ್ನಡ ಮಾಧ್ಯಮಗಳೆರಡರಲ್ಲೂ ಶಿಕ್ಷಣವು ಲಭ್ಯವಿದೆ. ಬಸವ ಭಾರತಿ ವಿದ್ಯಾಲಯ ವಸತಿ ಸಹಿತ (Residential) ಶಾಲೆ ಇದ್ದು ಇಲ್ಲಿ ಮಕ್ಕಳಿಗೆ ಶುಚಿಯಾದ ವಾತಾವರಣ, ಪ್ರಶಾಂತ ಪರಿಸರ, ರುಚಿಯಾದ ಊಟ, ಉತ್ತಮ ರೀತಿಯ ಶಿಕ್ಷಣವನ್ನು ಕೊಡಲಾಗುತ್ತಿದೆ. ದೈಹಿಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ಮುಂತಾಗಿ ಸರ್ವತೋಮುಖ ಬೆಳವಣಿಗೆಗೆ ಅವಕಾಶ ನೀಡಲ್ಲಾಗುತ್ತಿದೆ.

೧೯೭೯-೮೦-೮೧ನೇ ಸಾಲಿಗೆ ಐದು, ಆರು ಮತ್ತು ಎಂಟನೆಯ ತರಗತಿಯು ಆರಂಭವಾಗಿದ್ದು, ೧೯೮೧-೮೨ರ ಸಾಲಿಗೆ ೭ ಮತ್ತು ೯ನೇ ತರಗತಿಗಳು ಆರಂಭವಾಗಲಿವೆ.

ಈ ಎಲ್ಲ ತರಗತಿಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳೆರಡೂ ಇದ್ದು, ಪ್ರವೇಶಾವಕಾಶ ಲಭ್ಯವಾಗಿರುತ್ತವೆ.

ಆದ್ದರಿಂದ ೧೯೮೧ ಮೇ ೨೨ ರಂದು ತೆರೆಯಲ್ಪಡುವ ಐದು, ಆರು, ಏಳು, ಎಂಟು ಮತ್ತು ಒಂಭತ್ತನೆ ತರಗತಿಗಳಿಗೆ (ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ) ಮಕ್ಕಳನ್ನು ಸೇರಿಸಬಯಸುವ ಪಾಲಕರು ಏಪ್ರಿಲ್ ೩೦ ರೊಳಗೆ ೫ ರೂ. ಕಳಿಸಿ ಪ್ರಾಸ್ಪೆಕ್ಟಸ್ ತರಿಸಿಕೊಳ್ಳಬೇಕು. ಮೇ ೮ನೆಯ ತಾರೀಖಿನೊಳಗೆ ಅರ್ಜಿಗಳನ್ನು ಸಲ್ಲಿಸಬೇಕು. ಆರಿಸಿ, ಸಂದರ್ಶನಕ್ಕೆ ಕರೆದು ಪರೀಕ್ಷೆಗೆ ಒಳಪಡಿಸಲಾಗುವುದು.

ಪ್ರಾಥಮಿಕ ಒಂದರಿಂದ ನಾಲ್ಕರವರೆಗೆ ಕನ್ನಡ ಮಾಧ್ಯಮದಲ್ಲಿ ಓದಿಸಿದ್ದು ವಿಶೇಷ ಕಾರಣಗಳಿಗಾಗಿ ಆಂಗ್ಲ ಮಾಧ್ಯಮ ಬಯಸಿದರೆ ೫ನೇಯ ತರಗತಿಯಿಂದ ೭ನೇ ತರಗತಿಗಳಿಗೆ ವಿಶೇಷ ತರಬೇತಿ ನೀಡಿ, ೮ನೇಯ ತರಗತಿಗಳಿಗೆ ಆಂಗ್ಲ ಮಾಧ್ಯಮವನ್ನು ನೀಡಲಾಗುವುದು. ಅಂಥ ಪಾಲಕರು ಅರ್ಜಿ ಪತ್ರದಲ್ಲಿ ತಮ್ಮ ಇಚ್ಛೆಯನ್ನು ತಿಳಿಸಬೇಕು.

ಸೆಕ್ರೆಟರಿ
ಬಸವ ಮಂಟಪ, ೩೪,
ಎರಡನೆಯ ಬ್ಲಾಕ್, ಕಾರ್ಡ್‌ರಸ್ತೆ,
ರಾಜಾಜಿನಗರ, ಬೆಂಗಳೂರು–೫೬೦ ೦೧೦
ದೂರವಾಣಿ : 82335.

ಕರೆಸ್ಪಾಂಡೆಂಟ್
"ಬಸವಭಾರತಿ ವಿದ್ಯಾಲಯ"
"ಬಸವ ಗಂಗೋತ್ರಿ"
ಕುಂಬಳಗೋಡು,
ಹೋ : ಕೆಂಗೇರಿ. ತಾ. ಬೆಂಗಳೂರು
ದೂರವಾಣಿ : 34

ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ವರದಿ : ಜಿ. ಮಹಾದೇವಸ್ವಾಮಿ

ಪೂಜ್ಯ ಮಾತೆ ವಾಗ್ದೇವಿಯವರಿಂದ ಹಾವೇರಿಯಲ್ಲಿ ಪ್ರವಚನ ಕಾರ್ಯಕ್ರಮ

ಪರಮ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಕರಕಮಲ ಸಂಜಾತರಾದ ಪೂಜ್ಯ ಶ್ರೀ ಮಾತೆ ವಾಗ್ದೇವಿಯವರು ಸೋಮವಾರ ತಾ|| 27-10-80 ರಿಂದ ಹಾವೇರಿನಗರದಲ್ಲಿ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ಪ್ರವಚನವನ್ನು ಆರಂಭಿಸಿದರು. ಜನರು ಅಪಾರ ಸಂಖ್ಯೆಯಲ್ಲಿ ನೆರೆಯ ತೊಡಗಿ ಪ್ರವಚನವು ಅವ್ಯಾಹತವಾಗಿ 48 ದಿವಸಗಳ ಕಾಲ ನಡೆದ ಬಳಿಕ ತಾ|| 14-12-80 ರಂದು ಮುಕ್ತಾಯ ಸಮಾರಂಭ ನಡೆಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಹಾವೇರಿಯ ತಹಶೀಲದಾರ ಶ್ರೀ ಎನ್. ನಂಜುಂಡಯ್ಯನವರು ಮಾತನಾಡುತ್ತಾ, ಶ್ರೀ ಮಾತೆ ವಾಗ್ದೇವಿಯವರ ಭೌತಿಕ ತ್ಯಾಗ ಮೆಚ್ಚತಕ್ಕದ್ದು. ಅವರು ತಮ್ಮ ಕಿರಿಯ ವಯಸ್ಸಿನಲ್ಲಿಯೇ ಅಗಾಧ ಪಾಂಡಿತ್ಯವನ್ನು ಪಡೆದು ತಮ್ಮ ನಿರರ್ಗಳವಾದ ಕಂಚಿನ ವಾಣಿಯಿಂದ ಜನರ ಮನದಲ್ಲಿ ದೈವೀಪ್ರಜ್ಞೆಯನ್ನು ಅಚ್ಚೊತ್ತುವಂತೆ ಮಾಡುತ್ತಿರುವುದನ್ನು ನೋಡಿದರೆ ಅವರಿಗೆ ಸರಸ್ವತಿಯ ಕೃಪಾಕಟಾಕ್ಷ ಪೂರ್ಣವಾಗಿ ಆಗಿದೆ ಎಂದು ಹೇಳಿದರು. ಶ್ರೀ ಶರಣ ಗಂಗಪ್ಪ ಯಡ್ರಾಮಿಯವರು ಮಾತನಾಡುತ್ತಾ, ಪೂಜ್ಯ ಮಾತೆ ವಾಗ್ದೇವಿಯವರ ಪ್ರವಚನ ಹಾವೇರಿಯ ಸದ್ಭಕ್ತರಿಗೆ ಹೊಸ ಸ್ಫೂರ್ತಿಯನ್ನು ನವಚೈತನ್ಯವನ್ನು ತಂದುಕೊಟ್ಟಿದೆ ಎಂದು ಹೇಳಿದರು. ಪೂಜ್ಯ ಮಾತೆ ವಾಗ್ದೇವಿಯವರು ಹಾವೇರಿಯ ನಾಗರಿಕರು ತಮಗೆ ಅರ್ಪಿಸಿದ ಸನ್ಮಾನಕ್ಕೆ ಉತ್ತರವಾಗಿ ಹಾವೇರಿಯ ಭಕ್ತರು ನಿಜವಾಗಿ ಸಹೃದಯಿಗಳು ಧರ್ಮದ ಬಗ್ಗೆ ಉತ್ತಮ ಭಾವನೆಯಿಂದ ಕೂಡಿದ್ದು ಧರ್ಮ ಜಾಗೃತಿಗೊಳಿಸಲು ಕಳಕಳಿಯುಳ್ಳವರಾಗಿದ್ದಾರೆ ಎಂದು ಹೇಳಿದರು. ಶ್ರೀ ಪಂಚಾಕ್ಷರಿ ವಳಸಂಗದ ಇವರಿಂದ ಆಭಾರ ಮನ್ನಣೆಯಾಯಿತು. ಶರಣೆ ವಿಜಯಾದೇವಿಯವರ ಮಂಗಲಗೀತೆಯೊಡನೆ ಕಾರ್ಯಕ್ರಮ ಮಂಗಲಗೊಂಡಿತು. ಇಂದು ಪೂಜ್ಯ ಮಾತೆ ವಾಗ್ದೇವಿಯವರು

ಅಸಂಖ್ಯಾತ ಆಧ್ಯಾತ್ಮ ಜೀವಿಗಳನ್ನು ಪ್ರವಚನದಿಂದ ಆಕರ್ಷಿಸಿದ್ದು ಬ್ಯಾಡಗಿಯಲ್ಲಿ 28-12-80 ರಿಂದ ಪ್ರವಚನ ಪ್ರಾರಂಭಿಸಲಿದ್ದಾರೆ.

ಪೂಜ್ಯ ಮಾತೆ ಗಂಗಾದೇವಿಯವರಿಂದ
ಪ್ರವಚನ ಕಾರ್ಯಕ್ರಮ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಕರಕಮಲ ಸಂಜಾತರಾದ ಪೂಜ್ಯ ಮಾತೆ ಗಂಗಾದೇವಿಯವರು ಬೀದರ್ ಜಿಲ್ಲೆಯಲ್ಲಿ ಪ್ರವಚನ ಕಾರ್ಯಕ್ರಮ ಮುಗಿಸಿ, ಈಗ ಮಹಾರಾಷ್ಟ್ರದ ದೇವಣಿಯಲ್ಲಿ ಪ್ರವಚನ ಮಾಡುತ್ತಾ ಅಪಾರ ಸದ್ಭಕ್ತರನ್ನು ಆಕರ್ಷಿಸಿದ್ದಾರೆ.

ಪೂಜ್ಯ ಶ್ರೀ ದಯಾನಂದ ಸ್ವಾಮಿಗಳವರಿಂದ
ಪ್ರವಚನ ಕಾರ್ಯಕ್ರಮ

ಕಿರಿದಾದ ವಯಸ್ಸಿನಲ್ಲಿಯೇ ಜಂಗಮ ದೀಕ್ಷೆ ಸ್ವೀಕರಿಸಿ ಹಿರಿದಾದ ಸೇವಾವ್ರತ ಕೈಗೊಂಡಿರುವ ಉದಯೋನ್ಮುಖ ಪ್ರತಿಭಾವಂತ ಪ್ರವಚನಕಾರರಾದ ಪೂಜ್ಯ ಶ್ರೀ ದಯಾನಂದ ಸ್ವಾಮೀಜಿಯವರಿಂದ ತಾ|| 1-11-80ನೇ ಶನಿವಾರ ಕನ್ನಡ ರಾಜ್ಯೋತ್ಸವದ ಶುಭದಿನದಂದು 3 ವಾರಗಳ ಕಾಲ ಕೆಂಗೇರಿ ಉಪನಗರದ ಪೇಟೆ ಬಸವೇಶ್ವರಸ್ವಾಮಿ ದೇವಾಲಯದ ಮುಂಭಾಗದಲ್ಲಿ ಪ್ರವಚನ ನಡೆಯಿತು. ಕೆಂಗೇರಿಯ ಸದ್ಭಕ್ತರು ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಪೂಜ್ಯ ಮಾತಾಜಿಯವರಿಗೂ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿದ್ದರು. ಪೂಜ್ಯ ಮಾತಾಜಿಯವರು ಅಲ್ಲಿನ ಭಕ್ತವೃಂದಕ್ಕೆ ಆಶೀರ್ವಚನ ನೀಡುವ ಮೂಲಕ ಕಾರ್ಯಕ್ರಮ ಮಂಗಲಗೊಂಡಿತು. ಪೂಜ್ಯ ದಯಾನಂದ ಸ್ವಾಮೀಜಿಯವರು ಮಂಡ್ಯ ನಗರದಲ್ಲಿ ಸರ್ಕಾರಿ ಜ್ಯೂನಿಯರ್ ಕಾಲೇಜ್ ಮೈದಾನದಲ್ಲಿ ಭಾನುವಾರ ತಾ|| 23-11-80 ರಿಂದ ಪ್ರವಚನ ಪ್ರಾರಂಭಿಸಿದ್ದಾರೆ. ಅಸಂಖ್ಯಾತ ಆಧ್ಯಾತ್ಮ ಜೀವಿಗಳು ದಿನದಿಂದ ದಿನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಚನದಿಂದ ಆಕರ್ಷಿತರಾಗಿದ್ದಾರೆ.

ಸ್ಫುರಣ - ಕಿರಣ

೧. ಹೆಸರಿನ ದಾಖಲಾತಿ.

ಅಮೆರಿಕಾದಿಂದ ಬರಬೇಕಾಗಿದ್ದ ಪಿ. ಟಿ. ಎ. ಅಂದರೆ ಮೊದಲಿಗೇ ಪಾವತಿ ಮಾಡಿದ ಟಿಕೆಟ್ ಮಾಹಿತಿ ಬಗ್ಗೆ ತಿಳಿದು ಬರಲು ಬೆಂಗಳೂರಿನ ಏರ್ ಇಂಡಿಯಾ ಆಫೀಸಿಗೆ ಹೋಗಿದ್ದೆವು. ಸಂದರ್ಶಕರು ಅರ್ಥಾತ್ ವಿಚಾರಣೆ ಮಾಡಲಿಕ್ಕೆ ಬಂದವರು ಮೇಜಿನ ಮೇಲಿದ್ದ ಒಂದು ದಾಖಲಾತಿ ಪುಸ್ತಕದಲ್ಲಿ ತಮ್ಮ ಹೆಸರನ್ನು ಬರೆದು ಕೂತುಕೊಳ್ಳಬೇಕು. ಅವರ ಸರತಿ ಬಂದಾಗ ಅವರನ್ನು ಕರೆಯಲಾಗುವುದು. ನಾನು ಏನನ್ನೋ ಓದಿಕೊಳ್ಳುತ್ತಾ ಅಲ್ಲೇ ಕುಳಿತಿದ್ದಾಗ ಇಬ್ಬರು ವಿದೇಶಿಯರು ಬಂದರು. ಒಬ್ಬ ಟಿಬೆಟನವ, ಮತ್ತೊಬ್ಬ ಯೂರೋಪಿಯನ್ನನಂತೆ ಕಂಡರು. ಅವರು ಬಂದವರು ತಮ್ಮ ಹೆಸರನ್ನು ದಾಖಲೆ ಮಾಡದೆ ಸಂದರ್ಶಕರೊಡನೆ ಕುಳಿತರು. ಆದರೆ ಸ್ವಲ್ಪ ಹೊತ್ತಿನಲ್ಲೇ ಮನಗಂಡರು- ತಮ್ಮ ನಂತರ ಬಂದವರಿಗೂ ಸಂದರ್ಶನಕ್ಕೆ ಕರೆಯಲಾಗಿದೆ. ತಮ್ಮನ್ನು ಕರೆಯುತ್ತಲಿಲ್ಲ. ತನ್ನ ನಂತರ ಬಂದವನನ್ನು ಸಂದರ್ಶಕಿ ಮಾತನಾಡಿಸಿದಾಗ ಇವರು ಸ್ವಲ್ಪ ಆಶ್ಚರ್ಯಗೊಂಡು, “ಅವರಿಗಿಂತ ಮೊದಲಿಗೇ ನಾವು ಬಂದಿದ್ದೇವೆ.” ಎಂದು ಹೇಳಿದರು. ಆಗ ಆಕೆ “ಅದೇನೋ ಸರಿ, ಆದರೆ ಈ ರಿಜಿಸ್ಟರ್‌ನಲ್ಲಿ ನಿಮ್ಮ ಹೆಸರನ್ನು ದಾಖಲೆ ಮಾಡಿದ್ದೀರಾ ?” ಎಂದು ಕೇಳಿದರು. “ಇಲ್ಲ”, ಎಂದರವರು. “ಯಾರು ಮೊದಲು ಬರುತ್ತಾರೆ, ನಂತರ ಬರುತ್ತಾರೆ ಎಂಬುದು ಮುಖ್ಯವಲ್ಲ; ಇಲ್ಲಿ ದಾಖಲೆಯಾಗುವುದು ಮುಖ್ಯ. ನೊಂದಾಯಿಸಲ್ಪಟ್ಟ ಹೆಸರುಗಳನ್ನು ಸರತಿಯ ಮೇಲೆ ಕರೆಯುತ್ತೇವೆ.” ಎಂದಾಗ ಆ ವಿದೇಶಿಯರು ತಮ್ಮ ಹೆಸರನ್ನು ನೊಂದಾಯಿಸಿದರು.

ಇದನ್ನು ಗಮನಿಸುತ್ತಿದ್ದ ನನಗೆ ತಟ್ಟನೆ ಒಂದು ವಿಚಾರ ಸ್ಫುರಿಸಿತು. ಯಾರು ಮೊದಲು ಬಂದರು ಎಂಬುದು ಮುಖ್ಯವಲ್ಲ. ಹೆಸರನ್ನು ಯಾರು ನೊಂದಾಯಿಸಿದ

ರೆಂಬುದು ಮುಖ್ಯ. ಅವರಿಗೆ ಮಾತ್ರ ಸಂದರ್ಶನ. ಅದೇ ರೀತಿ ಯಾವ ವ್ಯಕ್ತಿ ಎಂದು ಹುಟ್ಟಿದ, ಎಷ್ಟು ಹಿರಿಯ ಎಂಬುದು ಮುಖ್ಯವಲ್ಲ; ಅವನಿಗೆ ಎಂದು ಜ್ಞಾನೋದಯ ವಾಯಿತು. ಗುರುಕಾರುಣ್ಯವನ್ನು ಪಡೆದು ಶಿವದರ್ಶನಕ್ಕೆ ಆಸೆ ಪಟ್ಟು, ದೈವೀಪಥದ ದಾಖಲಾತಿ ಪುಸ್ತಕದಲ್ಲಿ ತನ್ನ ಹೆಸರನ್ನು ನೋಂದಾಯಿಸಿದನೇ ಎಂಬುದು ಮುಖ್ಯ. ಅದನ್ನೇ ಚನ್ನಬಸವಣ್ಣನವರು "ಅಜಕೋಟಿ ವರುಷದವರೆಲ್ಲರೂ ಹಿರಿಯರೇ ? ಎಂದು ಕೇಳಿ ದೈವೀಕಾರುಣ್ಯ ....ವಯಸ್ಸು, ಜಾತಿಗಳ ಮೇಲೆ ದೊರೆಯದು ಸಾಧನೆಯ ಮೇಲೆ" ಎಂದು ನುಡಿದುದು.

—ಮಾತಾಜಿ, ವಾಷಿಂಗ್‌ಟನ್ ಕ್ಯಾಂಪ್

೨. ದೃಷ್ಟಿ.

ವಿಮಾನ ಎತ್ತರದಲ್ಲಿ ಹಾರುತ್ತಿರುವಾಗ ಕೆಳಗೆ ದೃಷ್ಟಿ ಹಾಯಿಸಿದಾಗ ಕಾಣುವ ದೃಶ್ಯ ಮನೋಹರವಾದುದು. ಇರುವೆಗಳ ಚಲನವಲನಗಳನ್ನು ನೆನಪಿಗೆ ತರುವ ವಾಹನಗಳ ಸರಿದಾಟ, ಮಾದರಿಗಾಗಿ ವಸ್ತು ಪ್ರದರ್ಶನಗಳಲ್ಲಿ ಜೋಡಿಸಿರುವಂತೆ ಕಾಣುತ್ತಿದ್ದ ಕಟ್ಟಡಗಳ ಸಾಲು ಎಲ್ಲವೂ ಭಿತ್ತಿಯ ಮೇಲೆ ಮೂಡಿಸಿದ ಚಿತ್ರದಂತೆ ತೋರುತ್ತಿತ್ತು. ಸಾಮಾನ್ಯವಾಗಿ ನೆಲದ ಮೇಲೆ ನಿಂತು ನೋಡಿದಾಗ ಅತಿ ಭವ್ಯ ವಾಗಿ ಕಂಗೊಳಿಸುವ ಕಟ್ಟಡಗಳೆಲ್ಲಾ ವಿಮಾನದಲ್ಲಿಂದ ನೋಡಿದಾಗ ಬಹಳ ಚಿಕ್ಕದಾಗಿ ಕಾಣುವುದಲ್ಲಾ....ಎಂದು ವಿಚಾರ ಮಾಡುತ್ತಿದ್ದಾಗ, ಹೀಗೆ ಅನಿಸಿತು. ಮಾನವನೂ ಸಹ ಲೌಕಿಕದಲ್ಲಿದ್ದು ಸಂಸಾರದ ಬಂಧನಕ್ಕೊಳಗಾಗಿದ್ದಾಗ, ಅವನಿಗೆ ತನ್ನ ಸುತ್ತ ಮುತ್ತಲಿನವೇ (ಹೆಂಡತಿ, ಮಕ್ಕಳು, ಮನೆ, ಬಂಧು, ಬಾಂಧವರು) ದೊಡ್ಡ ದಾಗಿ ತೋರಿ, ಅವುಗಳನ್ನೇ ಬಹಳವಾಗಿ ಪ್ರೀತಿಸುವನು. ಆತನೇ ಉತ್ತಮ ವಿಚಾರಗಳ ಉನ್ನತ ನಿಲುವನ್ನು ಪಡೆದು ಶ್ರೇಷ್ಠ ವ್ಯಕ್ತಿಗಳ ಸಾಲಿನಲ್ಲಿ ನಿಂತಾಗ, ಲೌಕಿಕವಾದ ಆಸೆ-ಆಕಾಂಕ್ಷೆ, ಎಲ್ಲವೂ ತೀರಾ ಕ್ಷುಲ್ಲಕವಾಗಿ ತೋರುವುದಲ್ಲದೆ, ಈ ಭೂಮವಾದ ಜಗತ್ತಿನಲ್ಲಿ ಅವುಗಳ ಸ್ಥಾನವೆಷ್ಟು ಎಂಬುದರ ಅರಿವಾಗಿ, ಅದರತ್ತ ಮನಸ್ಸು ಹರಿಯದಂತಾಗುವುದಲ್ಲವೆ ?

೩. ಗುರು–ಗುರಿ.

ಇದೇ ಮೊದಲ ಸಲ ಪವನ ವಾಹನದಲ್ಲಿ ಕುಳಿತ ನನಗೆ, ಅದು ಮೇಲೇರಿ ಒಂದು ಮಟ್ಟ ತಲುಪುವವರೆಗೂ ತಲೆ ಸುತ್ತುವಂತಾಗಿ, ಒಂದು ಥರಾ ಅನುಭವವಾಯಿತು.

ಜೊತೆಯಲ್ಲಿಯೇ ಇದ್ದ ಪೂಜ್ಯ ಮಾತಾಜಿಯವರು, 'ಸ್ವಲ್ಪ ಹೊತ್ತು ಹಾಗೇ ಇರುತ್ತೆ ನಂತರ ಏನೂ ತೊಂದರೆಯಾಗುವುದಿಲ್ಲ' ಎಂದು ಹೇಳಿದರು. ಅದರಂತೆ ಮುಂದೆ ಏನೂ ತೊಂದರೆಯಾಗಲಿಲ್ಲ. ಇದೇ ಗುಂಗಿನಲ್ಲಿ ವಿಚಾರ ಮಾಡುತ್ತಿದ್ದಾಗ, ಒಂದು ಆಲೋಚನೆ ಸ್ಫುರಿಸಿತು.

ವಿಮಾನ ಮೇಲೇರುವಾಗ ತೊಂದರೆ ಬರುವುದೆಂದು ಹತ್ತಲು ಒಪ್ಪದೇ ಇದ್ದರೆ, ಸಹಸ್ರ ಮೈಲಿಗಳ ಅಂತರವಿರುವ ದೇಶವನ್ನು ತಲ್ಪಲು ಹೇಗೆ ಅಸಾಧ್ಯವೋ ಹಾಗೆಯೇ, ಸಾಮಾನ್ಯ ಮಟ್ಟದಿಂದ ಉನ್ನತ ಆದರ್ಶವೆಂಬ ವಿಮಾನದಲ್ಲಿ ಕುಳಿತು ಒಂದು ಮಟ್ಟ ವನ್ನು ಏರುವಷ್ಟರಲ್ಲಿ ಲೋಕವು ಸಾಕಷ್ಟು ನಿಂದೆ-ಅಪವಾದ ಕೊಡುವುದು. ಅವು ಗಳಿಗೆ ಹೆದರಿ, ಮಾರ್ಗದರ್ಶಕ ಗುರುವಿನ ವಾಣಿಗೆ ಮನಕೊಡದೆ, ಆದರ್ಶವನ್ನು ಕೈ ಬಿಟ್ಟರೆ, ಆತ್ಯಂತಿಕ ಗುರಿಯನ್ನು ಬೇಗ ತಲ್ಪಿ ಜೀವನ ಸಾರ್ಥಕಗೊಳಿಸಲು ಸಾಧ್ಯವಿಲ್ಲ.

—(ಸೋದರಿ ಕುಮುದಾ, ವಾಷಿಂಗ್‌ಟನ್ ಕ್ಯಾಂಪ್)

ನಗೆಹನಿ

"ಕುಮಾರ ಸಂಭವ" ನಾಟಕಕ್ಕೆ ಅಜ್ಜ ಮೊಮ್ಮಗನನ್ನು ಕರೆದುಕೊಂಡು ಹೋಗಿದ್ದರು. ಮುಂದಿನ ಸೀಟುಗಳನ್ನು ದೊರಕಿಸಿಕೊಳ್ಳಲು ಬೇಗನೇ ಹೋಗಿದ್ದರು. ಮೊಮ್ಮಗನಿಗೆ ಕುಳಿತಲ್ಲೇ ಕುಳಿತು ಬೇಸರವಾಗಿ, ಮೆಲ್ಲನೆ ಅತ್ತಿತ್ತ ಹೊರಟು ವೇದಿಕೆ ಏರಿ, ರಂಗಮಂಟಪದ ಪಕ್ಕದ ಬಣ್ಣದ ಕೊಠಡಿಗೆ ಹೋದ. ಅಲ್ಲಿ ಶಿವನ ಪಾತ್ರಧಾರಿ ಬಣ್ಣ ಬಳಿದು, ಸಿದ್ಧನಾಗಿ ಕುಳಿತಿದ್ದ. ಮೊಮ್ಮಗ ನೋಡಿ ಸಮೀಪಿಸಿ, ನಮಸ್ಕರಿಸಿ, "ದೇವಾ ನನಗೊಂದು ವರ ಕೊಡುವಿಯಾ ?" ಎಂದ. ಆ ಪಾತ್ರಧಾರಿ ನಸುನಕ್ಕು ಅಭಯ ಹಸ್ತ ತೋರಿ, 'ಆಗಲಿ, ಈಗಲ್ಲ. ಈಗ ನಾನಿನ್ನು ಶಿವನಲ್ಲ, ಹತ್ತೂವರೆಯ ಮೇಲೆ ಕೊಡುವೆ' ಎಂದ.

"ಅಮ್ಮಾ, ರಾಣಿ ಎಲಿಜಬೆತಳಿಗೆ ತನಗೆ ಮಗು ಆಗುತ್ತೆ ಅಂತ ಹೇಗೆ ಗೊತ್ತಾಯಿತು ?" ಹತ್ತುವರ್ಷದ ಬಾಲಿಕೆ ಕೇಳಿದಳು. ತಾಯಿ ಉತ್ತರ ಕೊಡುವ ಮುನ್ನವೇ ಆಕೆಯ ಆರುವರ್ಷದ ತಂಗಿ ಹೇಳಿದಳು, "ಏ ಪೆದ್ದು ಅಷ್ಟೂ ಗೊತ್ತಿಲ್ಲವೇನೆ ? ಆಗಲೇ ಎಲ್ಲ ದಿನಪತ್ರಿಕೆಗಳು ಪ್ರಕಟಿಸಿದ್ದನ್ನು ನೋಡಿ ಎಲಿಜಬೆತ್ ತಿಳಿದುಕೊಂಡರು"

ಬೆಳೆದೆನು ಅಸಂಖ್ಯಾತರ ಕರುಣದೊಳಗೆ

ಮಾತಾಜಿ

"ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ, ಬೆಳೆದೆನು ಅಸಂಖ್ಯಾತರ ಕರುಣದೊಳಗೆ" ಎಂದು ಜಗನ್ಮಾತಾ ಅಕ್ಕಮಹಾದೇವಿ ಹೇಳುವಳು. ನಿಜ; ಶ್ರೀಗುರುವಿನ ಹಸ್ತದಲ್ಲಿ ಹುಟ್ಟಿದಾಗಲೇ ಅಸಂಖ್ಯಾತರ ಅಕ್ಕರೆಯ ಆಸರೆಯೊಳಗೆ ಬೆಳೆಯಲು ಸಾಧ್ಯ. ಒಂದು ಕುಟುಂಬಕ್ಕೆ ಬಂಧಿತವಾಗಿದ್ದಾಗ ವಿಶ್ವಕುಟುಂಬತ್ವವೆಂತು ಸಾಧ್ಯ?!.

ಅಮೆರಿಕಾದ ಆಮಂತ್ರಣ ಒಪ್ಪಿದ್ದಾಯಿತು. ಆದರೆ ಕೈಯಲ್ಲಿ ಸಾಕಷ್ಟು ಹಣ ವಿಲ್ಲ. ಸಾಕಷ್ಟಿರುವದೇನು, ಬ್ಯಾಂಕಿನ ಸಾಲವೇ ಅಗಾಧವಾಗಿದೆ. ಅದರ ಜೊತೆಗೆ ಇನ್ನಷ್ಟು ತೆಗೆದರಾಯಿತು ಎಂದು ಸಾಲಕ್ಕೆ ಅರ್ಜಿ ಸಲ್ಲಿಸಿದೆವು. ಜೊತೆಗೆ ಶಿವನ ಬ್ಯಾಂಕಿಗೂ ಅರ್ಜಿ ಅರ್ಪಿಸಿದೆವು. ಅದೇ ಜನತೆಯ ಹೃದಯದ ಸಂಪತ್ತು. ಕಲ್ಯಾಣ ಕಿರಣದ ಓದುಗರು ನಮ್ಮ ಯೋಜನೆ-ಕಾರ್ಯವ್ಯಾಪ್ತಿ ತಿಳಿದಿರುವದರಿಂದ ಅವರನ್ನೇ ಕೇಳೋಣ ಎಂದು ಒಂದು ಮನವಿಯನ್ನು ಬರೆದೆ.

ಕೂರ್ಪವರ ಮುಂದೆ ಹೇಳುವೆ ಕುಳಸ್ಥಳಂಗಳೆಲ್ಲವನು
ಕೂರದವರ ಮುಂದೆ ಹೇಳಿ ನಾನೇವೆ ಶಿವನೆ ?
ಅಂಗತವಿಲ್ಲದ ಸಂಗವು ಆಳಲಿಲ್ಲದ ಹುಯ್ಯಲಂತೆ
ಕರಲು ಭೂಮಿಯ ಮೇಲೆ ಕರೆವ ವೃಷ್ಟಿಯ ತೆರನಂತೆ
ಅವರೆತ್ತ ಬಲ್ಲರು ಎನ್ನ ಸುಖದುಃಖವ
ಕೂಡಲ ಸಂಗಮದೇವಾ, ನಿಮ್ಮ ಶರಣರಿಗಲ್ಲದೆ ಬಾಯ್ದೆರೆಯೆನು.

ಈ ವಚನದ ಅನುಭವ ನಮಗೆ ಚೆನ್ನಾಗಿದೆ. (ವಚನದ ಪುಸ್ತಕ ಈಗ ನನ್ನೊಡನಿಲ್ಲ. ನೆನಪಿದ್ದಂತೆ ಬರೆದಿರುವೆ. ಆಕಸ್ಮಾತ್ ವಾಕ್ಯಗಳು ಅದಲು ಬದಲಾಗಿದ್ದರೆ ಕ್ಷಮಿಸಿ). ಆತ್ಮೀಯರು, ಸಮಾನ ಚಿಂತಕರು-ಅಂಥವರ ಮುಂದೆ ಆಂತರಂಗಿಕ ಸುಖದುಃಖ ತೋಡಿಕೊಳ್ಳಲು ಸಾಧ್ಯ ! ಈ ಆತ್ಮೀಯತೆಯೇ ಇಲ್ಲದವರ, ಅಥವಾ ಕೂತುಮಾತಾಡ ದವರ ಮುಂದೆ ತೋಡಿಕೊಂಡುದು (ದಕ್ಷಿಣ ಕನ್ನಡದವರ ಭಾಷೆಯಲ್ಲಿ) ಬೊಬ್ಬೆಯಿಟ್ಟಂತೇ ವಿನಾ ಏನೂ ಪ್ರಯೋಜನಕಾರಿಯಲ್ಲ. ಕೆಲವರು ವಿಡಂಬಿಸಬಹುದು; ಇನ್ನು

ಕೆಲವರು ತುಟಿ ಮರುಕ ತೋರಿಸಬಹುದು. ಕರಲು ಭೂಮಿಯ ಮೇಲೆ ಸುರಿವ ಮಳೆಯಂತೆ ನಮ್ಮ ಮನವಿಗೆ ಬೆಲೆ ಇಲ್ಲದೆ ಹೋಗಬಹುದು. ಅದಕ್ಕಾಗಿ ಶರಣರೆದುರಿಗೆ ಮಾತ್ರ ಬಾಯ್ದೆರೆಯುವುದೊಳ್ಳಿತು.

ಇದನ್ನರಿತು ಕಲ್ಯಾಣ ಕಿರಣದ ಓದುಗ ಶರಣರ ಮುಂದೆ "ಬಾಯ್ದೆರೆದೆನು". ಕೆಲವರಿಗೆ ವೈಯಕ್ತಿಕ ಮನವಿ ಕಳಿಸಲಾಯಿತು. ನಮ್ಮ ಮನವಿಗೆ ಮಾರುತ್ತರವಾಗಿ ಮಂಗಳಾಪುರ (ಮಂಗಳೂರು)ದ ಮಹಾ ಶರಣರಿಂದ ತ್ವರಿತ ಪ್ರತಿಕ್ರಿಯೆ ಬಂದು ಇಬ್ಬರು ಮಹನೀಯರು ಎರಡೆರಡು ಸಾವಿರದಂತೆ ಮತ್ತು ಅಲ್ಲಿಂದಲೇ ಇನ್ನಿಬ್ಬರು ಒಂದೊಂದು ಸಾವಿರದಂತೆ ಕಳಿಸಿದರು. ಕರ್ನಾಟಕದ ಎಲ್ಲೆಡೆಯಿಂದ ಉತ್ತಮ ಪ್ರತಿಕ್ರಿಯೆ ಬಂದವು. ಯಾರ ಮನೆ ಬಾಗಿಲಿಗೆ ವಸೂಲಿಗೆ ಹೋಗದೆ, ಯಾವ ರಾಜಕಾರಣಿಗಳಿಂದಲೂ, ಅಧಿಕಾರಿಗಳಿಂದಲೂ ಒತ್ತಾಯ ಹೇರಿಸದೇ ಇದ್ದರೂ ಕೇವಲ ಪತ್ರಿಕೆಯಲ್ಲಿ ನೀಡಿದ ಕರೆಗೆ ಓಗೊಟ್ಟು ಅಭಿಮಾನಿಗಳು ನೀಡಿದ ಮೊತ್ತ ಇಪ್ಪತ್ತು ನಾಲ್ಕು ಸಾವಿರ ರೂಪಾಯಿ ತಲುಪಿತು. ಆಗ ಬ್ಯಾಂಕಿನಿಂದ ಪಡೆದಿದ್ದ ಪ್ರವಾಸಕ್ಕಾಗಿ ಕೊಟ್ಟ ಸಾಲ ಹಿಂತಿರುಗಿಸಿದೆ. ಇಷ್ಟೆಲ್ಲ ಜನರ ಶುಭ ಹಾರೈಕೆ ನನ್ನ ಹಿಂದಿದೆ ಎಂಬುದಂತೂ ಇನ್ನೂ ಹೆಚ್ಚಿನ ಸಂತೋಷಕರ ಸಂಗತಿ.


ಧರ್ಮಸ್ಥಳದ ಶ್ರೀವೀರೇಂದ್ರ ಹೆಗ್ಗಡೆಯವರು (ಬೀಳ್ಕೊಡುಗೆ ಕಾರ್ಯಕ್ರಮಕ್ಕೆ ಅಧ್ಯಕ್ಷ ಸ್ಥಾನ ಅಲಂಕರಿಸಲು ಆಮಂತ್ರಿಸಲಾಗಿತ್ತು.) ಪೂರ್ವನಿಯೋಜಿತ ಕಾರ್ಯಕ್ರಮದಿಂದಾಗಿ ಬರಲಾಗುವುದಿಲ್ಲವೆಂದು, ಆದರೆ ಪ್ರವಾಸ ಯಶಸ್ವಿಯಾಗಲೆಂದು ಹಾರೈಸಿ ಒಂದು ಸಾವಿರದ ಒಂದು ರೂಪಾಯಿಗಳ ಚೆಕ್ ಕಳಿಸಿದಾಗ ಎಲ್ಲರಿಗೂ ಆಶ್ಚರ್ಯ. ಅವರ ಔದಾರ್ಯಕ್ಕಾಗಿ ಸಹೃದಯತೆಗಾಗಿ ಆನಂದ। ಇಂಥವರಿಗೆ ವಿದ್ಯೆ, ಸಂಪತ್ತು, ಕೀರ್ತಿ, ಧಾರ್ಮಿಕ ಸ್ಥಾನಮಾನ ಕಿರಿಯ ವಯಸ್ಸಿನಲ್ಲೇ ದೊರೆತಿದ್ದರೂ ಅದರ ಅಹಂಕಾರವಾಗಲೀ, ಅನ್ಯರ ಕೀರ್ತಿಕಂಡು ಕರುಬುವ ಅಸೂಯೆಯಾಗಲೀ ಇಲ್ಲದುದು ಅವರ ವ್ಯಕ್ತಿತ್ವದ ವೈಶಿಷ್ಟ್ಯ. ಅವರಲ್ಲಿಂದು ತುಂಬಿರುವ ಧಾರ್ಮಿಕ ನಿಷ್ಠೆ, ಧರ್ಮ ಜಾಗೃತಿಯ ಕಳಕಳಿ ಅಸಾಮಾನ್ಯ. ಕರ್ನಾಟಕದ ಕೀರ್ತಿಶಾಲಿ ಕ್ಷೇತ್ರಗಳಲ್ಲೊಂದಾದ ಶ್ರೀಧರ್ಮಸ್ಥಳವು ಇಂದು ಮಹತ್ತರ ಪ್ರಚಾರ ಪಡೆದಿದ್ದರೆ, ಅದರಲ್ಲಿ ಶ್ರೀ ವೀರೇಂದ್ರ ಹೆಗ್ಗಡೆಯವರ ಆದರಣೀಯ ಸ್ವಭಾವ, ವೈಶಾಲ್ಯ, ಹಿರಿದಾದ ನಿಷ್ಕಲ್ಮಶ ಹೃದಯ-ಇವು ಮಹತ್ತರ ಸಾಧನಗಳು ಎಂದರೆ ಉತ್ಪ್ರೇಕ್ಷೆಯಲ್ಲ. ಹೀಗಾಗಿ ಶ್ರೀ ಹೆಗ್ಗಡೆಯವರದು ಮಹತ್ವಪೂರ್ಣ ಕೊಡುಗೆ. ಅದಕ್ಕಾಗಿ ನಾವು ಋಣಿಗಳು.

ಹಣದ ಕೊರತೆಯೆಂದಲ್ಲ, ಅಕ್ಷಯ ಪಾತ್ರೆಯೆಂದು ನಮಗೆ ವೈಯಕ್ತಿಕ ಭಕ್ತಿ-ಗೌರವ- ಆತ್ಮೀಯತೆ ಇರುವ ಜ್ಞಾನ ವೃದ್ಧ-ವಯೋವೃದ್ಧ ಕೆಲವು ಸ್ವಾಮಿಗಳನ್ನು ಕೇಳಿಕೊಳ್ಳಲಾಗಿತ್ತು. ಅವರುಗಳಲ್ಲಿ ಹೃತ್ಪೂರ್ವಕ ಶುಭ ಹಾರೈಕೆಯೊಡನೆ ನಾಲ್ಕು ನೂರು ರೂಪಾಯಿಗಳನ್ನು ಕಳಿಸಿದ ಔದಾರ್ಯ ಬೆಳಗಾವಿಯ ನಾಗನೂರು ಬೃಹನ್ಮಠದ ಅಧ್ಯಕ್ಷ ಶ್ರೀ ಮ. ನಿ. ಪ್ರ. ಶಿವಬಸವ ಸ್ವಾಮಿಗಳದು. ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳು ತೀವ್ರವಾದ ಬಡತನದ ಬವಣೆಯಲ್ಲಿದ್ದು ವಿದ್ಯಾಭ್ಯಾಸ ಮಾಡುವಾಗ ಫ್ರೀ ಬೋರ್ಡಿಂಗ್ ಅನುಕೂಲತೆ ಮಾಡಿಕೊಟ್ಟ ಅಮೃತ ಹಸ್ತ ಪೂಜ್ಯ ನಾಗನೂರು ಶ್ರೀಗಳದ್ದು. ಅವರ ಕೊಡುಗೆ ಹೀಗಾಗಿ ಮಹತ್ವಪೂರ್ಣ. ಅದಕ್ಕಾಗಿ ಕೃತಜ್ಞತೆ.

ಇನ್ನು ಅಸಂಖ್ಯಾತ ಅಭಿಮಾನಿಗಳು ಕೊಟ್ಟಿದ್ದಾರೆ. ಕೆಲವರು ಹೆಸರನ್ನು ಬಹಿರಂಗಪಡಿಸದಿರಲು ತಿಳಿಸಿದ್ದಾರೆ. ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತಾ ಪರಮಾತ್ಮನ ದಿವ್ಯಾನುಗ್ರಹ ಎಲ್ಲರ ಮೇಲಿರಲೆಂದು ಹಾರೈಸುವೆ.

ತಂದೆಯ ಸ್ವಭಾವ ಸ್ವಲ್ಪ ಬೇಜವಾಬ್ದಾರಿತನದ್ದು. ಎಲ್ಲವನ್ನೂ ತಾಯಿಯ ಮೇಲೆ ಹಾಕಿ ನುಣುಚಿಕೊಳ್ಳುವಂಥವನು. ತಾಯಿ ತುಂಬಾ ಮನೆಗೆಲಸದಲ್ಲಿದ್ದಳು. ಮಗ ಸಂಜೆಯಲ್ಲಿ ಪಾಠ ಓದುತ್ತಿದ್ದ. ತಂದೆ ಪೇಪರ್ ಓದುತ್ತ ಆರಾಮವಾಗಿ ಕುಳಿತಿದ್ದ. ಮಗ ಬಂದು "ಅಪ್ಪಾ, ಹಿಮಾಲಯದ ಪರ್ವತ ಶ್ರೇಣಿ ಎಲ್ಲಿದೆ?" ಎಂದ. ಆಗ ತಂದೆ ಉತ್ತರಿಸಿದ, "ಹೋಗು ಹೋಗು, ನಿಮ್ಮಮ್ಮನ್ನ ಕೇಳು ಆಕೆ ಎಲ್ಲೆಲ್ಲೋ ಎತ್ತಿಟ್ಟು ಬಿಡುತ್ತಾಳೆ."

ವೈದ್ಯರು ಕುಡಿತದ ದುಷ್ಪರಿಣಾಮಗಳನ್ನೆಲ್ಲಾ ವಿವರಿಸಿ ಬಹಳವೆಂದರೆ ದಿನಕ್ಕೊಂದೇ ಸಲ ತೆಗೆದುಕೊಳ್ಳಲು ಸಲಹೆ ನೀಡಿದ್ದರು. ಆದರೆ ಅವನು ಮತ್ತೆ ಕುಡಿದು, ಬಾರಿನಲ್ಲಿ ತೂರಾಡುತ್ತಿದ್ದ. ಆಗ ನೋಡಿ ಬೇಸರಗೊಂಡ ಮಿತ್ರ ಸಮೀಪಹೋಗಿ, "ಹೀಗೆಲ್ಲ ಮಾಡಬಹುದೆ? ವೈದ್ಯರ ಮಾತಿಗೂ ನೀನು ಬೆಲೆ ಕೊಡುವುದಿಲ್ಲವಲ್ಲಾ." ಎಂದು ನೊಂದು ಕೇಳಿದ. "ಖಂಡಿತಾ ಬೆಲೆಕೊಟ್ಟಿರುವೆ. ಈ ಡೋಸ್ 1981ನೇ ಇಸವಿ ಜುಲೈ ತಿಂಗಳ 20ನೇ ತಾರೀಖಿನದು. ಲೆಕ್ಕ ಇಡುತ್ತಿದ್ದೇನೆ." ಎಂದನಾಮಿತ್ರ.



ಲೇ: ಜಗದ್ಗುರು ಮಾತೆ ಮಹಾದೇವಿ.

ಭಾಗ ೨

ಕಾರ್ಯಕ್ರಮ ನಿಶ್ಚಯ

ಪ್ರಯತ್ನಪೂರ್ವಕವಾಗಿ ಪಡೆದುದಕ್ಕಿಂತಲೂ ಪ್ರಸಾದ ರೂಪವಾಗಿ ಬಂದುದು ಹೆಚ್ಚು ದೈವಾನುಗ್ರಹ ಸಿಂಚಿತವಷ್ಟೆ. ಈ ಬಾರಿ ಅನಿರೀಕ್ಷಿತವಾಗಿಯೇ ಅಮೆರಿಕಾದಿಂದ ಆಮಂತ್ರಣ ಬಂದುದಾಗಿತ್ತು. ಆರ್ಥಿಕ ಅನಾನುಕೂಲತೆ ಇದ್ದುದರಿಂದ ಮತ್ತು ಭಾರತದಿಂದ ಅಮೆರಿಕಾವರೆಗಿನ ಪ್ರಯಾಣವೆಚ್ಚವನ್ನು ನಾವೇ ಭರಿಸಿಕೊಳ್ಳಬೇಕೆಂಬ ಆಕಾಂಕ್ಷೆ ಅಲ್ಲಿಯವರು ವ್ಯಕ್ತಪಡಿಸಿದ್ದರಿಂದ ನಾನು ನಕಾರಾತ್ಮಕ ಉತ್ತರ ಕಳಿಸಿದೆನು. ಹೀಗಾಗಿ ಒತ್ತಾಯಪೂರ್ವಕ ಆಮಂತ್ರಣ ಮತ್ತು Sponsorship ದಾಖಲೆಗಳು ಅಕ್ಟೋಬರ್ 3 ರಂದು ನಮ್ಮ ಕೈಸೇರಿದರೂ ಅದನ್ನು ಬಸವ ಪರಿಷತ್ ಸಮ್ಮೇಳನದಲ್ಲಿ ಬಹಿರಂಗ ಪಡಿಸಲಿಲ್ಲ ಮತ್ತು ಧನ ಸಹಾಯವನ್ನು ಯಾಚಿಸಲಿಲ್ಲ. ನವೆಂಬರ್ ತಿಂಗಳಲ್ಲಿ ವಿದೇಶ ಪ್ರಯಾಣ ನಮ್ಮ ಸಂಸ್ಥೆಗೆ ಹಾನಿದಾಯಕ. ಏಕೆಂದರೆ ಅಕ್ಟೋಬರಿನಿಂದಲೇ ನಮ್ಮ ಸಾರ್ವಜನಿಕ ಪ್ರವಚನ ಕಾರ್ಯಕ್ರಮ ಆರಂಭ. ಆಗಲೇ ಏನಾದರೂ ಕಟ್ಟಡಕ್ಕಾಗಿ ಸಹಾಯನಿಧಿ, ಮುಂದಿನ ವರ್ಷದ ಯೋಜನೆಗೆ ಹಣ ಬರುವುದು. ಅಂಥ ಅಮೂಲ್ಯವೇಳೆಯನ್ನು ಕಳೆದುಕೊಂಡರೆ ಅರ್ಧಂಬರ್ಧ ಆಗಿರುವ ಶಾಲಾ ಕಟ್ಟಡದ ಗತಿ ಏನು? ಹೀಗೆಲ್ಲ ಚಿಂತಿಸಿ, ಬೆಳಗಾಂನಲ್ಲಿ ಪ್ರವಚನ ಆರಂಭಿಸುವುದೆಂದು ನಿರ್ಧರಿಸಿ ಎಲ್ಲಾ ವ್ಯವಸ್ಥೆಗೆ ತೊಡಗಲಾಯಿತು. ಇಪ್ಪತ್ತು ಸಹಸ್ರ ಕರಪತ್ರಗಳನ್ನು ಮುದ್ರಿಸಲು ಮುದ್ರಣಕಾರರಿಗೆ ಹೇಳಿದ್ದಾಯಿತು.

ಬೆಳಗಿನ ಎಂಟೂವರೆ ಗಂಟೆ; ಫೋನು ಬಾರಿಸತೊಡಗಿತು. ಎತ್ತಿದರೆ ಅಮೆರಿಕಾದಿಂದ ಕರೆ. ಅದರಲ್ಲಿ ಡಾ|| ಜಿ ಎಸ್. ಕೋರಿಯವರ ಧ್ವನಿ. ಈ ಬಾರಿ

ಬರಲು ಆಗದೆಂಬ ಟೆಲೆಕ್ಸ್ ಸಂದೇಶ ಮುಟ್ಟಿದುದಾಗಿಯೂ ; ಆದರೆ ಒಪ್ಪಿಕೊಳ್ಳಲೇಬೇಕೆಂದು ಆಗ್ರಹಪೂರ್ವಕ ಆತ್ಮೀಯ ಒತ್ತಾಯ ವ್ಯಕ್ತಪಡಿಸಿದರು. ಒಬ್ಬರ ವೆಚ್ಚ ಭರಿಸುವುದಾಗಿಯೂ ಇನ್ನೊಬ್ಬರ ವೆಚ್ಚ ನಾವು ಭರಿಸಬೇಕೆಂದೂ, ಆಮಂತ್ರಣ ನಿರಾಕರಿಸಬಾರದೆಂದೂ ನಮ್ಮ ಬರವಿಗಾಗಿ ಇಲ್ಲಿಯವರು ತುಂಬಾ ಕುತೂಹಲಿತರಾಗಿದ್ದಾರೆಂದೂ ತಿಳಿಸಿದರು. ಟೆಲಿಫೋನಿನಲ್ಲೇ ಒಪ್ಪಿಕೊಳ್ಳಲು ಒತ್ತಾಯಿಸಿದಾಗ, ಒಪ್ಪಿಗೆ ಕೇಳಲು ಪೂಜ್ಯ ಗುರೂಜಿಯವರನ್ನು ಕರೆಯಿಸಿದೆ. "ಅವರ ಧರ್ಮಪ್ರಸಾರದ ಕಳಕಳಿ ಅದ್ಭುತವಾಗಿದೆ. ಅವರು ಮಾಡುತ್ತಿರುವದೂ ಸಾರ್ವಜನಿಕರಿಗಾಗಿ ಆದ್ದರಿಂದ ಒಪ್ಪಿಕೊಂಡುಬಿಡಿ" ಎಂದು ಗುರೂಜಿಯವರು ತಿಳಿಸಿದರು. ಅಂತೂ ದೂರವಾಣಿಯ ಮುಖಾಂತರ ಒಪ್ಪಿದ್ದಾಯಿತು. ಮುಂದಿನ ವ್ಯವಸ್ಥೆಗೆ ತೊಡಗಿದೆವು. ಬೆಳಗಾಂ ಪ್ರವಚನ ಮುಂದೂಡಿದ್ದಾಯಿತು. ಕೈಖರ್ಚಿಗಾಗಿ ಬೇಕಾಗಬಹುದೆಂದು ಬ್ಯಾಂಕಿನಲ್ಲಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದಾಯಿತು. ಸಹೃದಯರಿಂದ ಸಹಾಯ ದೊರೆತೀತೆಂದು ಆಶಿಸಿ "ಕಲ್ಯಾಣ ಕಿರಣದಲ್ಲಿ" ಮನವಿಯನ್ನು ಮಾಡಿಕೊಂಡೆವು. ನಮ್ಮದು ಯಾವಾಗಲೂ ಬಿಸಿಯೂಟವೇ ! ತಂಗಳೂಟ ಇಲ್ಲವೇ ಇಲ್ಲ. ಅಂದರೆ ಅಂದಂದಿಗೇ ದುಡಿದು, ಪಡೆದು, ಅಂದಂದಿಗೇ ವ್ಯಯಿಸುವುದು. ಕಾಣಿಕೆ ಬರುತ್ತಿದ್ದಂತೆಯೇ ಯೋಜನೆ ಹಾಕಿ, ಅದನ್ನು ತೊಡಗಿಸಿ ಮತ್ತೆ ಹೊಸದಾಗಿ ದುಡಿದೇ ಹೊಸ ಯೋಜನೆ ಹಾಕುವುದು. ಬ್ಯಾಂಕಿನಲ್ಲಿ ಎಂದೂ ಶೇಖರಿಸುವುದಿಲ್ಲ ; ಜಂಗಮಾತ್ಮಕವಾಗಿ (dynamic) ತೊಡಗಿಸಿ, ಹೊಸ ವಿಚಾರಗಳು ಪ್ರಯೋಗಕ್ಕೆ ಬಂದಾಗ ಆನಂದಿಸುವುದು ನಮ್ಮ ಸ್ವಭಾವ.

1976 ರಲ್ಲಿ ಆಂಗ್ಲನಾಡಿಗೆ ಹೋಗಿದ್ದಾಗ ಒಬ್ಬಳೇ ಹೋಗುವ ಸಾಹಸ ಮಾಡಿದ್ದೆ. ಈ ಬಾರಿ ಮಾತ್ರ ಒಬ್ಬಳೇ ಹೋಗುವುದು ಬೇಡವೆಂದು ನಿರ್ಧರಿಸಿದೆ ಮತ್ತು ಆಶ್ರಮದವರೂ ನನ್ನೊಬ್ಬಳನ್ನೇ ಕಳಿಸಲು ಸಿದ್ಧರಿರಲಿಲ್ಲ. ಖರ್ಚಿಗಾಗಿ ಅಂಜಿ ಒಬ್ಬರೇ ಹೋಗುವುದು ಸಲ್ಲದು ಎಂದು ಆಗ್ರಹಪಡಿಸಿದರು. ಅದೂ ನಿಜವೆ! ಹಿಂದಿನ ಅನುಭವವೂ ಬುದ್ಧಿ ಕಲಿಸಿತ್ತು. ಹಾಗಾದರೆ ಯಾರನ್ನು ಕರೆದೊಯ್ಯುವುದು ? ಅಮೆರಿಕಾದಲ್ಲಿ ಯೋಗಾಸನಗಳಲ್ಲಿ ತೀವ್ರ ಆಸಕ್ತಿ. ಭಾರತೀಯ "ಯೋಗ" ಎಂದರೆ ಒಂದು ಬಗೆಯ ಅಭಿಮಾನ! ಅವರಲ್ಲಿದೆ ಎಂದು ತಿಳಿದಿದ್ದೆ. ನಮ್ಮ ಶಿಷ್ಯೆಯರಲ್ಲಿ ಯೋಗಾಸನ ಪ್ರವೀಣೆ ಎಂದರೆ "ಕುಮುದಾ". ಬಳ್ಳಾರಿ, ದಾವಣಗೆರೆಗಳಲ್ಲಿ ಯೋಗಾಸನ ಪ್ರದರ್ಶನ ಮಾಡಿ ಆಕೆ ಜನರಿಂದ ಅಪಾರ ಮೆಚ್ಚುಗೆ ಪಡೆದಿದ್ದಳು ಮತ್ತು ಟೈಪಿಂಗ್ ಮಾಡಲು ಬರುವುದೇ ಅಲ್ಲದೆ, ಮುದ್ದಾದ ಹಸ್ತಬರಹದೊಡನೆ ನನ್ನ ಮನಸ್ಸಿಗೆ ಒಪ್ಪಿಗೆಯಾಗುವಂತೆ ಪತ್ರ ಬರೆಯಬಲ್ಲವಳಾಗಿದ್ದ ಕಾರಣ, ಆಶ್ರಮವಾಸಿಗಳೆಲ್ಲರೂ ಕುಮುದಳನ್ನೇ ಸಹಾಯಕಿಯಾಗಿ ಕರೆದೊಯ್ಯಲು ಸೂಚಿಸಿದರು.

ವೀಸಾ (ಎಂಟ್ರಿ ಪರ್ಮಿಟ್) ಪಡೆವ ಪ್ರಯತ್ನ

ನಾವು ಸ್ಪಾನ್‌ಸರ್‌ಷಿಪ್‌ಗಾಗಿ ಪ್ರಯತ್ನಿಸಿದ್ದಾಯಿತು. ವಿ. ಎಸ್. ಎನ್. ಎ. ಎಂಬ ಸಂಸ್ಥೆಯ ಅಧ್ಯಕ್ಷರಾದ ಡಾ|| ಕೋರಿಯವರು ಸಂಸ್ಥೆಯ ಪರವಾಗಿ ಕಳಿಸಿದ್ದರು. ಆದರೆ ಅಮೆರಿಕಾ ಕನ್‌ಸುಲೇಟ್ ಕಛೇರಿಯವರು ಪೊಲಿಟಿಕಲ್ ಕ್ಲಿಯರೆನ್ಸ್ ಕೇಳಿದರು. ವಿಶೇಷ ವ್ಯಕ್ತಿತ್ವದ ಪ್ರಭಾವಶಾಲಿ ವ್ಯಕ್ತಿಗಳ ಪರವಾಗಿ ಈ ಭರವಸೆಯನ್ನು ಇಲ್ಲಿಂದ ಕೊಡಬೇಕಾಗುತ್ತದಂತೆ. ನಾವು ಈ ವಿಷಯವನ್ನು ಡಾ|| ಕೋರಿಯವರಿಗೆ ಫೋನ್ ಮುಖಾಂತರ ತಿಳಿಸುತ್ತಿದ್ದಂತೆಯೇ ಅವರು ಉನ್ನತ ಮಟ್ಟದ ಅಧಿಕಾರಿಗಳನ್ನು ಕಂಡು ನಾವು ರಾಜಕೀಯ ವ್ಯಕ್ತಿಗಳ ಗುಂಪಿಗೆ ಸೇರಿದವರಲ್ಲವೆಂದು ಮನವರಿಕೆ ಮಾಡಿಕೊಟ್ಟುದೇ ಅಲ್ಲದೆ, ನಮ್ಮ ಸಂಪೂರ್ಣ ಜವಾಬ್ದಾರಿ ಹೊರುವ ಹೇಳಿಕೆಯನ್ನು ನೀಡಿದರು. 'ಸರಿ, ಎಲ್ಲ ಸಿದ್ಧವಾಗಿದೆ' ಎಂದು ಮದ್ರಾಸಿಗೆ ಹೋದರೆ, ನಮ್ಮನ್ನು ಸ್ಪಾನ್ಸರ್ ಮಾಡಿರುವ ಸಂಸ್ಥೆಯ ಆರ್ಥಿಕ ಸ್ಥಿತಿಯ ವರದಿ ಮತ್ತು ಬ್ಯಾಂಕ್ ಬ್ಯಾಲೆನ್ಸ್ ಬೇಕೆಂದು ಕೇಳಲಾರಂಭಿಸಿದರು. ಸಮಯ ನೋಡಿದರೆ ತೀರಾ ಕಡಿಮೆ. ಅಂಚೆಯ ವಿಳಂಬ ತೀವ್ರವಾಗಿದೆ. ಬೀಳ್ಕೊಡುಗೆ ಕಾರ್ಯಕ್ರಮವನ್ನು ಅಭಿಮಾನಿಗಳೆಲ್ಲ ಸೇರಿ 19–11–1980ಕ್ಕೆ ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಇಟ್ಟಿದ್ದಾರೆ. ಏನು ಮಾಡುವುದೂ ತೋಚಲಿಲ್ಲ. ಮತ್ತೆ ಕೋರಿಯವರಿಗೆ ಫೋನ್ ಮಾಡಿ, 'ಅಂಚೆ ಮೂಲಕ ಕಳಿಸಿದರೆ ಆಗದು ; ಸಮಯಕ್ಕೆ ಸರಿಯಾಗಿ ಕೈಸೇರದು. ಯಾರಾದರೂ ಬರುವವರಿದ್ದರೆ ಅವರ ಕೈಲಿ ಕಳಿಸಿರಿ....' ಅವರು ಒಪ್ಪಿದರು. ಆದರೆ ನಮಗೇನೋ ಆತಂಕ. 'ವೇಳೆಗೆ ಸರಿಯಾಗಿ ದಾಖಲೆಪತ್ರ ಕೈಸೇರದಿದ್ದರೆ, ಬೀಳ್ಕೊಡುಗೆ ಕಾರ್ಯಕ್ರಮ ಮುಗಿಸಿ, ಪ್ರವಾಸ ಕೈಗೊಳ್ಳದಿದ್ದರೆ ಚೆನ್ನಾಗಿರದು. ಕಾರ್ಯಕ್ರಮ ನಿಲ್ಲಿಸೋಣ. ಒಂದುವೇಳೆ ಬೀಳ್ಕೊಡುಗೆ ಆಗದಿದ್ದರೇನಂತೆ, ಹೋದ ನಂತರ "ಕಲ್ಯಾಣ ಕಿರಣ"ದಲ್ಲಿ ಕೊಟ್ಟರಾಯಿತು.' ಎಂದುಕೊಂಡು ಬೀಳ್ಕೊಡುಗೆ ಕಾರ್ಯಕ್ರಮ ಮುಂದೂಡಿದ ಬಗ್ಗೆ ಜಾಹಿರಾತು ಕೊಡಲು "ಪ್ರಜಾವಾಣಿ" ಕಾರ್ಯಾಲಯಕ್ಕೆ ನಮ್ಮ ಕಾರ್ಯಕರ್ತರನ್ನು ಕಳಿಸಿ, ಪುರಭವನದ ರಿಸರ್ವೇಷನ್ ರದ್ದುಪಡಿಸಲು ಬೀಳ್ಕೊಡುಗೆ ಸಮಿತಿಯ ಕಾರ್ಯದರ್ಶಿ ಶರಣಪ್ಪನವರನ್ನು ಕಛೇರಿಗೆ ಕಳಿಸಲಾಯಿತು.

ಮೂವತ್ತು ನಿಮಿಷ ಕಳೆದಿರಬಹುದು. ಏರ್ ಇಂಡಿಯಾದ ಕಾರ್ಯಾಲಯದಿಂದ ನಮ್ಮ ಟಿಕೆಟು ಬಂದಿರುವುದಾಗಿ ಒಂದು ಕರೆ ; ನಮ್ಮ ದಾಖಲೆ ಪತ್ರಗಳನ್ನು ಬೆಂಗಳೂರಿಗೆ ಬರಲು ಹೊರಟಿದ್ದ ಶ್ರೀ ಐಯ್ಯಂಗಾರ್‌ರೊಡನೆ ಕಳಿಸಿರುವುದಾಗಿಯೂ ಮತ್ತು ವೀಸಾ ಕೊಡಲು ಯಾವ ಆತಂಕ ಒಡ್ಡದಂತೆ ವಾಷಿಂಗ್ಟನ್‌ನಿಂದ ಸಂಬಂಧಿಸಿದ

ಅಧಿಕಾರಿಗಳಿಂದ ಹೇಳಿಸಿರುವುದಾಗಿಯೂ ಡಾ॥ ಕೋರಿಯವರು ಹೇಳಿದರು. ಮಳೆಗಾಲದ ಬೆಳಕು-ನೆರಳಿನಾಟದಂತೆ ಕೆಲಸಗಳಾಗುವವಲ್ಲ ಎಂದು ತಕ್ಷಣ ಫೋನ್‌ಮಾಡಿ ಕಾರ್ಯಕ್ರಮ ನಡೆಯುವುದೆಂಬ ವಿವರಕೊಡಲು ಪ್ರಜಾವಾಣಿ ಜಾಹಿರಾತು ವಿಭಾಗಕ್ಕೆ ತಿಳಿಸಲಾಯಿತು. ಶರಣಪ್ಪನವರೂ ಅದೇ ಆಗ ರದ್ದುಪಡಿಸಲು ಹೊರಟವರು ಫೋನಿನಲ್ಲಿ ಸಿಕ್ಕರು. ಅಂತೂ ಕಾರ್ಯಕ್ರಮ ನಿಶ್ಚಿತವಾಯಿತು.

ಬೀಳ್ಕೊಡುಗೆ ಸಮಾರಂಭ ಬಹಳ ಮನನೀಯವಾಗಿ, ಹೃದಯಸ್ಪರ್ಶಿಯಾಗಿ ನಡೆಯಿತು. ಅದಕ್ಕೆ ಹಿನ್ನೆಲೆಯಾಗಿ ದಿನಾಂಕ 16-11-1980 ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ನಿಧಿ ಸಂಸ್ಥೆಯವರು ಬೀಳ್ಕೊಡುಗೆ ಮತ್ತು ಸನ್ಮಾನ ಇರಿಸಿಕೊಂಡಿದ್ದರು. ಒಂದೊಂದು ಸಂದರ್ಭದಲ್ಲಿ ಜನತೆ ಇರಿಸಿದ ಅಭಿಮಾನ ವ್ಯಕ್ತವಾಗುತ್ತದೆ. ಸಮಾಜದ ಗಣ್ಯರೆಲ್ಲರೂ ಸೇರಿ ಅತ್ಯಂತ ಅಭಿಮಾನದ ಸನ್ಮಾನ ಅಂದು ನೀಡಿದರು. 'ವಚನೋದ್ಯಾನ' ಬಹುಮಾನ ವಿಜೇತ ಶರಣಕವಿ ಸಿದ್ಧಯ್ಯಪುರಾಣಿಕರಿಗೂ ಅಂದು ಸನ್ಮಾನ. ಕಾರ್ಯಕ್ರಮ ಮನನೀಯವಾಗಿತ್ತು. ದಿ. 19-11-1980ರಂದು ನಡೆದ ಸಾರ್ವಜನಿಕ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಪರಿಷತ್ತು ಅಧ್ಯಕ್ಷೆ ಶ್ರೀಮತಿ ಬಸವರಾಜೇಶ್ವರಿ ಅಧ್ಯಕ್ಷತೆ ವಹಿಸಿದುದು ಹೆಚ್ಚಿನ ಶೋಭೆ ತಂದಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಚಿವ ಬೇಗಾನೆ ರಾಮಯ್ಯನವರು ಹೃತ್ಪೂರ್ವಕ ನುಡಿಗಳಾಡಿದರು. ಪೂಜ್ಯ ಗುರೂಜಿಯವರ ತುಂಬು ಹೃದಯದ ಆಶೀರ್ವಾದ ಅಸೀಮ ಆತ್ಮಬಲವನ್ನು ನೀಡಿತು.

ಅತ್ಯಂತ ಅಲ್ಪ ಅವಧಿಯಲ್ಲಿ ವ್ಯವಸ್ಥೆಮಾಡಿ, ಕಾರ್ಯಕ್ರಮವನ್ನು ಏರ್ಪಡಿಸಿದ್ದರೂ ತುಂಬು ಸಂಖ್ಯೆಯಲ್ಲಿ ಸೇರಿದ್ದ ಶ್ರೋತೃಸಮೂಹ ಕಂಡು ಆಶ್ಚರ್ಯವೇ ಆಯಿತು. ಜನತೆಯ ಭಕ್ತಿ-ಗೌರವ-ಅಭಿಮಾನಗಳನ್ನು ಕಂಡರೆ ಒಮ್ಮೊಮ್ಮೆ ಹೃದಯತುಂಬಿ, ಮಾತು ಮೌನವನ್ನಾಶ್ರಯಿಸುತ್ತದೆ. ಬೀಳ್ಕೊಡುಗೆ ಕಾರ್ಯಕ್ರಮ ಮುಗಿಸಿ ಅಂದು ಸಂಜೆಯೇ ವೀಸಾ ಸಲುವಾಗಿ ಮದ್ರಾಸಿಗೆ ಸಾಗಿದೆವು.

ಈ ಬಾರಿ ಹೆಚ್ಚಿನ ಆತಂಕವೇನೂ ಆಗಲಿಲ್ಲ. ಇನ್ನೊಂದು ಅರ್ಜಿಸಲ್ಲಿಸಿ ಸೂಕ್ತವಾದ ದಾಖಲೆ ಕೊಟ್ಟನಂತರ ಪರಿಶೀಲಿಸಿ, ಮಧ್ಯಾಹ್ನ 3 ಗಂಟೆಗೆ ಬರಲು ತಿಳಿಸಿದರು. ನಾವು ಹಾಜರು ಪಡಿಸಿದ ದಾಖಲೆಗಳೊಡನೆ ಡಾ॥ ಕೋರಿಯವರು ಅಮೆರಿಕಾದಿಂದ ಕಳಿಸಿದ ತಂತಿ ಸಂದೇಶ, ಸರ್ಕಾರಿ ಅಧಿಕಾರಿಗಳನೇಕರ ಶಿಫಾರಸು ಎಲ್ಲ ತಮ್ಮ ಪ್ರಭಾವ ಬೀರಿದ್ದವು. ತೀರಾ ಅಲ್ಪಾವಧಿಯಲ್ಲಿ ಡಾ॥ ಕೋರಿಯವರು ಕೆಲಸಮಾಡಿದ ವೇಗ ಕಂಡರೆ ಯಾರಿಗಾದರೂ ಆಶ್ಚರ್ಯವೆನಿಸದಿರದು. ನಮ್ಮಂತೆಯೇ

ಅವರದೂ ಸ್ವಲ್ಪ ಧೈರ್ಯದಿಂದ ಮುನ್ನುಗ್ಗುವ ಸ್ವಭಾವ. ಅಂಜಿ, ಆತಂಕಪಟ್ಟು ಕುಳಿತುಕೊಳ್ಳುವವರಲ್ಲ.

ಮಧ್ಯಾಹ್ನ ಮೂರಕ್ಕೆ ಪ್ರವೇಶಪತ್ರ (Entry Permit) ಪಡೆದವರೇ ಬೆಂಗಳೂರಿನತ್ತ ಧಾವಿಸಿದೆವು. ಬರುವಾಗ ರಾಣಿಪೇಟೆಗೆ ಹೋಗಿಬಂದೆವು. ಇಲ್ಲೊಂದು ವಿಶೇಷ ಪ್ರಸಂಗ ಹೇಳಬೇಕು: ಹಿಂದಿನ ಬಾರಿ ವೀಸಾ ತರಲೆಂದು ಮದ್ರಾಸಿಗೆ ಹೋಗಿ ಬರುವಾಗ ರಾತ್ರಿ ಹತ್ತೂವರೆ ಆಗಿತ್ತು. ಸತತವಾದ ಪ್ರಯಾಣದಿಂದಾಗಿ ಡ್ರೈವ್ ಮಾಡುತ್ತಿದ್ದ ರಾಮರೆಡ್ಡಿ ದಣಿದಿದ್ದರಿಂದ ರಾತ್ರಿಯ ಪ್ರಯಾಣ ಮುಂದುವರಿಸುವುದು ಬೇಡವೆಂದು ಸರ್ಕಾರಿ ಇನ್ಸ್‌ಪೆಕ್ಷನ್ ಬಂಗಲೆಯಲ್ಲಿಳಿಯಲು ಹೋಗಿದ್ದೆವು. ಅಲ್ಲಿಯ ಮೇಟಿ ಅಷ್ಟು ಹೊತ್ತಿನಲ್ಲಿ ತುಂಬಾ ನೆರವು ನೀಡಿ ಅವಕಾಶ ಮಾಡಿಕೊಟ್ಟಿದ್ದ. ಸ್ಟೋವ್, ಎಣ್ಣೆ ಎಲ್ಲ ಕೊಟ್ಟು ಸಹಕರಿಸಿದ್ದ. ಮರುದಿನ ಬೆಳಿಗ್ಗೆ ಆರು ಗಂಟೆಗೇ ಅಲ್ಲಿಂದ ಹೊರಟೆವು. ಹೊರಡುವ ಮುನ್ನ ಅವನ ವೆಚ್ಚದ ಬಾಬ್ತು ಕೊಡಲು ನಮ್ಮ ಸಹಚರರಿಗಳಿಗೆ ಹೇಳಿ ಕಾರು ಹತ್ತಿದೆವು. ಹತ್ತು ಮೈಲಿ ಬಂದ ಮೇಲೆ ಸಹಜವಾಗಿ ಎಷ್ಟು ಕೊಟ್ಟಿರೆಂದು ಕೇಳಿದಾಗ, ಅವರು ಹೇಳಿದ ಮೊತ್ತ ತೀರಾ ಕಡಿಮೆಯಾಗಿತ್ತು. ಇದರಿಂದಾಗಿ ನಾವು ದಾಖಲಾತಿ ಪುಸ್ತಕದಲ್ಲಿ ಬರೆದ ಹಣವನ್ನೂ ಕೊಂಚಮಟ್ಟಿಗೆ ಅವನು ಕೈಯಿಂದ ತೆರಬೇಕಾಗಿತ್ತು. ಬೇರೆಯವರಾಗಿದ್ದರೆ ಕಾಡಿಬೇಡಿ ಜಾಸ್ತಿ ಕೇಳಿ ಕಸಿಯುತ್ತಿದ್ದರು. ಅವನಾದರೋ ಶ್ರದ್ಧಾವಂತ ಧಾರ್ಮಿಕ. ನಮ್ಮನ್ನು ನೋಡಿದಾಕ್ಷಣವೇ ಸಾಷ್ಟಾಂಗ ನಮಸ್ಕಾರ ಮಾಡಿದ್ದ. ನಿಮಗೆ ತಿಳಿದಷ್ಟು ಕೊಡಿ ಎಂದು ಹೇಳಿ, ಪ್ರಸಾದ ಕೊಡಿ ಎಂದಿದ್ದ. ವಿಭೂತಿಯ ಗಟ್ಟಿ ಮಂತ್ರಿಸಿ, ಆಶೀರ್ವಾದ ಮಾಡಿಕೊಟ್ಟಿದ್ದೆವು. ಹೀಗಾಗಿ ಅವನು ಏನೂ ಕೇಳಿರಲಿಕ್ಕಿಲ್ಲ.

ಆದರೆ ಕಡಿಮೆಕೊಟ್ಟು ಬಂದಿದ್ದಾರೆಂದು ತಿಳಿದು ಮನಸ್ಸಿಗೆ ತುಂಬಾ ಹಳಹಳಿಯಾಯಿತು. ಒಮ್ಮೆ ಅಂಥ ಭಾವನೆ ನನ್ನಲ್ಲಿ ಹೊಕ್ಕರೆ ಬಾರಿಬಾರಿಗೂ ಆ ನೆನಪು ಬರುವುದು. 'ಅವನ ಕೈಯಿಂದ ಕೊಡಿಸುವ ಕೆಲಸ ಮಾಡಿದರಲ್ಲ' ಎಂದುಕೊಂಡು ವಾಪಸ್ಸು ಹೋಗೋಣವೆಂದರೆ ಇಪ್ಪತ್ತು ಮೈಲಿ ಬಂದಾಗಿತ್ತು. ಹೋದ ತಕ್ಷಣ ಮನಿಯಾರ್ಡರ್ ಮಾಡೋಣವೆಂದರೆ ಅವನ ಹೆಸರು ಕೇಳಿಕೊಂಡಿರಲಿಲ್ಲ. ಯಾವುದೋ ಒಂದು ಋಣ ನಮ್ಮ ಮೇಲೆ ಉಳಿಯಿತಲ್ಲಾ ಎಂದುಕೊಂಡು ಸಮಾಧಾನವಾಗದೆ ಇದ್ದೆವು. ಈಗ ನೆನಪಾಗಿ ಡಿವಿಯೇರ್ಷ ರಸ್ತೆ ಬಿಟ್ಟು ಊರೊಳಕ್ಕೆ ಹೋಗಿ ಹಣವನ್ನು ಕೊಟ್ಟು ಬಂದಾಗ ಸಮಾಧಾನವಾಯಿತು.

ಬೆಂಗಳೂರು-ಮುಂಬಯಿ ಪ್ರಯಾಣ

ಬೆಂಗಳೂರಿಗೆ ಬರುತ್ತಲೇ ಮುಂದಿನ ಸಿದ್ಧತೆ ಮಾಡಿಕೊಳ್ಳಲಾಯಿತು. ಎರಡು ಮೂರು ದಿನಗಳಿಂದ ಇದ್ದ ಮಂಕು ಕವಿದ ವಾತಾವರಣ ಕರಗಿ ಆಹ್ಲಾದಕರ ಬಿಸಿಲು ಹರಡಿತ್ತು, ದಿ. 23-11-80 ಮುಂಜಾನೆ ಎಂಟಕ್ಕೆ ಬಸವ ಮಂಟಪದಿಂದ ಹೊರಟೆವು. ಅನೇಕ ಸಹೃದಯಪೂರ್ಣ ಸದ್ಭಕ್ತರು ನಮಗಿಂತ ಮೊದಲೇ ಅಲ್ಲಿಗೆ ಆಗಮಿಸಿದ್ದು, ಆರತಿ ಮಾಡಿ ಸ್ವಾಗತಿಸಿದರು. ಶರಣೆ ಡಾ|| ಲಲಿತಾ ಗುರುಬಸವಯ್ಯ ಅವರು ಮಾಲಾರ್ಪಣೆ ಮಾಡಿ ಒಳಗೆ ಕರೆದೊಯ್ದರು. ನಮ್ಮ ಕಲ್ಪನೆಗೂ ಮೀರಿ ಅಭಿಮಾನಿಗಳು ಆಗಮಿಸಿ ಬೀಳ್ಕೊಟ್ಟರು. ಅಷ್ಟರಲ್ಲಿ ಕರ್ನಾಟಕ ವಿಧಾನ ಪರಿಷತ್ತು ಸಭಾಧ್ಯಕ್ಷೆ ಶ್ರೀಮತಿ ಬಸವ ರಾಜೇಶ್ವರಿಯವರು ಆಗಮಿಸಿ ಮಾಲಾರ್ಪಣೆ ಮಾಡಿ, ಒಳಗಿನ ವಿಶೇಷ ಅತಿಥಿಗಳ ಕೋಣೆಗೆ ಕರೆದೊಯ್ದರು.

ವಿಮಾನ ಹೊರಡುವ ಮುಂಚಿನ ಕರೆ ಬಂದ ತಕ್ಷಣ ಅವರೂ ನಮ್ಮೊಡನೆ ಹಿಂಬಾಲಿಸಿದರು. ಪೂಜ್ಯರ ಸತ್ಸಂಕಲ್ಪ, ಆಶೀರ್ವಾದ, ಪ್ರೇರಣೆಗಳೇ ನಮ್ಮ ಅಧ್ಯಾತ್ಮಿಕ ಜೀವನವನ್ನು ಮೇಲಕ್ಕೆತ್ತುವ ದೈವೀ ಶಕ್ತಿಗಳು ಎಂದುದನ್ನರಿತು ಪೂಜ್ಯ ಗುರೂಜಿಯವರ ಪಾದಕಮಲಗಳಿಗೆ ನಮಸ್ಕರಿಸಿ ಹೊರಟೆವು. ಶ್ರೀಮತಿ ಬಸವ ರಾಜೇಶ್ವರಿಯವರು ಪವನ ಪಾಲಿಕೆಯವರೆಗೆ ಬಂದು ನಮ್ಮನ್ನು ಬೀಳ್ಕೊಟ್ಟು ಮರಳಿದರು. ನಾವು ಕುಳಿತುಕೊಳ್ಳುವ ಆಸನ ಮಧ್ಯದಲ್ಲಿ ಬಂದಿದ್ದರಿಂದ ಹೆಚ್ಚು ಸನಿಹದಿಂದ ಹೊರಗಿನ ದೃಶ್ಯ ಕಾಣಲಾಗಲಿಲ್ಲ. ವಿಮಾನ ತೆವಳುತ್ತ ಸಾಗಿ ಹೊರಳುವ ಮುನ್ನ ನಮ್ಮೆಲ್ಲ ಜನರು ಸಾಲಾಗಿ ಕಿಕ್ಕಿರಿದು ನಿಂತುದು ಮತ್ತು ಪೂಜ್ಯ ಗುರೂಜಿಯವರು, ಶಿಷ್ಯವೃಂದ ಮುಂದೆ ನಿಂತುದು ಕಾಣ ಬಂದಿತು. ನನ್ನ ಈ ಪ್ರವಾಸಕ್ಕೆ ಹಿನ್ನೆಲೆಯಾಗಿ ಬಸವಣ್ಣನ ಆಶೀರ್ವಾದ, ಪೂಜ್ಯ ಗುರೂಜಿಯವರ ತ್ಯಾಗ-ಔದಾರ್ಯ, ಅಸಂಖ್ಯಾತರ ಶುಭಹಾರೈಕೆ- ಕೊಡುಗೆಗಳು ಇವೆಯಲ್ಲ ಎಂದು ಕೊಂಡು ಮನದಲ್ಲಿ ಕೃತಜ್ಞತೆ ತುಂಬಿ ಬಂದಿತು.

ಪವನ ವಾಹನ ಹಗುರವಾಗಿ ಮೇಲೇರುತ್ತಾ ಹೋಯಿತು. ನನ್ನ ಪಕ್ಕದಲ್ಲೇ ಕೆನಡಾದ ಓರ್ವ ಇಂಜಿನಿಯರರು ಕುಳಿತಿದ್ದು, ಆಸಕ್ತಿತಾಳಿ ಮಾತನಾಡಿದ್ದರಿಂದ ವೇಳೆ ಸರಿದುದೇ ತಿಳಿಯಲಿಲ್ಲ. ಅಗಲುವಾಗ ತಮ್ಮ ವಿಳಾಸಕೊಟ್ಟು, ತಮ್ಮ ದೇಶ ಸಂದರ್ಶಿಸಲು ತಿಳಿಸಿದರು. ಮುಂಬಯಿಯ ವಿಮಾನ ನಿಲ್ದಾಣಕ್ಕೆ ಸುರೇಶ್ ಮಸಳಿ ಬಂದಿದ್ದು, ಮಧ್ಯಾಹ್ನದ ಪೂಜೆ-ಪ್ರಸಾದ ಅವರಲ್ಲಿ ಮುಗಿಸಿ, ಮುಂದೆ ಪರಮೇಶ್ವರವರ ಮನೆಗೆ ಹೋದೆವು.

ಮುಂಬಯಿ ವಿಮಾನ ನಿಲ್ದಾಣದಲ್ಲಿ

ಸಂಜೆಯ ಪೂಜೆ-ಪ್ರಸಾದ ಪರಮೇಶರಲ್ಲಿ ಮುಗಿಸಿ ರಾತ್ರಿ ಹನ್ನೊಂದಕ್ಕೆ ಅವರ ಮನೆ ಬಿಟ್ಟೆವು. ಎಕ್ಸ್‌ಟ್ರಾ ಬ್ಯಾಗೇಜನ್ನು ಒಳಗೆ ಕಳಿಸಬೇಕಿತ್ತು. ಅಲ್ಲಿ ಕೌಂಟರಿನಲ್ಲಿ ಓರ್ವವ್ಯಕ್ತಿ ಸಾಗಾಣಿಕೆಯ ವೆಚ್ಚ ತೆಗೆದುಕೊಳ್ಳುತ್ತಿದ್ದ. ನಾಲ್ಕು ಬ್ಯಾಗೇಜಗೆ ನಾಲ್ಕರ ಬದಲಿಗೆ ಎಂಟು ರೂಪಾಯಿ ಕೇಳುತ್ತಿದ್ದ; ನಾಲ್ಕಕ್ಕೆ ಮಾತ್ರ ರಸೀತಿ ಕೊಡುತ್ತಿದ್ದ. ಇದನ್ನು ಕಂಡು ಬೇಸರ ಪಟ್ಟ ಪರಮೇಶ್ವರವರು ಸಿಟ್ಟಿಗೆದ್ದು ಎಷ್ಟು ಮೋಸ ಮಾಡುತ್ತೀರಿ ಎನ್ನುತ್ತಲೇ ಮುಷ್ಕರ ಹೂಡುವಂತೆ ಅವನು ತೆಗೆದುಕೊಳ್ಳಲು ನಿರಾಕರಿಸಿದ. ನಮ್ಮ ದೇಶದ ಅಸಹ್ಯ ಭ್ರಷ್ಟಾಚಾರ ಲಂಚಗುಳಿತನದ ಅಷ್ಟಪದಿ ಹಿಡಿತದಲ್ಲಿ ನಾವೆಲ್ಲ ನಿಸ್ಸಹಾಯಕರು. ತಿದ್ದುವದು ಅಸಾಧ್ಯ; ಸಹಿಸಿಕೊಳ್ಳುವುದು ಅಸಹನೀಯ. ಆದರೇನಂತೆ! ಕುರುಡರ ರಾಜ್ಯದಲ್ಲಿ ಕಣ್ಣಿದ್ದವನು ಅಪರಾಧಿ. ಮೂಕವಾಗಿ ಸಹಿಸಿಕೊಳ್ಳಬೇಕು. ರಕ್ಕಸ ವ್ಯವಸ್ಥೆಯ ವಿರುದ್ಧ ನಿಸ್ಸಹಾಯಕನಾದ ಓರ್ವನು ಏನು ತಾನೆ ಮಾಡಬಲ್ಲ. ಅವನು ಕೇಳಿದಷ್ಟು ಕೊಡಿರಿ ಎಂದು ಜಲಪುರರು ನುಡಿದು ಸಂಧಾನಕ್ಕೆ ಬಂದರೂ ಅವನು ತೆಗೆದುಕೊಳ್ಳಲಿಲ್ಲ. ಆಗ ಕೂಲಿಯವರು ಗಾಡಿಯನ್ನೂ ಕೊಡದೆ, ತಾವೂ ಕೈ ಹಾಕದೆ ಇದ್ದಾಗ, ಭಾರವಾದ ಲಗೇಜನ್ನು ಪರಮೇಶ್ ಮತ್ತು ಜಲಪುರರೇ ಒಳಗೆ ತಳ್ಳಬೇಕಾಯಿತು. ಇಲ್ಲಿ ಇನ್ನೊಂದು ಮಾಹಿತಿ ನಿಮಗೆ ಕೊಡಬಯಸುವೆ. ಏಕೆಂದರೆ ನೀವೂ ಯಾವಾಗಲಾದರೂ ವಿಮಾನ ಪ್ರಯಾಣ ಕೈಗೊಳ್ಳಬೇಕಾದೀತು. ನಿಮ್ಮ ಪ್ರಯಾಣದ ಸೂಟ್‌ಕೇಸ್ ತೀರಾ ಗಟ್ಟಿಯವು ಇರಬೇಕು. ಬಹುಶಃ ನಮ್ಮ ಸುಪ್ರಸಿದ್ಧ ಕೆ. ಎಸ್. ಆರ್. ಟಿ. ಸಿ. ಬಸ್ಸಿನಲ್ಲಿ ಒಯ್ದರೆ ಅಷ್ಟು ಹಾಳಾಗಲಿಕ್ಕಿಲ್ಲ; ಅಥವಾ ಲಾರಿಯಲ್ಲಿ ಸಾಗಿಸಿದರೂ ಇಷ್ಟು ವಿರೂಪಗೊಳ್ಳಲಿಕ್ಕಿಲ್ಲ, ವಿಮಾನದಲ್ಲಿ ಒಂದು ಗಂಟೆ ಹತ್ತು ನಿಮಿಷಗಳ ಪ್ರಯಾಣದಲ್ಲಿ ಅಷ್ಟು ಹಾಳಾಗಿದ್ದವು. ನಮ್ಮ ಲಗೇಜ್. ತಾ|| 22-11-1980 ರಂದು ಮಧ್ಯಾಹ್ನ ನಾಲ್ಕು ಗಂಟೆಗೆ ಕೊಂಡ ಸೂಟ್‌ಕೇಸ್‌ಗಳು 23-11-1980 ರಂದು ಬೆಳಿಗ್ಗೆ 12ಕ್ಕೆಲ್ಲ ಆಕರಾಳ ವಿಕರಾಳಗೊಂಡು, ಯುದ್ಧದಲ್ಲಿ ಪೆಟ್ಟು ತಿಂದು ಕೈ ಕಾಲು, ಮೂಗುಬಾಯಿ ಹರಿದ ಸೈನಿಕರಂತೆ, ಬೆಲ್ಟ್ ಕಿತ್ತು, ಹಿಡಿ ಹರಿದು, ಬಾಯಿ ತೆರೆದು ಬಿದ್ದಿದ್ದರೆ ಎಷ್ಟು ವ್ಯಥೆಯಾಗಲಿಕ್ಕಿಲ್ಲ! ಅದಿನ್ನಾವ ಪರಿಯಲ್ಲಿ ಎತ್ತಿಇಳಿಸುತ್ತಾರೋ ತೀರಾ ಸೋಜಿಗ! ನಾಲ್ಕು ಸೂಟ್‌ಕೇಸ್‌ಗಳಲ್ಲಿ ಒಂದು ಮಾತ್ರ ಸುವ್ಯವಸ್ಥಿತವಾಗಿತ್ತು. ಅವನ್ನು ಕಟ್ಟಲು ಒಂದು ನೈಲಾನ್ ಹಗ್ಗ ತರಲು ಗಡಿಬಿಡಿಯಲ್ಲಿ ಮರೆತಿದ್ದೆವು. ನಮ್ಮವಷ್ಟೇ ಅಲ್ಲ, ನಮ್ಮ ಸಹ ಪ್ರಯಾಣಿಕರ ಇನ್ನೂ ಅನೇಕ ಸೂಟ್‌ಕೇಸ್ ಸಹ ಹಾಗೆ ಅನಾಥಾವಸ್ಥೆಯಲ್ಲಿ ಎಳೆದೊಯ್ಯಲ್ಪಡುತ್ತಿದ್ದವು. ಆದ್ದರಿಂದ ವಿಮಾನ ಪ್ರಯಾಣಿಕರು ಗಟ್ಟಿಮುಟ್ಟಾದ ಸೂಟ್‌ಕೇಸು ಮತ್ತು ಜೊತೆಗೆ ಬಲವಾದ ನೈಲಾನ್ ವೈರ್ ಒಯ್ಯು

ವುದು ಮರೆಯದಿರಿ. ಇಲ್ಲವಾದರೆ ಕಾಯುವ ಕೋಣೆಯ ಸಭಾಂಗಣದಲ್ಲಿ ನಿಮ್ಮ ಪರಿಸ್ಥಿತಿ ಹಾಸ್ಯಾಸ್ಪದವಾಗಬಹುದು ಅಥವಾ ನಿಮ್ಮ ಸೂಟಕೇಸಿನೊಳಗಣ ಸಾಮಾನು ಪ್ರದರ್ಶನಗೊಂಡು ನಿಮ್ಮನ್ನು ಮುಖಭಂಗಿತ ಮಾಡಬಹುದು. ಆದ್ದರಿಂದ ನನ್ನ ಈ non-profit motive advice ಸ್ವೀಕರಿಸುವಿರಾಗಿ ನಂಬುವೆ.

ಅಮೆರಿಕಾಕ್ಕೆ ಪ್ರಯಾಣಿಸುವ ಪ್ರಯಾಣಿಕರು ತಮ್ಮ ಲಗೇಜ್ ಒಯ್ಯುವ ಬಗ್ಗೆ ವಿವರ ತಿಳಿದರೆ ಒಳ್ಳಿತು. ಕೈಯಲ್ಲಿ ಒಂದು ಬ್ಯಾಗ್ ಬಿಡುತ್ತಾರೆ ಬ್ರೀಫ್ ಕೇಸ್ ಅಥವಾ ಪರ್ಸ್ ಜೊತೆಗೆ. ಇಂಡಿಯನ್ ಏರ್ ಲೈನಿನ, ಆಂತರಿಕ ಪ್ರವಾಸಿಗರಿಗೆ 20 ಕೆ.ಜಿ ಮಾತ್ರ ಅವಕಾಶ. ಅದಕ್ಕಿಂತ ಹೆಚ್ಚಿನದಕ್ಕೆ ಹಣ ಕೊಡಬೇಕು. ಆದರೆ ಅಂತರರಾಷ್ಟ್ರೀಯ, ಮುಖ್ಯವಾಗಿ ಅಮೆರಿಕಾ ಪ್ರವಾಸಿಗರಿಗೆ 64 ಕೆ. ಜಿ ತೂಕಕ್ಕೆ ಅವಕಾಶವುಂಟು. (ಈ ನಿಯಮ ಬೇರೆ ಬೇರೆ ದೇಶ ಮತ್ತು ಏರ್‌ಲೈನ್‌ಗಳಲ್ಲಿ ಬೇರೆ ಬೇರೆಯುಂಟು) ಇಲ್ಲಿ ತೂಕಕ್ಕಿಂತ ಪೆಟ್ಟಿಗೆಯ ಅಳತೆ ಮುಖ್ಯ. ಉದ್ದ ಅಗಲ ಮತ್ತು ಎತ್ತರ ಕೂಡಿಸಿದರೆ ಅದು 55 ಅಂಗುಲ ಮೀರಬಾರದು. ಎರಡೂ ಪೆಟ್ಟಿಗೆಯ ಅಳತೆ 106 ಅಂಗುಲಕ್ಕೆ ದಾಟಬಾರದು. ತೂಕವು ಒಂದೊಂದಕ್ಕೆ 32 ಕೆ. ಜಿ. ಅವಕಾಶವುಂಟು. ನಾವು ಎಲ್ಲಿ ಹೆಚ್ಚಿನ ಹಣ ತರಬೇಕಾದೀತೋ ಎಂದು ಅಂಜಿ ಅಂಜಿ ಸಾಮಾನು ತುಂಬಿದೆವು. ಆದರೆ ಮುಂಬೈಯಲ್ಲಿ ಅದು 90 ಕೆ. ಜಿ. ಮಾತ್ರವಾಗಿ ಇನ್ನೂ 38 ಕೆ. ಜಿ. ತರಬಹುದಾಗಿತ್ತು ಎನಿಸಿದಾಗ ಅಷ್ಟು ಪುಸ್ತಕ ತರಬಹುದಾಗಿತ್ತು ಎಂದು ಪಶ್ಚಾತ್ತಾಪವಾಯಿತು.

ತಮ್ಮ ಸ್ನೇಹಿತರ ಪರಿಚಯದಿಂದ ಪರಮೇಶ್ವರವರು ಎಲ್ಲ ಕೆಲಸ ಬೇಗ ಮುಗಿಸಿದರು. ಅಂತರರಾಷ್ಟ್ರೀಯ ಪ್ರಯಾಣಿಕರು ತೆರಬೇಕಾದ ನೂರು ರೂಪಾಯಿಗಳ ತೆರಿಗೆ ಕೊಟ್ಟು, ಬ್ಯಾಗೇಜ್ ಕೆಲಸ ಮುಗಿಸಿ, ವಿಮಾನ ನಿಲ್ದಾಣದಲ್ಲಿ ಕೊಡುವ ಇಪ್ಪತ್ತೈದು ಡಾಲರ್ ಎಕ್ಸ್‌ಚೇಂಜ್ ಪಡೆದು ಮುಂದೆ ಸಾಗಿದೆವು. ಪರಮೇಶ್ವರವರು ಮೇಲಾಧಿಕಾರಿಗಳನ್ನು ಕೇಳಿಕೊಂಡು ಪ್ರಯಾಣಿಕರ ಲಾಂಜ್‌ತನಕ ಬಂದು, ಇನ್ನು ನಾವು ಬಸ್ಸು ಏರಲು ಹೊರಟಾಗ ಬೀಳ್ಕೊಟ್ಟು, ಶುಭಹಾರೈಸಿ ಜಲಪುರರೊಡನೆ ಮರಳಿದರು.

ಮುಂಬಯಿ–ನ್ಯೂಯಾರ್ಕ್ ಪ್ರಯಾಣ

ನಾವು ಏರ್ ಇಂಡಿಯಾ ವಿಮಾನದಲ್ಲಿ ಸಾಗಿ ಕುಳಿತೆವು. ಬಹುದೊಡ್ಡ ಭಾಗ್ಯವೆಂಬಂತೆ ನಮಗೆ ಕಿಟಕಿಯ ಪಕ್ಕದ ಆಸನ ಸಿಕ್ಕಿತು. ನಾವು ವಿವಂಚಿತರಾಗಿದ್ದೆವು. ಮಧ್ಯದ ಆಸನಗಳಾದರೆ ಯಾವ ನಿಸರ್ಗ ಸೌಂದರ್ಯವನ್ನೂ ಸವಿವ ಅವಕಾಶವಿ

ರದು. ಅದು ಕಣ್ಣು ಕಟ್ಟಿ ಕನ್ನಡಿಯ ತೋರಿದಂತೆ ಬಾಯಿಗೆ ಬಟ್ಟೆ ಕಟ್ಟಿ ಎದುರಿಗೆ ತಿನಸುಗಳನ್ನು ಇಟ್ಟಂತೆ!

ಗಗನ ಸಖಿಯರು ಸೂಚನೆ ಕೊಡುತ್ತಿದ್ದಂತೆಯೇ ವಾಹನವು ತೆವಳತೊಡಗಿತ್ತು. ಅದು ಬೃಹತ್ತಾದ ಏರ್ ಬಸ್. ವಿಪರೀತ ಗಾತ್ರದ್ದು, ನೂರಾರು ಆಸನಗಳನ್ನು ಒಳಗೊಂಡು ನೋಡಲು ತುಂಬಾ ರಮಣೀಯವಾಗಿತ್ತು. ಮಂದವಾದ ಬೆಳಕು. ಮಧುರವಾದ ಮೃದು ಸಂಗೀತ. ಗಾಳಿಯಲ್ಲಿ ತುಂಬಿದ್ದ ಸುವಾಸನೆಯ ವಾತಾವರಣ. ಯಾವುದೋ ಒಂದು ಸ್ವಪ್ನಲೋಕವನ್ನು ಪ್ರವೇಶಿಸಿದ ಅನುಭವ.

ಬೆಳಗಿನ 2-55ಕ್ಕೆ ಪವನ ಪಾಲಿಕೆಯು ಹಾರಿತು. ಆಗ ಕಿಟಕಿಯಲ್ಲಿ ಇಣುಕಿದರೆ ಬೆರಗಾಗುವ ದೃಶ್ಯ. ಏಕೆಂದರೆ ಎರಡು ಆಕಾಶಗಳು ಕಾಣುತ್ತಿದ್ದವು. ಒಂದು ಮೇಲೆ ಇನ್ನೊಂದು ಕೆಳಗೆ. ಮೇಲೆ ನೀರಭ್ರ, ಕಪ್ಪು ಆಕಾಶದಲ್ಲಿ ಪ್ರಖರವಾಗಿ ಮಿನುಗುವ ತಾರೆಗಳು. ಕೆಳಗೆ ಹಾಸಿರುವ ಭೂಮಿಯ ಕಪ್ಪು ಹಿನ್ನೆಲೆಯಲ್ಲಿ ಮುಂಬಯಿಯ ಮಾನವ ನಿರ್ಮಿತ ವಿದ್ಯುತ್ ದೀಪಗಳು ಹೆಣೆದ ನಕ್ಷತ್ರ ಮಂಡಲ. ಅದು ಆಕಾಶವೋ ಇದು ಆಕಾಶವೋ ಎಂಬ ಭ್ರಮೆ. ಆಕಾಶದ ಪ್ರತಿಬಿಂಬವೇನಾದರೂ ಕೆಳಗೆ ಮೂಡಿದೆಯೋ ಎಂಬ ದಿಗ್ಭ್ರಾಂತಿ. ಹಾರುತ ಹಾರುತ ಮೇಲಕೆ ಏರುತ ವಿಮಾನವು ಒಂದು ಮಟ್ಟವನ್ನು ಹೊಂದಿತು. ಈ ವರೆಗಿನ ಏರಿಳಿತಗಳು ನಿಂತು ಗಂಭೀರಗಮನೆಯಾಗಿ ಸಾಗಿತು. ಮುಂಬಯಿಯ ಪ್ರದೇಶದಾಟದ ಮೇಲೆ ಕೇವಲ ಕತ್ತಲೆ. ಹೀಗಾಗಿ ತೆಪ್ಪನೆ ಕಣ್ಣು ಮುಚ್ಚಿಕೊಳ್ಳಬೇಕಾಯಿತು.

ಅಲ್ಲದೆ ನಿದ್ರೆ ಒಂದು ವಾರದಿಂದ ಹತ್ತಿರ ಬರಲಾವಕಾಶವಿಲ್ಲದೆ ಹೊಂಚುಹಾಕುತ್ತಿತ್ತು. ಏನಾದರೂ ಗಮಗಮ ತಿಂಡಿಮಾಡಿ ಮುಚ್ಚಿಟ್ಟರೆ ದೊಡ್ಡವರಾರೂ ಇಲ್ಲದಾಗ ಮಕ್ಕಳು ಕದ್ದೋಡಿ ಬಂದು ತಿನ್ನಲು ಹೊಂಚು ಹಾಕುವಂತೆ ಅದರ ಪರಿಸ್ಥಿತಿಯಾಗಿತ್ತು. ಸಮಯ ಸಿಗುತ್ತಿದ್ದಂತೆಯೇ ಮಕ್ಕಳು ಗಬಕ್ಕನೇ ತಿನ್ನುವಂತೆ, ನಿದ್ರೆ ಈಗ ಬಳಸಿಕೊಳ್ಳುತ್ತಿತ್ತು. ಕೆಲಸದ ವಿಪರೀತ ಒತ್ತಡ, ಮದ್ರಾಸಿಗೆ ರಾತ್ರಿಯೇ ಪಯಣಿಸಿ ಎರಡು ಬಾರಿ ಹೋಗಿ ಬಂದುದು, ಬೀಳ್ಕೊಡುಗೆ ಸಮಾರಂಭ, ಬರುಹೋಗುವ ಅತಿಥಿಗಳ ಸದ್ಭಕ್ತರ ಸಂದರ್ಶನ, ಸಿದ್ಧತೆಯ ತರಾತುರಿ–ಈ ಎಲ್ಲಕ್ಕೂ ಪೂರ್ಣ ವಿರಾಮ ನೀಡುವಂತೆ, ಮುಂಬಯಿ–ನ್ಯೂಯಾರ್ಕ್ ವಿಮಾನ ಹಾರಿದಾಗ ನಿದ್ರೆ ಬಂದು ಹೊದ್ದಿಕೆಯನ್ನು ಹೊದ್ದಿಸಿತು. ಕೆಲವರು ಯಾರ ಮಧ್ಯೆ ಇದ್ದರೂ ಎಲ್ಲಿದ್ದರೂ ತೂಕಡಿಸಿ, ನಿದ್ರಿಸಿ ಆರಾಮ ಪಡೆದುಕೊಳ್ಳುವರು. ನನ್ನ ಸ್ವಭಾವಕ್ಕೆ ಅದೂ ಸಾಧ್ಯವಿಲ್ಲ.

ಅರುಣೋದಯವು ಆಕಾಶದಲ್ಲಿ ಕೆನ್ನೀರು ಚೆಲ್ಲಿದಾಗ ಎಚ್ಚರಗೊಂಡು ಇಣುಕಿದೆ. ದೆಹಲಿಯನ್ನು ತಲ್ಪಿದ್ದೆವು. ನಮಗೆ ಯಾರೋ ಹೇಳಿದ್ದರು, 'ರಾತ್ರಿಯಲ್ಲಿ ಪ್ರಯಾಣ ಹೊರಡುವಿರಿ. ಇಡೀ ನಿಮ್ಮ ಪ್ರಯಾಣ ಪೂರ್ತಿ ಕತ್ತಲೆಯಲ್ಲೇ ಎಂದು, ಹಾಗಾಗದೆ ದೆಹಲಿಗೆ ಬೆಳಕಾಯಿತು. ಸುದೈವದಿಂದ ಪೂರ್ವದಿಂದ ಪಶ್ಚಿಮ ದೆಡೆಗೆ ಸೂರ್ಯ ನೊಡನೆ ನಾವು ಪ್ರಯಾಣಿಸಿದೆವು. ಹೀಗಾಗಿ ಸುದೀರ್ಘ ಪ್ರಯಾಣದಲ್ಲಿ ಕತ್ತಲೆ ಹೆದರಿ ಸಮೀಪ ಸಹ ಸುಳಿಯಲಿಲ್ಲ. ಮುಂಬಯಿ–ದೆಹಲಿ–ಕುವೈತ್–ಲಂಡನ್–ನ್ಯೂಯಾರ್ಕ್ ಹೀಗೆ ನಮ್ಮ ಪಯಣಸಾಗಿತು. ಕಿಟಕಿಯಾಚೆ ನೋಡಿದಾಗ ಕೆಳಗಿನ ದೃಶ್ಯಗಳೆಲ್ಲ ಜೀವತಳೆದು ಕಾಣಬರುತ್ತಿದ್ದವು. ಈ ಸುದೀರ್ಘ ಪ್ರಯಾಣ ಮುಂಬಯಿಯಲ್ಲಿ ಬೆಳಗಿನಜಾವ ಆರಂಭವಾಗಿ, ಮುಂಜಾನೆಗೆ ದೆಹಲಿ ಮುಟ್ಟಿ, ನ್ಯೂಯಾರ್ಕ್‌ನ್ನು ರಾತ್ರಿಯಲ್ಲಿ ತಲ್ಪಿತು. ಒಂದೇ ದಿನದ ಪ್ರಯಾಣ ಎಂದು ತಪ್ಪು ತಿಳಿಯಬೇಡಿ. ನಾವು ಗಡಿಯಾರವನ್ನು 13 ತಾಸಿಗೆ ಬದಲಿಸಬೇಕಾಗುತ್ತದೆ. ಮಾತ್ರವಲ್ಲ ಎಲ್ಲೋ ಅರ್ಧ ದಿನವನ್ನೇ "ಕಳೆದುಕೊಂಡು" ಬಿಡುತ್ತೇವೆ. 23ಕ್ಕೆ ಬೆಂಗಳೂರಿಂದ ಹೊರಟು 25–11–80ಕ್ಕೆ ನೂಯಾರ್ಕ್ ತಲುಪುತ್ತೇವೆ ಎಂದು ತಿಳಿದ ನಾವು ಏನೋ ಕಳೆದುಕೊಂಡಂತೆ ಎನಿಸದೆ? ಅಂತೂ ಸೋಮವಾರ ಸಂಜೆ ನಾಲ್ಕುವರೆಗೆ ಬಂದಿಳಿದೆವು.

ಇದು ಬದುಕಿನ ಸಿಂಹಾವಲೋಕನವನ್ನು ನೆನಪಿಗೆ ತರುತ್ತದೆ. ಪ್ರಯಾಣ ಮಧ್ಯದಲ್ಲಿ ಬೆಟ್ಟ–ಗುಡ್ಡಗಳನ್ನು, ಗಿರಿ–ಕಂದರಗಳನ್ನು, ನದಿ–ಸಮುದ್ರಗಳನ್ನು, ಹಿಮಾಚ್ಛಾದಿತ ಬೆಟ್ಟಗಳನ್ನು, ವಿಶಾಲವಾದ ಮರುಭೂಮಿಗಳನ್ನು, ವನಪ್ರದೇಶ ಗಳನ್ನು, ಕುರುಚಲು ಕಾಡನ್ನು ಕಾಣುತ್ತಾ ಬರುತ್ತೇವೆ. ಅದರಂತೆಯೇ ನೋವು–ನಲಿವನ್ನು, ರಾಗ–ದ್ವೇಷಗಳನ್ನು, ಅಭಿಮಾನ–ಅಸೂಯೆಗಳನ್ನು, ಸ್ತುತಿ–ತೆಗಳಿಕೆ ಗಳನ್ನು ಎದುರಿಸುತ್ತೇವೆ. ಲೋಕ ಎಷ್ಟು ಅದ್ಭುತ. ನಿಸರ್ಗದ ವೈವಿಧ್ಯತೆಯಷ್ಟೇ ಮಾನವನ ವೈವಿಧ್ಯತೆ! ಮೋಡಗಳು ಹಾಯ್ದು ಬರುವಾಗ ಕ್ಷಣಕಾಲ ಬಿಸಿಲು–ಕ್ಷಣ ಕಾಲ ನೆರಳು. ಹಾಗೆಯೇ ಅವರಿವರ ಪ್ರಭಾವಕ್ಕೆ ಒಳಗಾಗುವ ಅನೇಕ ಆತ್ಮೀಯರು ದೂರಸರಿದು ದ್ವೇಷಿಸುತ್ತಾರೆ; ಅಪಾರ್ಥ ತಿಳಿಯುತ್ತಾರೆ. ಮೋಡ ಸರಿದು ಹೊಂಬಿಸಿಲು ಚೆಲ್ಲುವಂತೆ ಇನ್ನು ಕೆಲವರು ತಪ್ಪು ತಿಳುವಳಿಕೆ ಕಳೆದುಕೊಂಡು ಹತ್ತಿರ ಬರುತ್ತಾರೆ; ಆದರಿಸುತ್ತಾರೆ. ನಿಸರ್ಗದ ಕುರೂಪ–ಸುರೂಪಗಳನ್ನು, ಸಿರಿತನ–ಬಡತನಗಳನ್ನು ಸಮದೃಷ್ಟಿಯಿಂದ ಕಾಣುವುದು ಅವಶ್ಯವೂ ಅನಿವಾರ್ಯವೂ ಆದಂತೆ ಮಾನವನ ರಾಗ–ದ್ವೇಷ, ತೆಗಳಿಕೆ–ಹೊಗಳಿಕೆಯನ್ನು ಸ್ವೀಕರಿಸಬೇಕಾದುದೂ ಅಷ್ಟೇ ಅನಿವಾರ್ಯ ಮತ್ತು ಅವಶ್ಯಕ.

ಇಲ್ಲೊಂದು ತಾತ್ತ್ವಿಕ ತುಣುಕು. (Philosophical thought bit) ನೆನಪು ಬರುತ್ತಿದೆ; ಪ್ರಸ್ತಾಪಿಸುವ ಆಸೆಯಾಗುತ್ತಿದೆ. (1) ಮುಂಬಯಿಯಿಂದ ನಾವು ಹೊರಟಾಗ ಕತ್ತಲೆಯಿತ್ತು, ದೆಹಲಿಗೆ ಬರುವಾಗ ಬೆಳಕಾಯಿತು, ಪ್ರಯಾಣವೆಲ್ಲ ಬೆಳಕಿನಲ್ಲಿಯೆ! (2) ಒಂದು ವೇಳೆ ಸಂಜೆ ಏಳಕ್ಕೆ ಹೊರಟಿದ್ದರೆ ಪ್ರಯಾಣಪೂರ್ತಿ ಕತ್ತಲಲ್ಲೇ ಸಾಗುತ್ತಿತ್ತು. ಆರಂಭ, ಮಧ್ಯ, ನಿಲುಗಡೆ ಎಲ್ಲ ಕತ್ತಲಲ್ಲೇ ಆಗುತ್ತಿತ್ತು. (3) ಸಂಜೆ ನಾಲ್ಕೈದಕ್ಕೆ ಹೊರಟಿದ್ದರೆ ಬೆಳಕಿನಲ್ಲಿ ಪ್ರಯಾಣ ಆರಂಭವಾಗಿ ಕತ್ತಲೆ ಯಲ್ಲಿ ಅವಸಾನವಾಗುತ್ತಿತ್ತು. ಇದೇ ರೀತಿ ಜೀವನದಲ್ಲೂ ಸಂಭವಿಸಿದೆ (1) ಅಂಗುಲಿ ಮಾಲ, ನನ್ನಯ್ಯ, ವಾಲ್ಮೀಕಿ, ವೇಮನ ಮುಂತಾದವರು ಕತ್ತಲಲ್ಲಿ ಹುಟ್ಟಿದ್ದರು, ಆದರೆ ಬಲು ಬೇಗನೇ ಬೆಳಕಿನ ಲೋಕವನ್ನು ಪ್ರವೇಶಿಸಿ, ಬೆಳಕಿನ ಬಯಲಲ್ಲಿ ಬಯಲಾದರು. (2) ಇನ್ನೂ ಕೆಲವರು, (ಬಹುಪಾಲು ಜನರು) ಅಜ್ಞಾನದ ಕತ್ತಲೆ ಯಲ್ಲೇ ಹುಟ್ಟಿ, ಅಲ್ಲಿ ಬೆಳೆದು, ಕಡೆಗೂ ಅಲ್ಲಿಯೇ ಅವಸಾನ ಹೊಂದುವರು. (3) ಇನ್ನು ಕೆಲವರು ಕೆಲವು ಆದರ್ಶಗಳನ್ನು ಇರಿಸಿಕೊಂಡು ಜೀವನದ ಆರಂಭವನ್ನು ಬೆಳಕಿನಲ್ಲಿ ಮಾಡಿದರೂ ಬರುಬರುತ್ತ ಪರಿಸರ, ಸ್ನೇಹಿತರ ಪ್ರಭಾವಕ್ಕೆ ಒಳಗಾಗಿ ದುರ್ಗುಣ, ದುಶ್ಚಟ, ದುರ್ವಿಚಾರಗಳ ಕತ್ತಲೆಯನ್ನು ಪ್ರವೇಶಿಸಿ ಅಲ್ಲಿಯೇ ಪರ್ಯವಸಾನ ಹೊಂದುವರು.

ಈ ಪ್ರಯಾಣದಲ್ಲಿ ಆನಂದಿಸಬಹುದಾದ ಸುಂದರ ದೃಶ್ಯವೆಂದರೆ ನಾವು ಮೋಡ ಗಳೊಡನೆ ಸ್ಪರ್ಧಿಸುವುದು. ತಮ್ಮ ಪಾಡಿಗೆ ತಾವು ತೇಲುವ ಮೋಡಗಳೊಡನೆ ಘರ್ಷಣೆಗಿಳಿದು ಅವುಗಳ ಶಾಂತಿ ಕಲಕಿ, ಚದುರಿಸಿ, ಅವನ್ನು ಮೆಟ್ಟಿ, ಮೇಲೇರಿ, ಇನ್ನೂ ಮೇಲಕ್ಕೇರಿ ಸೂರ್ಯನರಮನೆಯನ್ನು ಪ್ರವೇಶಿಸಿ, ಅವುಗಳನ್ನು ಮೆಟ್ಟಿದ ಅಟ್ಟಹಾಸದ ಆನಂದ ಹೊಂದುವದು. ಆಗ ನೋಡಬೇಕು ನಮ್ಮ ಸೂರ್ಯನ ಚಿನ್ನಾಟ ವನ್ನು. ಈಗ ಅವನ ಮತ್ತು ನಮ್ಮ ನಡುವೆ ಯಾರ ಅಡ್ಡಿ ಇಲ್ಲ. ಮೇಲೆ ವಿಶಾಲ ಬಾನಂಗಣ, ಕೆಳಗೆ ಹಂಸೆಗಳು ಹಿಂಡು ಹಿಂಡಾಗಿ ತೇಲುವಂತೆ ಕಾಣುವ ಮೋಡಗಳ ಹಿಂಡು.

ಕೆಳಗೆ ವಿಶಾಲ ಸಮುದ್ರವಿದ್ದು, ಮೋಡಗಳು ಚೆಲ್ಲಾಪಿಲ್ಲಿಯಾಗಿ ಅಡ್ಡಾಡು ತ್ತಿದ್ದಾಗ ಸರೋವರದ ನೀರಿನಲ್ಲಿ ತೇಲುವ ಹಂಸೆಗಳಂತೆ ಅವುಗಳು ಕಾಣಬರುವವು. ಹಾಗಲ್ಲದೆ ಕೆಳಗೆ ನೆಲ, ವನ, ಬೆಟ್ಟಗಳಿದ್ದರೆ ಮೋಡಗಳ ತೆಳುವಾದ ಹರಿದಾಟ ವಧುವಿನ ಮುಖಕ್ಕೆ ಹಾಕಿದ ಅವಕುಂಠನದಂತೆ ತೋರಿಬರುವುದು. ಉತ್ತರ ಭಾರತದ, ಕೆಲವು ಜನರಲ್ಲಿ ವಧುವನ್ನು ಚೆನ್ನಾಗಿ ಅಲಂಕರಿಸಿ, ಬಿಳಿಯ ಬಣ್ಣದ ತೆಳುವಾದ ಅವಕುಂಠನ ಹಾಕುವುದುಂಟು. ಆ ತೆಳು ಪರದೆಯ ಆಚೆ ಆಭರಣಗಳು

ರಮ್ಯವಾಗಿ ಕಾಣಬರುವಂತೆ ನಿಸರ್ಗದ ಚೆಲುವೂ ಮೋಡಗಳ ಅವಕುಂಠನದಲ್ಲಿ ಹಾಗೆಯೇ ತೋರಿಬರುವುದು. ಮೋಡಗಳು ಪಟ್ಟವಾಗಿ ಒಂದರೊಡನೊಂದು ಒಟ್ಟಾಗಿಯೇ ಸಾಗುತ್ತಿದ್ದರೆ ಹಾಲಿನ ಸಮುದ್ರವನ್ನು ಮಥಿಸುವಂತೆ ಕಾಣುವುದು. ಬಿಳಿಯ ಆನೆಗಳು ಹಿಂಡುಹಿಂಡಾಗಿ ಓಡುವಂತೆ, ಕೆಲವೊಮ್ಮೆ ನಾವು ಹಂಸೆಗಳ ಮೇಲೆ ಕೂತು ನವಿರಾಗಿ ಸಾಗಿದಂತೆ ಅನಿಸುವುದು. ಸಣ್ಣ ಹುಡುಗಿ ಇದ್ದಾಗಿನಿಂದಲೂ ನನಗೆ ಕೆಲವು ವಿಚಿತ್ರ ಮತ್ತು ವಿಶೇಷ ಕನಸುಗಳು ಬೀಳುತ್ತಿದ್ದುದುಂಟು. ನನಗೆ ರೆಕ್ಕೆ ಮೂಡಿದಂತೆ, ಒಬ್ಬಳೇ ಆಕಾಶದಲ್ಲಿ ಹಾರಾಡಿದಂತೆ; ಕೆಳಗೆ ನದಿ-ಸಮುದ್ರ, ಮೋಡ-ಬೆಟ್ಟಗಳು ಇರುವಂತೆ. ಈ ವಿಲಕ್ಷಣ ಕನಸುಗಳಿಗಾಗಿ ತುಂಬಾ ನಗುಬರುತ್ತಿತ್ತು. ಆದರೆ ವಿಮಾನದಲ್ಲಿ ತೇಲುವಾಗ ಆ ಕನಸುಗಳು ನಿಜರೂಪ ತಳೆದ ಅನುಭವ. ಸೂರ್ಯ ಕಿರಣಗಳು ಮೋಡಗಳ ಮೇಲೆ ಬಿದ್ದಾಗಲಂತೂ ವೈವಿಧ್ಯಮಯ ಕಾಂತಿ. ಆಗ ಅನ್ನಿಸುವುದು, ಮೋಡದಿಂದೀಚೆ ಬೆಳಕಿನ ಅರಮನೆ; ಆಚೆ ಮಂಕುಕವಿದ ವಾತಾವರಣ. ಹಾಗೆಯೇ ಅಜ್ಞಾನದ ಪರದೆಯಿಂದೀಚೆ ವೈಶಾಲ್ಯತೆ, ಬೆಳಕು, ದೈವೀ ಜಗತ್ತು; ಆಚೆಗೆ ಸಂಕುಚಿತತೆ, ಅಜ್ಞಾನ, ಹೋರಾಟ, ರಾಗ-ದ್ವೇಷ!

ಕುವೈತ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಾಗ ಬೆಳಗಿನ ಎಂಟು ಗಂಟೆ ಎಂದರು. ಅಲ್ಲಿ ಏರ್ ಇಂಡಿಯಾದ ಸಿಬ್ಬಂದಿ ಬದಲಾದರು. ಬಹುಶಃ ಗಗನ ಸಖಿಯರ ಮುಖಕ್ಕಚ್ಚಿದ ಬಣ್ಣ ಆರುವ ಮೊದಲೇ ಅವರನ್ನು ಬದಲಿಸುವಂತೆ ತೋರುತ್ತದೆ. ಇಳಿಯುವವರು ಇಳಿದರು, ಹತ್ತುವವರು ಹತ್ತಿದರು. ಕುಳಿತಲ್ಲೇ ಕುಳಿತ ನಾವು ಮುಂದೆ ಸಾಗಲೆಂದು ಕುಳಿತೇ ಇದ್ದೆವು. ನಾವು ಹೇಗೋ ಸ್ನಾನ ಮಾಡಿಕೊಂಡು, (ಸ್ಪಂಜ್‌ಬಾತ್) ಬಟ್ಟೆಯನ್ನು ಬಿಸಿನೀರಲ್ಲದ್ದಿ ಮೈಗೊರೆಸಿಕೊಂಡು, ನಂತರ ಪೂಜೆ ಮಾಡಿದೆವು. ಏಕೆಂದರೆ ನಮ್ಮ 'ದೇವರು' ನಾವು ಹುಡುಕಿಕೊಂಡು ಹೋಗುವ ದೇವರಲ್ಲದೆ ನಮ್ಮನ್ನೇ ಹಿಂಬಾಲಿಸಿಕೊಂಡು ಬರುವ ದೇವರಾದ್ದರಿಂದ, ಕುಳಿತಲ್ಲೇ ಪೂಜಿಸಿ ತೀರ್ಥ-ಪ್ರಸಾದ ತೆಗೆದುಕೊಂಡು ತಿಂಡಿ ತಿಂದೆವು. ಊರಿನಿಂದ ಚಪಾತಿಯನ್ನು ತಂದುದರಿಂದ ನಮ್ಮ ಹಸಿವೆಗೆ ಆಹಾರ ಒದಗಿತು. ಏರ್ ಇಂಡಿಯಾದವರ ಹಣ್ಣು-ಹಾಲು, ತರಕಾರಿ ನೆರವಿಗೆ ಬಂದವು. ಏರ್ ಇಂಡಿಯಾದ ಪ್ರಯಾಣದಲ್ಲಿ ಅದೊಂದು ವಿಶೇಷ ಸದವಕಾಶ-ಭಾರತೀಯ ಸಂಸ್ಕೃತಿಗೆ ಪೋಷಕವಾಗಿರುವುದರಿಂದ.

ಕುವೈತ್‌ನಿಂದ ಮುಂದೆ ಸಾಗಿದ ವಿಮಾನದ ಮುಂದಿನ ಇಳಿದಾಣ ಲಂಡನ್. ತೈಲರಾಷ್ಟ್ರಗಳ ಮೇಲೆ ಹಾಯುವಾಗ ನಾವು ಕಂಡುದು ವಿಶಾಲವಾದ ಮರಳ್ಗಾಡುಗಳನ್ನು, ಮಧ್ಯೆ ಮಧ್ಯೆ ತೈಲಾಗಾರಗಳನ್ನು. ಮರಳು ಹಾಸಿಗೆಯ ಮೇಲೆ ಕಪ್ಪು ದಾರದಂತೆ ಹರಿದ ವಸ್ತುಗಳನ್ನು ಕಂಡು ತೈಲಸಾಗಾಣಿಕೆಯ ಕೊಳವೆಗಳಿರಬೇಕೆಂದು ಊಹಿಸಿದೆವು. ಹಸಿರಿನ ಸಂಪರ್ಕವೆ ಇರದ ಬೆಂಗಾಡು. ಮುಂದುವರಿಯುತ್ತ ಲಂಡನ್ನಿಗೆ ಸಾಗುವ ಮಾರ್ಗ ಮಧ್ಯದಲ್ಲಿ ಹಿಮಾಚ್ಛಾದಿತ ಗಿರಿಶೃಂಗಗಳನ್ನು ಕಂಡೆವು. ವಜ್ರದ ಕಿರೀಟದಂತೆ ಸೂರ್ಯ ರಶ್ಮಿಯಲ್ಲಿ ಮಿರುಗುವ ಧವಲ ಹಿಮಕಿರೀಟ ನಿಸರ್ಗದ ಚೆಲುವಿಗೆ ಕನ್ನಡಿ ಹಿಡಿದಿತ್ತು. ಸೂರ್ಯನ ಬೆಳಕಿನಲ್ಲಿ ಮೆಲ್ಲನೆ ಕರಗಿ ನೀರಾಗುವ ಮಂಜು ಮನೋಹರ ದೃಶ್ಯವನ್ನು ಕಣ್ಣೆದುರು ನಿಲ್ಲಿಸುತ್ತಿತ್ತು.

ಲಂಡನ್ ವಿಮಾನ ನಿಲ್ದಾಣದಲ್ಲಿ ತಾತ್ಕಾಲಿಕ ಇಳುಗಡೆ

ಲಂಡನ್ನಿನಲ್ಲಿ ವಿಮಾನ ಇಳಿದಾಗ ಹತ್ತುವ – ಇಳಿಯುವವರಿಗೆ ಅವಕಾಶ. ಅಮೆರಿಕಾ ಯಾತ್ರಿಗಳು ಮಾತ್ರ ಸ್ವಲ್ಪ ಕಾಲ ನಡೆದಾಡಿ ಬರಲು ಅವಕಾಶ. ಆ ವೇಳೆಯಲ್ಲಿ ವಿಮಾನವನ್ನು ಸ್ವಚ್ಛಗೊಳಿಸುವ ಕೆಲಸ ನಡೆಯುವುದು. ಮತ್ತು ವಿಮಾನದ ಚಾಲಕವರ್ಗ, ಗಗನ ಸಖಿಯರ ಸಿಬ್ಬಂದಿಯೂ ಬದಲಾಗುವುದು. ಕುಳಿತು ಕುಳಿತು ಕಾಲು ಜಡ್ಡುಗಟ್ಟಿದ ನಾವು ಮೇಲೆದ್ದು Transits only ಎಂಬ ಬಾಗಿಲ ಮೂಲಕ ಹೊರನಡೆದೆವು. ತಾತ್ಕಾಲಿಕವಾಗಿ ಹೋಗಿ ಬರುವವರಿಗೆ ಬೇರೊಂದು Transit ಪಾಸು ಕೊಡುವರು. ಅವರಿಗಾಗಿಯೇ ವಿಮಾನನಿಲ್ದಾಣದಲ್ಲಿ ಬೇರೊಂದು ರೆಸ್ಟುರಾಂಟು, ಷಾಪಿಂಗ್ ಸೆಂಟರ್, ವಿಶ್ರಾಂತಿ ತಾಣವಿದೆ. ನಾವು ಷಾಪಿಂಗ್ ಸೆಂಟರ್‌ಗೆ ಹೋದೆವು. ನಮಗಿದ್ದುದು ಒಂದೇ ಚಿಂತೆ; 1) ಬೆಂಗಳೂರಿಂದ ಮುಂಬಯಿಗೇ ಸೂಟ್‌ಕೇಸ್ ಕಿತ್ತಿದ್ದರೆ, ಮುಂಬಯಿಯಿಂದ ನ್ಯೂಯಾರ್ಕಿಗೆ ಎಷ್ಟು ಕಿತ್ತಿರಬಹುದು? 2) ಆಗಲೇ ಅಷ್ಟು ಅವಸ್ಥೆಯಾದರೆ ಮುಂದೆಷ್ಟು ಹಗರಣವೋ? ಹೀಗೆ ತ್ರೈರಾಶಿ ಲೆಕ್ಕವನ್ನು ಮಾಡುತ್ತ ಹೇಗೋ ಒಂದು ಬಂಡಲ್ ದಾರವನ್ನು ಸಂಪಾದಿಸಿದೆವು. ಮತ್ತು ದಾರ ಅಲ್ಲಿ ದೊರೆತಾಗ ಆಶ್ಚರ್ಯವಾಯಿತು. ಬಹುಶಃ ಅನೇಕ ವಿಮಾನ ಪ್ರಯಾಣಿಕರು ಇದೇ ಅವಸ್ಥೆಪಟ್ಟು ವಿಚಾರಿಸಿರಬಹುದು. ಬುದ್ಧಿವಂತ ಆಂಗ್ಲರು ಅಲ್ಲಿ ಮಾರಾಟಕ್ಕೆ ಇಟ್ಟಿದ್ದಾರೆ! ಈ ದಾರದ ಉಪಕಾರವನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ! ಈ ಐಡಿಯಾ ಹೊಳೆದುದಕ್ಕೆ ನನ್ನನ್ನೇ ನಾನು ಮೆಚ್ಚಬೇಕೋ ಅಥವಾ ಐಡಿಯಾ ಕೊಟ್ಟುದಕ್ಕೆ ಬಸವಣ್ಣನನ್ನು ಹೊಗಳಬೇಕೋ! ಆಗಬಹುದಾದ ಅವಾಂತರವನ್ನಿದು ತಪ್ಪಿಸಿತು.

ತಲೆಗೆ ಕಟ್ಟಿಕೊಳ್ಳಲು ಏನೂ ತಂದಿರಲಿಲ್ಲ. ನ್ಯೂಯಾರ್ಕಿನಲ್ಲಿ ಇಳಿದಾಗ ತುಂಬಾ ತೊಂದರೆಯಾಗಬಹುದೆಂದು ಒಂದು ಸ್ಕಾರ್ಫ್ ಕೊಳ್ಳೋಣ ಎಂದು ವಿಚಾರಿಸಿದರೆ, ಒಂದು ರೇಷ್ಮೆ ಸ್ಕಾರ್ಫಿಗೆ ಹದಿಮೂರುವರೆ ಪೌಂಡು. ಸುಮಾರು ಇನ್ನೂರ

ಐವತ್ತು ರೂಪಾಯಿ. ಅದೂ ಅರ್ಧ ಮೀಟರಿನ ರೇಷ್ಮೆ ವಸ್ತ್ರ! ಅಂಥ ಹತ್ತಾರು ರೇಷ್ಮೆ ವಸ್ತ್ರಗಳನ್ನು ನಾವು ನೂರು ರೂಪಾಯಿಯಲ್ಲಿ ನಮ್ಮ ದೇಶದಲ್ಲಿ ತಯಾರಿಸ ಬಹುದು. ಅದರ ಆಲೋಚನೆ ಕೈಬಿಟ್ಟು ಉಲ್ಲನ್ನಿನ ಒಂದು ಟೋಪಿ, ಮಫ್ಲರ್ ಕೊಂಡು ಮುನ್ನಡೆದೆವು. ಮರಳಿ ಬಂದು ವಿಮಾನವನ್ನೇರಿದೆವು.

ಇಲ್ಲಿ ಎದುರಾಗುವ ಒಂದು ದೃಶ್ಯವೆಂದರೆ ಮಹಾ ಅಟ್ಲಾಂಟಿಕ್ ಸಾಗರವನ್ನು ದಾಟುವುದು. ಮಾರ್ಗಮಧ್ಯದಲ್ಲಿ ಪರ್ಷಿಯನ್‌ಖಾರಿ, ಮೆಡಿಟರೇನಿಯನ್ ಸಮುದ್ರಗಳನ್ನು ದಾಟಬೇಕಾದರೂ, ಅಟ್ಲಾಂಟಿಕ್ ಸಾಗರವನ್ನು ಗಂಟೆಗಳ ಕಾಲ ಸುಧೀರ್ಘವಾಗಿ ದಾಟಬೇಕಾಗುವುದು. ನೆಲದ ದೃಶ್ಯವನ್ನೇ ಕಾಣದೆ ಸಮುದ್ರ ವನ್ನೇ ದರ್ಶಿಸುತ್ತ ಸಾಗುವಾಗ ನಿಸ್ತರಂಗ ಸಾಗರವು ಆಕಾಶದ ನೆನಪು ತರುವುದು. ಸಮುದ್ರವು ನೀಲವರ್ಣದ ವಿಶಾಲ ಬಾನಿನಂಗಳದಂತೆ ಕಾಣುತ್ತ, ಮಧ್ಯೆ ಹಡಗುಗಳು ತೇಲಿದರೆ, ಆಗಸದಲ್ಲಿ ಹಕ್ಕಿಗಳು ಹಾರುವಂತೆ ತೋರುವದು.

ಅಟ್ಲಾಂಟಿಕ್ ಮಹಾಸಾಗರ ದಾಟಿ, ಉತ್ತರ ಅಮೆರಿಕಾಕ್ಕೆ ಕಾಲಿರಿಸುತ್ತೇವೆ. ಇಂದು ಜಗತ್ತಿನಲ್ಲಿ ಒಂದು ಮಹಾನ್ ಶಕ್ತಿಯಾಗಿ ವೈಜ್ಞಾನಿಕ ರಂಗದಲ್ಲಿ ಮುಖ್ಯ ವಾಗಿ ಅಣುವಿಜ್ಞಾನ ಮತ್ತು ಖಗೋಲವಿಜ್ಞಾನದಲ್ಲಿ ಅಮೆರಿಕಾ ತಲೆಎತ್ತಿ ನಿಂತಿದೆ. ಕೇವಲ ಎರಡು ನೂರು ವರ್ಷಗಳಲ್ಲಿ ಅದ್ಭುತವಾದೊಂದು ನಾಡು ಇಲ್ಲಿ ನಿರ್ಮಾಣ ವಾಗಿದೆ. ಅಮೆರಿಕೆಯನ್ನು ಪ್ರವೇಶಿಸುವ ಮುನ್ನ ಸಂಕ್ಷಿಪ್ತವಾಗಿ ಪರಿಚಯಿಸುವೆ.

ಉತ್ತರ ಅಮೆರಿಕ

ಉತ್ತರ ಅಮೆರಿಕಾದೇಶವು ಜಗತ್ತಿನ ಏಳು ಭೂಖಂಡಗಳಲ್ಲಿ (ಏಸಿಯಾ, ಆಫ್ರಿಕಾ, ಆಸ್ಟ್ರೇಲಿಯಾ, ಯೂರೋಪ್, ಉತ್ತರ ಅಮೆರಿಕ, ದಕ್ಷಿಣ ಅಮೆರಿಕಾ ಮತ್ತು ಗ್ರೀನ್‌ಲ್ಯಾಂಡ್) ಮೂರನೆಯ ಅತಿದೊಡ್ಡ ಭೂಖಂಡ. ಇದಕ್ಕಿಂತಲೂ ಏಸಿಯಾ ಮತ್ತು ಆಫ್ರಿಕಾ ದೊಡ್ಡವು. ಜನಸಂಖ್ಯಾ ದೃಷ್ಟಿಯಿಂದಲೂ ಇದಕ್ಕೆ ಮೂರನೆಯ ಸ್ಥಾನ. ಉತ್ತರ ಅಮೆರಿಕಾವು ಭೂಮಧ್ಯ ರೇಖೆಯ ಉತ್ತರಕ್ಕೆ ಇದೆ. ಆದರೆ ಇದರ ದಕ್ಷಿಣದ ತುದಿಯು ಭೂಮಧ್ಯ ರೇಖೆಯ ದಕ್ಷಿಣಕ್ಕೆ ಬರುವುದರಿಂದ ಅದು ಉಷ್ಣತೆಯ ಹವಾಮಾನದಿಂದ ಕೂಡಿರುತ್ತದೆ. ಇದರ ಅತ್ಯಂತ ಉತ್ತರ ಭಾಗವು ದೀರ್ಘವಾದ ಚಳಿಗಾಲಗಳಿಂದ ಕೂಡಿರುತ್ತದೆ. ನಮ್ಮ ಭಾರತದಂತೆ ಎಲ್ಲ ರೀತಿಯ ಹವಾಮಾನವಿರುವ ಸುಂದರವಾದ ಭೂಖಂಡವಿದು. ನಮ್ಮ ದೇಶದಲ್ಲಿ ಕನ್ಯಾಕುಮಾರಿಯಿಂದ ಸಾಗುತ್ತ ಹೋದಂತೆ ಸುಂದರ ಸಮುದ್ರಗಳನ್ನು, ಅವುಗಳ ತಡೆಗಳನ್ನು ಗಂಭೀರ ಕಾನನಗಳನ್ನು, ಭವ್ಯ ಗಿರಿ–ಕಂದರಗಳನ್ನು, ಹಸಿರು ಮಯ

ವಾದ ಹುಲ್ಲುಗಾವಲನ್ನು, ರಮಣೀಯ ಜಲಪಾತಗಳನ್ನು ವಿಶಾಲ ಮರುಭೂಮಿ ಗಳನ್ನು, ಭರತ ಮಾತೆಗೆ ವಜ್ರ ಕಿರೀಟವಿಡುವ ಹಿಮಾಚ್ಛಾದಿತ ಗೌರಿಶಂಕರ ಮತ್ತು ಇನ್ನಿತರ ಪರ್ವತ ಶ್ರೇಣಿಯನ್ನು, ಸುಂದರ ಸರೋವರಗಳನ್ನು, ಬಗೆಬಗೆಯ ವನ ರಾಜಿಯನ್ನು ಕಾಣಬಹುದಷ್ಟೆ. ಇದೇ ರೀತಿ ಅಮೆರಿಕಾ ಸಹ ಸುಂದರವಾದ ನಾಡು. ಜಗತ್ತಿನ ರಮಣೀಯ ನಿಸರ್ಗ ಸಂಪತ್‌ಭರಿತ ನಾಡುಗಳಲ್ಲಿ ಇದಕ್ಕೂ ಅಗ್ರಶ್ರೇಣಿ. ನಿಸರ್ಗದತ್ತ ಚೆಲುವಿಗೆ ಮಾನವನ ಕೈವಾಡವೂ ಸೇರಿ ಇನ್ನೂ ಸುಂದರವಾಗಿದೆ. ಚೆಲುವು ದೈವೀದತ್ತ, ಸ್ವಾಭಾವಿಕ; ಅದಕ್ಕೆ ಸ್ವಲ್ಪ ಸಂಸ್ಕಾರ ನೀಡಿದರೆ ಇನ್ನೂ ಚೆಂದ. ನಮ್ಮ ನಾಡು ಸಂಪದ್ಭರಿತ ನೈಸರ್ಗಿಕ ಚೆಲುವಿನಿಂದ ಕೂಡಿದ್ದಾದರೂ ಅದು ಹಳ್ಳಿಯ ಚೆಲುವೆಯಂತಿದೆ. ಅಂಥ ತಾಣಗಳನ್ನು ಗುರುತಿಸಿ, ಸಂಸ್ಕರಿಸಿ, ಪ್ರವಾಸ ಯೋಗ್ಯ, ಪ್ರೇಕ್ಷಣೀಯವಾಗಿ ಮಾಡಿದರೆ ನಿಜಕ್ಕೂ ಭಾರತವು ಭೂಸ್ವರ್ಗವೆ! ಆದರೆ ಇಲ್ಲಿ ನಿಸರ್ಗದ ಕೊಡುಗೆಯನ್ನು ಸದುಪಯೋಗ ಪಡಿಸಿಕೊಳ್ಳುವ ಸುವ್ಯವಸ್ಥಿತ ಪ್ರಯತ್ನ ನಡೆದಿದೆ.

ಭವ್ಯವಾದ ಅಣೆಕಟ್ಟುಗಳು, ಜಲಾಶಯಗಳು, ನಗರ ಮಧ್ಯದಲ್ಲೇ ಕಾಣ ಬರುವ ಸರೋವರಗಳು, ದೊಡ್ಡ ದೊಡ್ಡ ಸೇತುವೆಗಳು, ವಾಹನ ಸಂಚಾರ ಸುಗಮ ಗೊಳಿಸಲು ಇರುವ ಫ್ಲೈ ಓವರ್‌ಗಳು, ನೇರವಾದ ಸ್ವಚ್ಛವಾದ ರಸ್ತೆಗಳು, ಬೃಹತ್ ನಗರಗಳು, ನಗರಗಳಲ್ಲಿ ತಲೆ ಎತ್ತಿ ನಿಂತ ಮುಗಿಲು ಮುಟ್ಟುವ ಭವನಗಳು, ಬೃಹತ್ ನಗರಗಳಲ್ಲಿರುವ ಭವ್ಯ ಸ್ಮಾರಕಗಳು ಈ ದೇಶದ ವಿಶೇಷ ಆಕರ್ಷಣೆ. ನಾನು ಸಂದರ್ಶಿಸುತ್ತಾ ಹೋದಂತೆ ನಿಮ್ಮನ್ನೂ ಆ ತಾಣಗಳಿಗೆ ಕರೆದೊಯ್ಯುವೆ. ಈಗ ಮಾತ್ರ ಇಷ್ಟು ಪರಿಚಯ ಸಾಕಿಲ್ಲಿ!

ಕೆನಡಿ ಏರ್‌ಪೋರ್ಟಿನಲ್ಲಿ

ಪವನ ಪಾಲಿಕೆಯು ನ್ಯೂಯಾರ್ಕಿನಲ್ಲಿ ಬಂದಿಳಿಯಿತು. ವಿಮಾನದಿಂದಿಳಿದು ವೀಸಾ ಪಡೆದು ಒಳಗೆ ನಡೆದುದಾಯಿತು. ಅಲ್ಲಿಂದ ಮುಂದೆ ನಮ್ಮ ಸಾಮಾನು ಗಳನ್ನು ಸಂಗ್ರಹಿಸಿಕೊಳ್ಳಲು ಹೊರಟೆವು. ಅಲ್ಲಿಗಾಗಲೇ ಬಂದು ತಿರುಗುವ ಚಕ್ರದ ಮೇಲೆ ಅವು ಯಥಾರೀತಿ ತಿರುಗುತ್ತಿದ್ದವು. ಆ ಚಕ್ರದ ಮೇಲೆ ಅನೇಕ ಪಯಣಿಗರ "ಗಂಟುಮೂಟೆ" ತಿರುಗುತ್ತಿದ್ದರೂ, ಜನರು ತಂತಮ್ಮದನ್ನು ಮಾತ್ರ ಆರಿಸಿಕೊಳ್ಳು ವರು. ಹಾಗೆಯೇ ಕಾಲಚಕ್ರದಲ್ಲಿ ಅವರವರ ಜೀವನದ ಗಳಿಕೆ, ಸಂಸ್ಕಾರ, ಕರ್ಮದ ಗಂಟು ತಿರುಗುತ್ತಿರುವಾಗ ಕೇವಲ ತಂತಮ್ಮದನ್ನು ಮಾತ್ರ ತಾವು ತೆಗೆದುಕೊಳ್ಳ ಬೇಕು. ಇನ್ನೊಬ್ಬರದನ್ನು ತಾನು ಸ್ವೀಕರಿಸಲು ಬರದು, ತನ್ನದನ್ನು ಇನ್ನೊಬ್ಬರು ತೆಗೆದುಕೊಳ್ಳಲುಬರದು.

ನಮ್ಮ "ಗಂಟುಮೂಟೆ" ನಾವು ಆರಿಸಿಕೊಂಡೆವು. ನಾವು ಈ ಮೊದಲೇ ಊಹಿಸಿದ್ದಂತೆ, ಸೂಟ್‌ಕೇಸ್‌ಗಳು "ಗಂಟು ಮೂಟೆ" ಗಳಾಗಿದ್ದವು. ಒಂದು ಸೂಟ್‌ಕೇಸಿನ ಕೀಲಿ ಸಹ ಕಿತ್ತಿತ್ತು. ಸದ್ಯ ದಾರವಿದ್ದುದರಿಂದ ಎದೆಗೆಡದೆ ದಾರ ವನ್ನು ಚೆನ್ನಾಗಿ ಕಟ್ಟೋಣವೆಂದು ತೆಗೆದುಕೊಂಡರೆ ದಾರ ಕತ್ತರಿಸಲು ಚಾಕು ಬ್ಲೇಡ್ ಏನೂ ಇಲ್ಲ. ಯಾರನ್ನೋ ಕೇಳಿದರೆ ಅವರ ಬಳಿ ಸಹ ಇಲ್ಲ. ತಲೆ ಚಕಚಕ ಕೆಲಸ ಮಾಡಿತು. ನಮ್ಮ ಪೂಜಾಟ್ರಂಕಿನಲ್ಲಿ ಬೆಂಕಿಪೊಟ್ಟಣ ಇತ್ತು. ಕಡ್ಡಿ ಗೀಚಿ ದಾರ ಕತ್ತರಿಸಿಕೊಂಡೆವು. ಅಂತೂ ಸುಭದ್ರವಾಗಿ ಕಟ್ಟಿದೆವು. ಒಂದು ದಾರಕ್ಕೆ ಆ ಹಿನ್ನೆಲೆಯಲ್ಲಿ ಎಷ್ಟು ಬೆಲೆ ! ರಾಷ್ಟ್ರದ ಚಕ್ರದಲ್ಲಿ ಎಂಥ ಸಾಮಾನ್ಯನಿಗೂ ಅಂಥ ದೊಂದು ಸ್ಥಾನ ಇದ್ದೇ ಇರುತ್ತೆ. ಯಾರಿಂದ ಯಾವ ವೇಳೆಯಲ್ಲಿ ಮಹತ್ಕಾರ್ಯ ವಾಗುವದೋ ಬಲ್ಲವರಾರು ?

ಸರಿ; ಸಾಮಾನುಗಳನ್ನು ತಳ್ಳುವ ಗಾಡಿಯಲ್ಲಿ ಪೇರಿಸಿಕೊಂಡು ಹೊರಬಂದು ನಮ್ಮನ್ನಾರಾದರೂ ಕರೆಯಲು ಬಂದಿರುವರೇ ಎಂದು ನೋಡಿದರೆ ಯಾರೂ ಇಲ್ಲ ! ಮೈ ತಣ್ಣಗಾದ ಅನುಭವ. ವಿಮಾನದಿಂದ ಇಳಿದು ಬರುವಾಗ ಒಂದೆಡೆ ಮೇಜುಗಳ ಮೇಲೆ ಮೇಸೇಜಸ್ ಎಂದು ಸಂದೇಶಗಳನ್ನು ಇಟ್ಟಿರುತ್ತಾರೆ. ಅಲ್ಲೂ ಏನೂ ಇರಲಿಲ್ಲ. ಹೊರಬಂದು ನೋಡಿದರೆ ಯಾರೂ ಇಲ್ಲ. ಏರ್ ಇಂಡಿಯಾದ ಕೌಂಟರಿ ನಲ್ಲಿ ವಿಚಾರಿಸಿದರೆ ಅಲ್ಲೂ ಏನೂ ಮಾಹಿತಿ ದೊರೆಯಲಿಲ್ಲ. ದಣಿವೋ ಹೇಳಲಸಾಧ್ಯ ವಾದಷ್ಟು. ಪಬ್ಲಿಕ್ ಟೆಲಿಫೋನ್ ಅರಸಿಕೊಂಡು ಹೋದೆ. ಅಲ್ಲಿಂದ ಡಾ|| ಕೋರಿಯ ವರಿಗೆ ಟೆಲಿಫೋನ್ ಮಾಡಿದರೆ ಅವರು ಆಫೀಸಿನಿಂದ ಇನ್ನೂ ಮನೆಗೆ ಬಂದಿಲ್ಲ. ಅವರ ಶ್ರೀಮತಿಯವರು ನಾವು ಬಂದಿಳಿದಿದ್ದೇವೆಂದು ಅರಿತು ಪೇಚಾಡಿದರು. ಆದ ಅನಾ ಹುತವಿಷ್ಟೇ ! 24 ಗಂಟೆಗಳಲ್ಲಿ ಖಂಡಿತಾ ಮುಟ್ಟುವದೆಂದು ಭರವಸೆ ನೀಡಿದ್ದರಿಂದ, ನನ್ನನ್ನು ಬೆಂಗಳೂರಿಂದ ಬೀಳ್ಕೊಟ್ಟ ಆಶ್ರಮದವರು ಕಳಿಸಿದ ತಂತಿ ಅದೇ ಆಗ 4 ಗಂಟೆಗೆ ಡಾ|| ಕೋರಿಯವರು ಮನೆಯಲ್ಲಿಲ್ಲದಾಗ ಮುಟ್ಟಿದೆ. ಹೀಗಾಗಿ ನಮ್ಮ ಬರವಿನ ಸುದ್ದಿ ಅವರಿಗೆ ಪೂರ್ವಭಾವಿಯಾಗಿ ಮುಟ್ಟಿಲ್ಲ. ಅವರಿಗೆ ಸುದ್ದಿ ಕೊಡುವು ದಾಗಿ ಶ್ರೀಮತಿ ಕೋರಿ ಹೇಳಿದರು. ನಾನೂ ಪ್ರಯತ್ನಿಸೋಣ, ಎಂದು ಬೆಂಗಳೂರಿನ ಕೆ. ಎಂ. ನಂಜಪ್ಪನವರ ನ್ಯೂಯಾರ್ಕಿನಲ್ಲಿರುವ ಪುತ್ರಿ ಶ್ರೀಮತಿ ಸತ್ಯರಿಗೆ ಫೋನ್ ಮಾಡಿದೆ. ಫೋನ್ ಲೈನ್ ಹತ್ತಲಿಲ್ಲ. ಆಮೇಲೆ ತಿಳಿಯಿತು ನಂಜಪ್ಪನವರು ಹಳೆಯ ನಂಬರ್ ಕೊಟ್ಟಿದ್ದರು ; ಅದೀಗ ಬದಲಾಗಿ ಹೋಗಿದೆ.

ಸ್ವಲ್ಪ ಕಾಲ ತಡೆದು ಮತ್ತೆ ವಾಷಿಂಗ್ಟನ್‌ಗೆ ಫೋನ್ ಮಾಡಿದೆ. ಡಾ|| ಕೋರಿ ಸಿಕ್ಕರು." ನಿಮ್ಮನ್ನು ಸಂಪರ್ಕಿಸುವುದು ಹೇಗೆ ಎಂದು ನಾವು ಪೇಚಾಡುತ್ತಿದ್ದೆವು.

ಈಗೊಂದು ವಿಮಾನವಿದೆ ಬೇಕಾದರೆ ನ್ಯೂಯಾರ್ಕಿನಿಂದ ವಾಷಿಂಗ್ಟನ್‌ಗೆ ಬಂದು ಬಿಡಿ. ನಾವು ಸ್ವಾಗತಿಸಲು ಬರುತ್ತೇವೆ" ಎಂದರು. "ನಮಗೆ ವಿಪರೀತ ದಣಿವು ಮತ್ತು ಹಸಿವು. ಈಗಂತೂ ಪ್ರಯಾಣ ಸಾಧ್ಯವಿಲ್ಲ. ನ್ಯೂಯಾರ್ಕಿನಲ್ಲಿ ಯಾರಾ ದರೂ ಇದ್ದರೆ ತಿಳಿಸಿ. ಶ್ರೀಮತಿ ಸತ್ಯ ವಿಶ್ವನಾಥ್ ಇಲ್ಲಿದ್ದಾರೆ. ಆದರೆ ಫೋನ್ ಲೈನ್ ಸಿಕ್ಕುತ್ತ ಇಲ್ಲ" ಎಂದೆ. "ಹಾಗೇ ಆಗಲೀ ; ನಾನಾಗಲೇ ಅವರ ಜೊತೆ ಮಾತನಾಡಿದೆ. ಅವರೀಗ ನಿಮ್ಮನ್ನು ಕರೆಯಲು ಬರುತ್ತಾರೆ. ಅವರ ಅತಿಥ್ಯ ಸ್ವೀಕರಿಸಿರಿ" ಅವರ ಈಗಿನ ನಂಬರ್ ಕೊಟ್ಟರು. ನನಗೆ ಸಹಾಯ ಬೇಕಾದರೆ ಏರ್ ಪೋರ್ಟಿನ ಓರ್ವ ಅಧಿಕಾರಿ ಪ್ಯಾಟ್ ಗ್ರೀನರ ಸಹಾಯ ಪಡೆಯಿರಿ ಎಂದರು. ಅವರು ಸುಲಭವಾಗಿ ಸಿಕ್ಕು ಶ್ರೀಮತಿ ಸತ್ಯ ವಿಶ್ವನಾಥ್‌ರ ಮನೆಗೆ ಫೋನ್ ಮಾಡಿದರು. ಡಾ|| ವಿಶ್ವನಾಥರು ಆಗಿಂದಾಗಲೇ ಬರುವುದಾಗಿಯೂ, ಏರ್ ಇಂಡಿಯಾ ಕೌಂಟರ್ ಬಳಿ ಇರಬೇಕೆಂದು ತಿಳಿಸಿದರು. ತೀವ್ರಗತಿಯಲ್ಲಿ ಬಂದು ನಮ್ಮನ್ನು ಕರದೊಯ್ದರು. ನಗುಮುಖದಿಂದ ಸತ್ಯರು ಬರಮಾಡಿಕೊಂಡರು. ದಂಪತಿಗಳು ಅತ್ಯಂತ ಸಹೃದಯ, ಭಾವದ ಸ್ನೇಹಪರರು. ಇತರರಿಗೆ ಆತಿಥ್ಯ, ಸಹಾಯ ಮಾಡುವುದರಲ್ಲಿ ತುಂಬಾ ಮುಂದು.

ಬಿಸಿನೀರಿನ ತುಂತುರುಧಾರೆ (shower) ಯಲ್ಲಿ ಮಿಂದು, ಪೂಜೆ ಮಾಡಿ ಕರ್ನಾಟಕದ ಅಡಿಗೆ ಉಂಡಾಗ ಹದಿಮೂರು ಸಾವಿರ ಮೈಲಿಗಳಾಚೆ ಇದ್ದೇವೆ ಬಂದಿದ್ದೇವೆ ಎನ್ನಿಸಲೇ ಇಲ್ಲ. ಜೊತೆಗೆ ಅವರ ಕಡೆಯ ಮಗ ಮೂರು ವರ್ಷದ ದೇವ್ ಬೇರೆ ವಿಶೇಷ ಶಿಷ್ಯನಾಗಿಬಿಟ್ಟ. ಅಸಾಮಾನ್ಯ ಬುದ್ಧಿವಂತ ಮಗು ಅವನು. ಶ್ರೀಮತಿ ಸತ್ಯ ಮತ್ತು ವಿಶ್ವನಾಥರು 'ಬಸವ ಇಂಟರ್ ನ್ಯಾಷನಲ್' ಎಂಬ ಸಂಘವನ್ನು ರೂಪಿಸಿ ತಮ್ಮ ಅಮೇರಿಕಾ ಸ್ನೇಹಿತರಿಗೂ ಬಸವ ತತ್ತ್ವದ ಪರಿಚಯ ಮಾಡಿಕೊಡು ತ್ತಿದ್ದಾರೆ.

ಮರುದಿನ ವಾಷಿಂಗ್ಟನ್ ಕಡೆ ಪ್ರಯಾಣ. ಶ್ರೀಮತಿ ಸತ್ಯರವರೇ ಕಾರಿನಲ್ಲಿ ಕರೆದುಕೊಂಡು ಬಂದು ಏರ್‌ಪೋರ್ಟಿಗೆ ತಲುಪಿಸಿದರು. ಬ್ರಾನಿಫ್ ಏರ್‌ವೇಸ್ ಮೂಲಕ ನ್ಯೂಯಾರ್ಕಿನಿಂದ ವಾಷಿಂಗ್ಟನ್‌ಗೆ ಪ್ರಯಾಣ. ಕೇವಲ ಒಂದು ತಾಸಿನ ಪಯಣ ಮಾತ್ರ. ಏರ್‌ಪೋರ್ಟಿಗೆ ಕರೆಯಲು ಡಾ|| ಗಂಗಾಧರ ಕೋರಿ ಮತ್ತು ಶಾಂತಾ ಕೋರಿ ಬಂದಿದ್ದರು. ದರ್ಶಿಸುತ್ತಿದ್ದಂತೆಯೇ ಪಾದಮುಟ್ಟಿ ನಮಸ್ಕರಿಸಿ, ಸ್ವಾಗತಿಸಿದರು. ಆಶ್ಚರ್ಯ ಆನಂದ ಏಕಕಾಲಕ್ಕೆ ಉಂಟಾದವು. ಈ ದೇಶದಲ್ಲಿ ಇಷ್ಟು ವರ್ಷಗಳನ್ನು ಕಳೆದೂ ಮಾತೃದೇಶದ ಭಾಷೆ, ಧರ್ಮ, ಸಂಸ್ಕೃತಿಗಳನ್ನು ಮರೆತಿಲ್ಲವಲ್ಲ ಎಂದು. ಅವನ್ನು ಉಳಿಸಿಕೊಳ್ಳಲೋಸುಗವೇ ಈ ವಿ. ಎಸ್. ಎನ್. ಎ

ಎಂಬ (ಉತ್ತರ ಅಮೇರಿಕಾದ ವೀರಶೈವ ಸಮಾಜ) ಸಂಸ್ಥೆಯನ್ನು ರೂಪಿಸಿ ಅದರ, ಅಧ್ಯಕ್ಷರಾಗಿ ಕಾರ್ಯಮಾಡುತ್ತಿರುವುದು. ಸುಮಾರು 27 ವರ್ಷಗಳ ಹಿಂದೆ ಇಲ್ಲಿಗೆ ಬಂದು ನೆಲಸಿರುವ ಇವರು, ತಮ್ಮ ಮಕ್ಕಳು ಸುರೇಶ ಮತ್ತು ಸುಭಾಸರನ್ನು ಇಲ್ಲೇ ಬೆಳಸಿ, ಶಿಕ್ಷಣ ನೀಡಿದ್ದರೂ ಸಂಸ್ಕೃತಿಯನ್ನು ಮಕ್ಕಳು ಬಿಡದಂತೆ ಮಾಡಿ, ಮಹಾರಾಷ್ಟ್ರ, ಕರ್ನಾಟಕದಿಂದ ಸೊಸೆಯರನ್ನು ಬರಮಾಡಿಕೊಂಡಿದ್ದಾರೆ. ನಾನು ಮನೆಯನ್ನು ಪ್ರವೇಶಿಸುತ್ತಲೇ ಬಾಗಿಲಲ್ಲಿ ಪಾದಕ್ಕೆ ನೀರೆರೆದು, ಆರತಿ ಮಾಡಿ ಒಳಗೆ ಬರಮಾಡಿಕೊಂಡರು. ಅಂತೂ ಈ ಸಂಸ್ಕೃತಿಯ ಜೀವಂತಿಕೆ ನೋಡಿ ಸಂತೋಷ ವಾಯಿತು.

ಲಿಂಕನ್ ಮತ್ತು ಜೆಫರ್‌ಸನ್ ಸ್ಮಾರಕ ಸಂದರ್ಶನ

ಬ್ರಿಟನ್ ಮತ್ತು ಅಮೇರಿಕಾಗಳು ತಮ್ಮ ಪರಂಪರೆ (Heritage) ಯ ಸಂಸ್ಮರಣೆ ಮಾಡಿಕೊಳ್ಳುವಲ್ಲಿ ಬಹು ಮುಂದು. ತಮ್ಮ ಇತಿಹಾಸ ಪಥದಲ್ಲಿ ಆಗಿ ಹೋದ ಸಂತರು, ವಿಜ್ಞಾನಿಗಳು, ರಾಷ್ಟ್ರ ನಿರ್ಮಾಪಕರು, ವೀರರು, ಕಲಾವಿದರನ್ನು ಕೃತಜ್ಞತೆ ಯಿಂದ ಸ್ಮರಿಸುತ್ತಾರೆ. ಅವರನ್ನು ಸ್ಮರಿಸಿಕೊಳ್ಳಲೋಸುಗ, ವಿದೇಶಿಯರಿಗೆ ಪರಿಚಯಿಸಲೋಸುಗ ಭವ್ಯವಾದ ಸ್ಮಾರಕಗಳನ್ನು ರಚಿಸಿರುತ್ತಾರೆ. ಅಂಥವುಗಳಲ್ಲಿ ಈ ಬಾರಿ ನಾನು ಮೂರನ್ನು ಪ್ರಸ್ತಾಪಿಸುವೆನು. 1. ಜಾರ್ಜ್ ವಾಷಿಂಗ್ಟನ್ ಸ್ಮಾರಕ 2. ಜೆಫರ್‌ಸನ್ ಸ್ಮಾರಕ ಮತ್ತು 3. ಅಬ್ರಹಾಂ ಲಿಂಕನ್ ಸ್ಮಾರಕ.

ವಾಷಿಂಗ್ಟನ್ ಅಮೇರಿಕಾದ ಸಂಯುಕ್ತ ಸಂಸ್ಥಾನದ (U. S. A.) ರಾಜ ಧಾನಿ. ಜಗತ್ತಿನ ಅತಿ ದೊಡ್ಡ ಮತ್ತು ಸುಂದರ ರಾಜಧಾನಿ ಇದಾಗಬೇಕೆಂದು ಪ್ರೆಸಿಡೆಂಟ್ ವಾಷಿಂಗ್ಟನ್ ಇದನ್ನು ನಿರ್ಮಿಸಲು ತೊಡಗಿದರು. 1800 ರಿಂದ ಇದು ರಾಜಧಾನಿಯಾಯಿತು. ಬಂಡಿಯ ಗಾಲಿಯಲ್ಲಿ ಕೇಂದ್ರದಿಂದ ಸರಳರೇಖೆಯ ಕಟ್ಟಿಗೆ ಹೊರಹೊಮ್ಮಿ ಚಕ್ರದ ಚೌಕಟ್ಟನ್ನು ಸೇರುವಂತೆ ಈ ನಗರದಲ್ಲಿ ವೃತ್ತಗಳಿಂದ ರಸ್ತೆ ಗಳು ಹೊರಡುತ್ತವೆ. ಈ ಸುಂದರ ನಗರದಲ್ಲಿ ರಸ್ತೆಗಳು ತುಂಬ ವಿಶಾಲ ಮತ್ತು ಸ್ವಚ್ಛ. ಮೊದಲು ಟೆರಿಟರಿ ಆಫ್ ಕೊಲಂಬಿಯ ಎಂಬ ಹೆಸರಿದ್ದ ಈ ನಗರ ಪ್ರೆಸಿಡೆಂಟ್ ವಾಷಿಂಗ್ಟನ್‌ರ ಹೆಸರಿನಲ್ಲಿ ನಂತರ ನಾಮಕರಣಗೊಂಡಿತು.

ವಾಷಿಂಗ್ಟನ್ನರ ಹೆಸರಿನಲ್ಲಿ ಇನ್ನೊಂದು ಸ್ಮಾರಕ ಸ್ತಂಭವನ್ನು ನಿರ್ಮಿಸಲಾಗಿದೆ. ಅದು 555 ಅಡಿ ಎತ್ತರವಿದ್ದು, ಮೇಲೆ ಹೋಗಲಿಕ್ಕೆ ಪಾವಟಿಗೆ ಮತ್ತು ಎಲಿವೇಟರ್ ಗಳನ್ನು ಹೊಂದಿದೆ. ಅದರ ಸುತ್ತಲೂ ಸುಂದರವಾದ ಹೂದೋಟವಿದ್ದು, ಒಂದು ಕೃತಕ ಸರೋವರವನ್ನೂ ನಿರ್ಮಿಸಲಾಗಿದೆ. ಚೆರ್ರಿ ವೃಕ್ಷಗಳ ಬನ ಸುತ್ತುವರಿದಿದ್ದು

ಆ ಗಿಡಗಳು ಹೂಬಿಟ್ಟಾಗ ಅದ್ಭುತ ದೃಶ್ಯವೊಂದು ನಿಸರ್ಗದಲ್ಲಿ ಮೂಡುವದಂತೆ. ಈಗ ಮಾತ್ರ ಛಳಿಗಾಲದಿಂದಾಗಿ ವೈಸುಕ್ಕು ಗಟ್ಟಿದ ಬಡ ಮುದುಕರಂತೆ ಗಿಡಗಳೆಲ್ಲ ಬೋಳುಬೋಳಾಗಿ ನಿಂತಿರುವವು. ಈ ಸ್ಮಾರಕದ ಸುತ್ತಲೂ ವರ್ತುಲಾಕಾರದಲ್ಲಿ ಅಮೇರಿಕನ್ ಧ್ವಜಗಳನ್ನು ನೆಟ್ಟಿರುತ್ತಾರೆ.

ಇನ್ನೊಂದು ಜೆಫರ್‌ಸನ್ ಸ್ಮಾರಕ. ರಾಷ್ಟ್ರನಿರ್ಮಾಪಕರಲ್ಲಿ ಇವರೂ ಒಬ್ಬರು. ಶುಭ್ರ ಬಿಳಿಯ ಹಾಲುಗಲ್ಲಿನ ಬೃಹತ್ ಕಂಭಗಳಿಂದ ಕೂಡಿದ ಈ ಸ್ಮಾರಕ ಜಪಾನಿ ಚೆರ್ರಿ ವೃಕ್ಷಗಳಿಂದ ಆವೃತವಾಗಿದ್ದು ಮುಂದೆ ಸುಂದರವಾದ ಸರೋವರವನ್ನು ಪಡೆದಿದೆ.

ಕಲ್ಯಾಣ ಕಿರಣದ ಹೊದ್ದಿಕೆಯ ಎರಡನೆಯ ಪುಟದಲ್ಲಿ ಮುದ್ರಣಗೊಂಡಿರುವದು ಅಬ್ರಹಾಂಲಿಂಕನ್ ಸ್ಮಾರಕ. ನನಗೆ ಮೊದಲಿನಿಂದಲೂ ಅವರ ಬಗ್ಗೆ ತುಂಬುಗೌರವ ಮತ್ತು ಅಭಿಮಾನ. ಜಗತ್ಪ್ರಸಿದ್ಧ ಗೆಟಿಸ್‌ಬರ್ಗ ಭಾಷಣವನ್ನು ಹೈಸ್ಕೂಲಿನಲ್ಲಿದ್ದಾಗ ಪಠ್ಯಪುಸ್ತಕದಲ್ಲಿ ಓದಿದ್ದ ನಾನು ಅಂದಿನಿಂದಲೂ ಮೆಚ್ಚುಗೆ ಬೆಳೆಸಿಕೊಂಡಿದ್ದೆ. ಹೀಗಾಗಿ ಬಂದ ಮರುದಿನವೇ ಶ್ರೀಮತಿ ವಿಮಲಾ ಚನ್ನಬಸಪ್ಪ ಕೆಂಕೆರೆಮಠ ಅವರು (ನಿವೃತ್ತ ನ್ಯಾಯಾಧೀಶ ಶ್ರೀ ಮಳೀಮಠ, ಬೆಂಗಳೂರು ಅವರ ಮಗಳು) ಲಿಂಕನ್ ಸ್ಮಾರಕಕ್ಕೆ ಕರೆದೊಯ್ಯುತ್ತೇನೆ ಎಂದಾಗ ತುಂಬಾ ಸಂತೋಷದಿಂದ ಒಪ್ಪಿದೆ. ವಿಶಾಲವಾದ ಸೋಪಾನ, ಹಾಸುಗಲ್ಲುಗಳಿಂದ ಕೂಡಿದ ಮುಂಭಾಗವನ್ನು ದಾಟಿ ಮೇಲೇರುತ್ತಲೇ ಬೃಹತ್ತಾಕಾರದ ಕಂಭಗಳ ಅಂಗಳಕ್ಕೆ ಬರುತ್ತೇವೆ. ಅಲ್ಲಿಗೇ ಲಿಂಕನ್ನರ ಬೃಹದಾ ಕಾರದ ಮೂರ್ತಿ ಕಾಣಬರುತ್ತದೆ. ಅಬ್ರಹಾಂ ಲಿಂಕನ್ನರು ಸಂಯುಕ್ತ ಸಂಸ್ಥಾನದ 16ನೆಯ ಅಧ್ಯಕ್ಷರು ಅವರ ಅಧಿಕಾರದ ಕಾಲಾವಧಿ 1861–65. ಮಹಾ ಮುತ್ಸದ್ಧಿಯಾದ ಅವರು ದಕ್ಷತೆ, ಪ್ರಾಮಾಣಿಕತೆ, ವೈಶಾಲ್ಯ, ಸಹನೆ, ಔದಾರ್ಯಗಳಿಗೆ ಹೆಸರಾದವರು. ದಿ. 19–11–1863 ರಂದು ಮಾಡಿದ ಗೆಟಿಸ್‌ಬರ್ಗ್ ಭಾಷಣದ ರೋಮಾಂಚಕಾರಿ ವಿಚಾರಗಳನ್ನು ಲಿಂಕನ್ ಸ್ಮಾರಕದೊಳಗೆ ಕೆತ್ತಲಾಗಿದೆ. "ಇಂದು ನಮ್ಮೆಲ್ಲರ ಮುಂದೆ ಮಹಾ ಮಣಿಹವೊಂದಿದೆ. ಅದಕ್ಕಾಗಿ ನಾವು ಸಮರ್ಪಿತರಾಗ ಬೇಕಾಗಿದೆ. ದೇವರ ಕೃಪೆಯ ಕೆಳಗೆ ಈ ದೇಶ ಸ್ವಾತಂತ್ರ್ಯದ ಮರು ಹುಟ್ಟನ್ನು ಪಡೆಯಬೇಕಾಗಿದೆ. ಪ್ರಜಾಪ್ರಭುತ್ವ ಸರ್ಕಾರ ಅಂದರೆ **ಜನರ, ಜನರಿಂದ, ಜನರಿಗಾಗಿ** ರೂಪುಗೊಂಡ ಪ್ರಜಾಪ್ರಭುತ್ವ ಈ ಜಗತ್ತಿನಿಂದ ಎಂದೆಂದೂ ಅಳಿಯದಿರಲಿ." ಇನ್ನೂ ಅನೇಕ ಹೇಳಿಕೆಗಳನ್ನು ಕೆತ್ತಲಾಗಿದೆ. ಶುಭ್ರ ಬಿಳಿಯ ಕೊಲೊರಾಡೋ ಯೂಲ್ ಅಮೃತ ಶಿಲೆಯಿಂದ ಈ ಸ್ಮಾರಕವನ್ನು ರೂಪಿಸಲಾಗಿದೆ. ಮೂವತ್ತಾರು ಬೃಹತ್ ಶಿಲಾಸ್ತಂಭಗಳು ಲಿಂಕನ್ನರ ಆಳ್ವಿಕೆಯ ಕಾಲದಲ್ಲಿದ್ದ 36 ರಾಜ್ಯಗಳನ್ನು

ಪ್ರತಿಪಾದಿಸುತ್ತವೆ. ಲಿಂಕನ್ನರ ಮೂರ್ತಿ ಕುಳಿತ ಭಂಗಿಯಲ್ಲಿದ್ದು ತಲೆಯಿಂದ ಕಾಲಿನವರೆಗೆ 19 ಅಡಿ ಎತ್ತರವಿದೆ. ಮತ್ತು ಕುರ್ಚಿಯನ್ನೂ ಸೇರಿ 19 ಅಡಿ ಅಗಲವಿದೆ. ಸ್ಮಾರಕ ಭವನವು 257 ಅಡಿ ಉದ್ದ, 187 ಅಡಿ ಅಗಲ, 80 ಅಡಿ ಎತ್ತರವಿದೆ.

ಅಬ್ರಹಾಂ ಲಿಂಕನ್ನರ ಜೀವನ, ಇನ್ನೂ ಅನೇಕ ಮಹನೀಯರ ಬದುಕಿನಂತೆ ಸಾಹಸದ ವೀರಗಾಥೆ. 12-2-1809 ರಂದು ಒಂದು ಬಡಮನೆತನದಲ್ಲಿ ಹುಟ್ಟಿದ ಲಿಂಕನ್ ಸರಿಯಾದ ಶಿಕ್ಷಣದ ಸೌಲಭ್ಯವಾಗಲೀ, ಅನುಕೂಲತೆಗಳಾಗಲೀ ಇಲ್ಲದಲ್ಲಿ ಬೆಳೆದು, ಸ್ವಪ್ರಯತ್ನದಿಂದಲೇ ಮುಂದೆ ಬಂದು ನ್ಯಾಯಶಾಸ್ತ್ರದಲ್ಲಿ ಬಲ್ಲಿದರಾದರು. ಅತ್ಯಂತ ಅಮಾನುಷ ರಕ್ತಪಾತದ ಆಂತರಿಕ ಹೋರಾಟ ನಡೆಯುವಾಗ ರಾಷ್ಟ್ರಾಧ್ಯಕ್ಷರಾಗಿ, ಸಹನೆ-ಪ್ರೇಮಗಳ ಶರಧಿಯಾಗಿ ಸಮಾನ ವ್ಯಕ್ತಿತ್ವ ಪ್ರದರ್ಶಿಸಿ. ದೊಡ್ಡವರಾಗಿ ಜನಮನವ ಗೆದ್ದರು. ವರ್ಣದ್ವೇಷಿಯೊಬ್ಬನಿಂದ 1865ರಲ್ಲಿ ಗುಂಡಿನೇಟಿಗೀಡಾದಾಗ ಅಮೆರಿಕಾದ ಜನತೆ ಲಿಂಕನ್ನರ ವ್ಯಕ್ತಿತ್ವವನ್ನರಿತರು. ಅವರ ಜೀವಿತಕಾಲದಲ್ಲಿ ಸಾಮಾನ್ಯ **ರಾಜಕಾರಣಿ** ಎಂದಷ್ಟೇ ತಿಳಿದವರು ಸಾವಿನನಂತರ ಅವರ ಅಸಾಮಾನ್ಯ ನಿಲುವನ್ನರಿತರು.

ಅಮೆರಿಕನ್ನರು ತಮ್ಮ ರಾಷ್ಟ್ರನಾಯಕರನ್ನು ಗುರುತಿಸುವ, ಗೌರವಿಸುವ ಪರಿ ನೋಡಿದರೆ ಭಾರತೀಯರು ತಲೆತಗ್ಗಿಸದೆ ಗತ್ಯಂತರವಿಲ್ಲ. ಜಯಪ್ರಕಾಶ ನಾರಾಯಣರಂತಹ ಅಸಾಮಾನ್ಯರನ್ನೂ ಪಕ್ಷರಾಜಕಾರಣದ ಕಲುಷಿತ ದೃಷ್ಟಿಕೋನದಿಂದ ನೋಡಿ, ಅವರ ವ್ಯಕ್ತಿತ್ವ-ಜೀವನ ಸಿದ್ಧಿಗೆ ಹೆಚ್ಚಿನ ಮನ್ನಣೆ ಸಿಗದಂತಹ ವಾತಾವರಣ ಸೃಷ್ಟಿಸುವುದನ್ನು ನಮ್ಮಲ್ಲಿ ಕಾಣಬಹುದಾಗಿದೆ. Indian mentality ಎಂದು ಎಲ್ಲಾ ದೃಷ್ಟಿಯಿಂದಲೂ ಗುರುತಿಸುವ ಒಂದು ವಿಶೇಷ ಜೀವನ ವಿಧಾನವನ್ನು ನಾವು ಅಳವಡಿಸಿಕೊಂಡು ಬಿಟ್ಟಿದ್ದೇವೆ ಎಂದು ಒಮ್ಮೊಮ್ಮೆ ತುಂಬಾ ಮನೋವೇದನೆಯಾಗದಿರದು........

(—ಸಶೇಷ)

ಸಿಲೋನ್ ಪಾರ್ಲಿಮೆಂಟ್ ಅಧಿವೇಶನ ನಡೆದಿತ್ತು. ಓರ್ವ ಹಿರಿಯ ಸಚಿವರು ಬಹಳ ಅದ್ಭುತ ಭಾಷಣ ಮಾಡಿ ಕುಳಿತರು. ಆಡಳಿತ ಮತ್ತು ವಿರೋಧ ಪಕ್ಷಗಳ ಎಲ್ಲರೂ ಅವರ ಉದ್ಬೋಧಕ ಭಾಷಣ ಕೇಳಿ ಕಿವಿ ಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು. ವಿರೋಧ ಪಕ್ಷದ ಕಡೆಯಿಂದ ಒಂದು ಸ್ವರ ಕೇಳಿತು, "ದಯವಿಟ್ಟು, ಆ ಭಾಷಣದ ಬರಹಗಾರರಾರು ಯಾರೆಂದು ತಿಳಿಸಿರಿ."

ಹಕ್ಕಿ ಹಾರಿತು ಬಾನೆತ್ತರಕೆ

—ಸೋದರಿ ಉಮಾದೇವಿ

ದಿನಾಂಕ 23-11-80 ಬೆಳಗಿನ 9.30 ರ ಸಮಯ. ಮಾತಾಜಿಯವರನ್ನು ಅಮೇರಿಕಾಕ್ಕೆ ಬೀಳ್ಕೊಡಲು ನೇಸರನೂ ಬಂದಿದ್ದ. ಅವನ ಕಿರಣ ಪುಂಜಗಳನ್ನು ಭೇದಿಸುತ್ತ ಹಕ್ಕಿ ಹಾರಿತು ಬಾನಿನೆತ್ತರಕೆ. ವಿಶ್ವಕಲ್ಯಾಣ ಮಿಷನ್ ಸಂಸ್ಥಾಪಕ, ಬಸವ ಗಂಗೋತ್ರಿಯ ಸಚೇತಕ ಶಕ್ತಿ, ಸುಪ್ರಸಿದ್ಧ ಪ್ರವಚನಕಾರ ಚೈತನ್ಯ, ಭಕ್ತಿ-ಜ್ಞಾನ ವಿರಕ್ತಿಯ ಸಂಗಮವೂ ಆದ ಹಕ್ಕಿ, ಅಮೇರಿಕಾದಲ್ಲಿ ಬಸವ ತತ್ವದುಂಧುಭಿಯ ರವವನ್ನು ಮೊಳಗಿಸಲು ಹಾರಿತು ಬಾನಿನೆತ್ತರಕೆ. 'ಮಾತಾಜಿ ನಮ್ಮಿಂದ ಬಹುದೂರ ಹೋಗುವರು' : 'ಬಸವ ತತ್ವ ಪಸರಿಸಲು ಹೋದ ಧೀಮಂತ ಶಕ್ತಿ ಅವರು' 'ಅವರ ಒಡನಾಟ ನಮಗೆ ಇನ್ನು ದುರ್ಲಭ'—ಹೀಗೆ ವಿಮಾನ ನಿಲ್ದಾಣದಲ್ಲಿ ನೆರೆದಿದ್ದ ಸದ್ಭಕ್ತರ ಹೃದಯ ಸರೋವರದಲ್ಲಿ ಹಲವಾರು ಭಾವನೆಗಳ ತೆರೆಗಳು. 'Parting is such sweet sorrow'—.ಮನ ಮಾರ್ದನಿಗೊಡುತ್ತಿತ್ತು. ಅಷ್ಟರಲ್ಲಿಯೇ "ಬೆಂಗಳೂರಿನಲ್ಲಿಯೇ ಇದ್ದರೂ ನವೆಂಬರ್ 19 ರಂದು ಬೆಳಿಗ್ಗೆ 10 ಗಂಟೆಗೆ ನಡೆದ ಮಾತಾಜಿಯವರ ಬೀಳ್ಕೊಡುಗೆಯ ಕಾರ್ಯಕ್ರಮಕ್ಕೆ ಬರಲಾಗಲಿಲ್ಲ. ನತದೃಷ್ಟೆ ನಾನು. ಸಮಾರಂಭದ ವಿವರಣೆ ನೀಡುವಿರಾ" ನಮ್ಮ ಶಾಲಾ ಬಾಲಕ ತ್ಯಾಗರಾಜುವಿನ ತಾಯಿಯವರ ಧ್ವನಿ. ಒಪ್ಪಿಕೊಂಡು ಹೇಳಲಾರಂಭಿಸಿದೆ.

ಬೆಳಗಿನ ಹತ್ತು ಗಂಟೆಗೆ ಐದು ನಿಮಿಷ ಮೊದಲೇ ಪುಟ್ಟಣ್ಣ ಚೆಟ್ಟಿ ಪುರಭವನಕ್ಕೆ ಪೂಜ್ಯರ ಆಗಮನ. ಸಮವಸ್ತ್ರ ಧರಿಸಿ ನಿಂದ ಶ್ರೀ ಬಸವ ಭಾರತಿ ಶಾಲೆಯ ಮಕ್ಕಳಿಂದ ಸುಸ್ವಾಗತ. ಸದ್ಭಕ್ತರು ತಲೆಬಾಗಿಲಲ್ಲೇ ಮಾಲಾರ್ಪಣೆ ಮಾಡಿ ಆರತಿ ಬೆಳಗಿ ಒಳಗೆ ಬರಮಾಡಿಕೊಂಡರು. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ದಿವ್ಯಸನ್ನಿಧಿ, ಕರ್ನಾಟಕ ವಿಧಾನ ಪರಿಷತ್ ಸಭಾಧ್ಯಕ್ಷೆ ಶ್ರೀಮತಿ ಬಸವರಾಜೇಶ್ವರಿಯವರ ಘನ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಆರಂಭ.

ಪ್ರಾರ್ಥನೆಯ ನಂತರ ಶ್ರೀ ಹೀ. ಚಿ. ಶಾಂತವೀರಯ್ಯನವರಿಂದ ಸಮಗ್ರ ಕಾರ್ಯಕ್ರಮ ಪಠಣೆ. ನಂತರ ಜನಪ್ರಿಯ ರಾಜಕೀಯ ನೇತಾರ, ಶಾಸಕ ಶರಣ

ಹೆಚ್. ಗಂಗಾಧರನ್‌ರವರಿಂದ ಅತಿಥಿಗಳೆಲ್ಲರ ಪರಿಚಯ ಮತ್ತು ಪೂಜ್ಯ ಮಾತಾಜಿಯವರ ವ್ಯಕ್ತಿತ್ವದ ವಿಶೇಷ ಪರಿಚಯ. ಎಲ್ಲರಿಗೂ ಹೃತ್ಪೂರ್ವಕ ಸ್ವಾಗತ ಬಯಸುತ್ತಾ ಅವರು ಸಮಾರಂಭದ ಔಚಿತ್ಯವನ್ನು ಮನಗಾಣಿಸಿದರು. 'ಭಾರತವು ಗುರು ಸ್ಥಾನದಲ್ಲಿ ನಿಂತು ಮಾರ್ಗದರ್ಶನ ಮಾಡಬಲ್ಲದೆಂಬುದನ್ನು ಸಾರಲು ದೇಶ, ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥರಂಥವರನ್ನು ಕಳಿಸಿದೆ. ಆದರೆ ಸನ್ಯಾಸಿನಿಯೋರ್ವರನ್ನು, ತಾಯಿಯನ್ನು, ಭಾರತಾಂಬೆಯ ಸುಪುತ್ರಿಯನ್ನು ವಿದೇಶಗಳಿಗೆ ಮೊಟ್ಟಮೊದಲಿಗೆ ಕಳಿಸುವ ಸೌಭಾಗ್ಯ ಕನ್ನಡಿಗರಾದ ನಮಗೊದಗಿದೆ. ಅಂಥ ಅವಕಾಶ ಕಲ್ಪಿಸಿಕೊಟ್ಟ ಮಾತಾಜಿಯವರಿಗೆ ಸ್ವಾಗತ.

ಇಂದು ಆ ಸೌಭಾಗ್ಯ ಒದಗಲು ಮೂಲ ಕಾರಣರು, ಸಚೇತಕ ಶಕ್ತಿಯೂ ಆದ "ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು–ಗುರುವಾಗಿ ಜ್ಞಾನ ನೀಡಿ, ಜ್ಞಾನ ಕೇಸರಿಯನ್ನು ರೂಪಿಸಿ ಅಸಾಮಾನ್ಯ ವ್ಯಕ್ತಿತ್ವವನ್ನು ಲೋಕಕ್ಕೆ ನೀಡಿದ ರೂಹಾರಿ. ಆ ಮಹಾನ್ ಶಿಲ್ಪಿಗೆ ಹಾರ್ದಿಕ ಸ್ವಾಗತ. ರಾಜಕೀಯದಲ್ಲಿದ್ದೂ ಧರ್ಮವನ್ನು ಜೀವನದಲ್ಲಿ ಅಳವಡಿಸಿಕೊಂಡು ಜನಸೇವೆ ಗೈಯುತ್ತಿರುವ–ಇಂದಿನ ಮುಖ್ಯ ಅತಿಥಿಗಳು ಸಚಿವ ಬೇಗಾನೆ ರಾಮಯ್ಯನವರಿಗೆ ಸ್ವಾಗತ."

ಹೀಗೆ ಶಾಸಕ ಗಂಗಾಧರನ್‌ರವರು ಹೃತ್ಪೂರ್ವಕವಾಗಿ ಶರಣ ಐ. ಎಂ. ಮುಗದುಮ್‌ರವರಿಗೆ, ರಂ. ಶ್ರೀ ಮುಗಳಿಯವರಿಗೆ, ಶರಣ ಗುಂಡಿ ಹಾಲಪ್ಪ, ಕೆ. ಆರ್. ಲಿಂಗಪ್ಪ, ಶ್ರೀಮತಿ ಜಗದಾಂಬಾ ಮತ್ತು ಶ್ರೀಮತಿ ಉಮಾದೇವಿ ಚಂದ್ರಶೇಖರ್ ಗೊ.ರು.ಚ. ಮತ್ತು ನೆರೆದ ಸಭಿಕರಿಗೆ ಸ್ವಾಗತ ಕೋರಿದರು. ನಂತರ ಸದ್ಭಕ್ತರ ಅಭಿಮಾನದ ದ್ಯೋತಕವೆಂಬಂತೆ ನೂರಾರು ಪುಷ್ಪಮಾಲೆಗಳು ಪೂಜ್ಯ ಮಾತಾಜಿಯವರ ಕೊರಳನ್ನಲಂಕರಿಸಿದವು.

ಜಾನಪದ ಸಾಹಿತಿಗಳಾದ ಶರಣ ಕೆ. ಆರ್. ಲಿಂಗಪ್ಪನವರು ಸಮಾರಂಭದ ಔಚಿತ್ಯವನ್ನು ವಿವರಿಸಿ ಪೂಜ್ಯರ ಧೀಮಂತ ವ್ಯಕ್ತಿತ್ವವನ್ನು ಕುರಿತು ಮುಕ್ತ ಕಂಠದಿಂದ ಮಾತನಾಡಿದರು. ಬೇಗಾನೆ ರಾಮಯ್ಯನವರೂ ಸಹ ತಮ್ಮ ಸ್ಫುಟವಾದ, ರಮ್ಯ, ಸಾಹಿತ್ಯ ಭಾಷೆಯಲ್ಲಿ ಪೂಜ್ಯ ಮಾತಾಜಿಯವರ ವ್ಯಕ್ತಿತ್ವವನ್ನು, ಮಣಿಹವನ್ನು, ಬಸವ ತತ್ತ್ವದ ಹಿರಿಮೆ-ಗರಿಮೆಗಳನ್ನು ಕುರಿತು ಮಾತನಾಡಿದರು. "ತುಂಬಾ ಕ್ರಾಂತಿಕಾರಿ ವಿಚಾರ ಧಾರೆಯನ್ನು ಅವರ ನಾಲಿಗೆಯ ಮೇಲೆ ಸಾಹಿತ್ಯ ಶಾರದೆ ನಲಿದಾಡುವುದನ್ನು ದೂರದಿಂದಲೇ ಕೇಳುವ ಸಂದರ್ಭ ದಾವಣಗೆರೆಯಲ್ಲಿ ಒಮ್ಮೆ ಒದಗಿತ್ತು. ಆದರೆ ಇಂದು ಪ್ರತ್ಯಕ್ಷ ಕಂಡು, ಅವರ ಅಭಿಮಾನಿಗಳ ಅನುಭವದ ಮಾತುಗಳನ್ನು ಕೇಳಿ ಮಾತೆಯವರ ವ್ಯಕ್ತಿತ್ವವನ್ನು ಇನ್ನೂ ಹೆಚ್ಚು ಅರಿತೆ. ವಿದೇಶ

ಗಳಲ್ಲಿ ಧರ್ಮ ಪ್ರಸಾರ ಮಾಡುವ ಆ ಸಾಮರ್ಥ್ಯ, ಆತ್ಮಬಲವಿರುವ ಅವರಿಗೆ ಯಶಸ್ಸು ದೊರೆಯಲೆಂದು ಹಾರೈಸುವೆ". ಎಂದರು.

ನಂತರ ಸಾಹಿತ್ಯ ದಿಗ್ಗಜಗಳಲ್ಲೊಬ್ಬರಾದ ಶ್ರೀ ಮುಗಳಿಯವರು, 'ಹಿಂದೂ ಸಮಾಜದ ಪ್ರತಿನಿಧಿಗಳಾಗಿ ಹಿಂದೂ ಪರಂಪರೆಯ ಸತ್ವವನ್ನು ಪಾಶ್ಚಿಮಾತ್ಯರಿಗೆ ಮನಗಾಣಿಸ ಹೊರಟ ಅಪೂರ್ವ ವಾಗ್ಮಿಗಳಾದ ಮಾತಾಜಿಯವರು ವಚನ ಸಾಹಿತ್ಯದ ಪ್ರಗತಿಪರ ಮೌಲ್ಯಗಳನ್ನು ಸಾರಿ ಬರಲಿ' ಎಂದು ಹಾರೈಸಿದರು.

ಶ್ರೀಮತಿ ಜಗದಾಂಬಾ ವಿಶ್ವೇಶ್ವರಯ್ಯನವರ ನುಡಿಗಳು ತುಂಬು ಅಭಿಮಾನದಿಂದ ಕೂಡಿದ್ದವು. 'ಹಲವಾರು ಶ್ರೀಮಂತ ಮಠಗಳು ಮಾಡಲಾಗದ ಧರ್ಮ ಜಾಗೃತಿಯನ್ನು ಮಾತಾಜಿಯವರು ಚಿಕ್ಕ ವಯಸ್ಸಿನಿಂದಲೇ ಅಸಾಮಾನ್ಯ ಆತ್ಮ ಬಲದಿಂದ, ಜನತೆಯ ಅಭಿಮಾನದ ಬಲದಿಂದ ಮಾಡಿದ್ದಾರೆ. ಎಲ್ಲಾ ಸುಖ-ಸಂಪದಗಳ ತುಟ್ಟ ತುದಿಯಲ್ಲಿರುವ ಪಾಶ್ಚಿಮಾತ್ಯರಿಗೆ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿದ್ದು ಮಾತೃ ದೇಶ, ಭಾಷೆ, ಸಂಸ್ಕೃತಿಯನ್ನು ಮರೆತಿರುವ ಅನೇಕ ಭಾರತೀಯರಿಗೆ ಮಾತಾಜಿಯವರು ಬೆಳಕು ತೋರಿಸುವುದರಲ್ಲಿ ಯಶಸ್ವಿಯಾಗಲೆಂದು ಹಾರೈಸೋಣ' ಎಂದರು.

ಮುಖ್ಯ ನ್ಯಾಯಾಧೀಶ ಶರಣ ಡಿ. ಎಂ. ಚಂದ್ರಶೇಖರರ ಪತ್ನಿ ಶ್ರೀಮತಿ ಉಮಾದೇವಿಯವರು ಅಕ್ಕಮಹಾದೇವಿ ಸಮಾಜದ ಪರವಾಗಿ ಶುಭ ಹಾರೈಕೆ ಸಲ್ಲಿಸುತ್ತ ಹೀಗೆ ನುಡಿದರು–"ಮಾತಾಜಿಯವರ ವಿದೇಶ ಪ್ರಯಾಣ ತುಂಬಾ ಸಂತಸವನ್ನುಂಟು ಮಾಡಿದರೂ ಅವರು ವಾಪಸು ಬರುವವರೆಗೆ ಅವರ ವಾಣಿಯ ಸಂಪತ್ತು ನಮಗೆ ದೊರೆಯದೆ ಭಾಗ್ಯಹೀನರಾಗುತ್ತೇವೆ. ಆದರೂ ಆ ಭಾಗ್ಯ ಪಾಶ್ಚಿಮಾತ್ಯರಿಗೂ ದೊರೆಯಲೆಂದು ನಿಸ್ವಾರ್ಥ ಹೃದಯಿಗಳಾಗಿ ಹಾರೈಸೋಣ."

ನಿವೃತ್ತ ಪ್ರಧಾನ ಇಂಜಿನಿಯರರಾದ ಶ್ರೀ ಐ. ಎಂ. ಮುಗದುಮ್‌ರವರು ಬೀಳ್ಕೊಡುಗೆ ನುಡಿಗಳಾಡುತ್ತಾ, 'ಪೂಜ್ಯ ಮಾತಾಜಿಯವರ ಸಮಗ್ರ ಭಾಷಣದ ಧ್ವನಿ ಮುದ್ರಿತ ಟೇಪು ಕೇಳಿ, ಅವರ ಯೋಜನೆಗಳನ್ನು ಗಮನಿಸಿದ ನಾನು ಕಂಡುಕೊಂಡಿರುವುದೇನೆಂದರೆ, ಅವರ ಗುರಿ ಕೇವಲ ವೀರಶೈವರಿಗೆ ಮಾರ್ಗ ತೋರುವುದಲ್ಲ, ಅಖಿಲ ಮಾನವ ಸಮಾಜವನ್ನು ಮೇಲೆತ್ತುವುದು, ಮುನ್ನಡೆಸುವುದೂ ಆಗಿದೆ. ಅವರ ಸಂಸ್ಥೆ ಕಾರ್ಯ ಮಾಡುತ್ತಿರುವ ತ್ವರಿತಗತಿಯನ್ನೂ, ಸಾಧಿಸುತ್ತಿರುವ ಪ್ರಗತಿಯನ್ನು ನೋಡಿದರೆ ಇದು ದೈವೀಶಕ್ತಿಯಿಂದಾಗುವ ಕೆಲಸ ಎನ್ನಿಸುತ್ತದೆ. ಅವರ ಪ್ರತಿಭೆ, ಚಿಂತನಶೀಲತೆ, ವಿದ್ವತ್, ತಪಸ್ಸು, ಸಂಕಲ್ಪಶಕ್ತಿ, ಪ್ರಗತಿಪರ ಧೋರಣೆ ಎಲ್ಲರ ಜೀವನಕ್ಕೂ ದೀಪ್ತಿಗಳಾಗಲಿ" ಎಂದು ಶುಭ ಕೋರಿದರು.

ಬೀಳ್ಕೊಡುಗೆಯ ಸಮಾರಂಭದ ಉಪಾಂಗವಾಗಿ ನಿಧಿ ಸಮರ್ಪಣೆಯ ಕಾರ್ಯ. ಈ ಸಂದರ್ಭದಲ್ಲಿ ಪೀಠಿಕೆಯ ಮಾತನ್ನಾಡಿದ ಸ್ವಾಮಿ ದಯಾನಂದರು, "ಮಾತಾಜಿಯವರು ಒಂದು ಅಧ್ಯಾತ್ಮಿಕ ಉಗಿ ಬಂಡಿ. ಅವರ ಹಿಂದೆ ಅನೇಕ ಶಿಷ್ಯರು, ಸಂಸ್ಥೆ, ಸಮಾಜ ಬಾಂಧವರೆಂಬ ಡಬ್ಬಿಗಳಿವೆ. ಪೂಜ್ಯರಿಗೆ ತನು-ಮನ-ಧನಗಳೆಂಬ ತ್ರಿವಿಧ ಸಂಪತ್ತೆಂಬ ಇಂಧನ ಹೆಚ್ಚು ಹೆಚ್ಚಾಗಿ ನೀಡಿದಷ್ಟೂ ಅವರು ಹಿಂದೆ ಇರುವ ಡಬ್ಬಿಗಳನ್ನು ಕರೆದೊಯ್ಯುವರು" ಎಂದರು. ಅವರು ಧರ್ಮಜ್ಞಾನದ ಡಬ್ಬಿಯನ್ನು ವಿದೇಶಗಳಿಗೆ ಒಯ್ದು ಮುಟ್ಟಿಸಲು, ಸಂಗ್ರಹವಾಗಿದ್ದ ಇಂಧನವನ್ನು ದಾವಣಗೆರೆಯ ಪ್ರಮುಖ ಉದ್ಯಮಿಗಳು, ಶರಣ ತತ್ವಾಭಿಮಾನಿಗಳೂ ಆದ ಶ್ರೀ ಗುಂಡಿ ಹಾಲಪ್ಪನವರು ಸಾಂಕೇತಿಕವಾಗಿ ಪೂಜ್ಯರಿಗೆ ಅರ್ಪಿಸಿದರು. ನಂತರ ಅವರು ವಿಶ್ವ ಕಲ್ಯಾಣ ಸಂಸ್ಥೆ ಮಾಡುತ್ತಿರುವ ಅಗಾಧ ಕಾರ್ಯವನ್ನು ಮನನೀಯವಾಗಿ ಪ್ರಶಂಸಿಸಿ, ಪೂಜ್ಯರ ಕಾರ್ಯಕ್ಕೆ ಸಲ್ಲಿಸಿದ ಧನ ಸಂಪತ್ತು ಸಾರ್ಥಕವಾಗುವುದೆಂದು ನುಡಿದು ಶುಭಮಂಗಲವನ್ನು ಸಮರ್ಪಿಸಿದರು.

ಅಭಿಮಾನಿಗಳಿಂದ ಹಾರ್ದಿಕ ಹಾರೈಕೆ ಪಡೆದ ಪೂಜ್ಯರು ತಮ್ಮ ಭಾಷಣವನ್ನು ಮೊದಲು ಇಂಗ್ಲಿಷಿನಲ್ಲಿ ಒಂದೂ ಕಾಲು ಗಂಟೆ ನಂತರ ಕನ್ನಡದಲ್ಲಿ ಅರ್ಧಗಂಟೆ ಮಾಡಿ ಸಭಿಕರನ್ನು ಆಶ್ಚರ್ಯದ ಕಡಲಲ್ಲಿ ತೇಲಿಸಿದರು. ಕನ್ನಡದಲ್ಲಿ ನಿರೂಪಿಸುವಷ್ಟೇ ಸಲಿಲವಾಗಿ ಅವರ ವಾಕ್ಸ್ಫುರಿ ಇಂಗ್ಲಿಷಿನಲ್ಲಿ ಓತಪ್ರೋತವಾಗಿ ಹರಿಯಿತು. ಆ ನಿರರ್ಗಳತೆ, ಶಬ್ದಸಂಪತ್ತು, ಕಂಚಿನ ಕಂಠದ ನಾದ, ತಾತ್ವಿಕ ಪ್ರೌಢಿಮೆಗಳ ಆನಂದ ಸವಿಯುತ್ತಿದ್ದವರಿಗೆ ವೇಳೆ ಸರಿದುದೇ ತಿಳಿಯಲಿಲ್ಲ. ಪ್ರವಾಸದ ಗುರಿಯ ಬಗ್ಗೆ ಹೇಳುತ್ತ, ಯಾವುದಾದರೊಂದು ಜಾತಿ, ಮತ, ಪಂಥದ ಪ್ರಚಾರಕ್ಕೆ, ಸಂಘಟನೆಗೆ, ಉದ್ಧಾರಕ್ಕೆ ನಾನು ಹೊರಟಿಲ್ಲ. ಅಖಿಲ ಮಾನವ ಜನಾಂಗವನ್ನು ಗುರಿಯಾಗಿಟ್ಟುಕೊಂಡಿದ್ದೇನೆ ಜನತೆ ಆ ಧರ್ಮ ಈ ಧರ್ಮವೆನ್ನದೆ ಧಾರ್ಮಿಕತೆ, ಶುದ್ಧ ಆಧ್ಯಾತ್ಮಿಕತೆಯತ್ತ ಸಾಗಬೇಕೆಂದು ಯತ್ನಿಸುತ್ತೇನೆ."

"ಧರ್ಮದ ಗುರಿ ಏನು? ಈ ಜಗತ್ತಿನಲ್ಲಿ ದೈವೀರಾಜ್ಯದ (Kingdom of God) ಸ್ಥಾಪನೆ. ಎಲ್ಲ ಭೇದ ಭಾವ ಮರೆತು ಜನರು ಆ ಗುರಿಯತ್ತ ಸಾಗಬೇಕು." ಎಂದು ಕಲ್ಯಾಣ ರಾಜ್ಯದ ಕಲ್ಪನೆಯನ್ನು ಮಾರ್ಮಿಕವಾಗಿ ಹೇಳಿದರು. ಅತ್ಯಂತ ಸ್ವಲ್ಪ ಸಮಯದಲ್ಲೇ ತಮ್ಮ ಮನವಿಯನ್ನು ಗಮನಿಸಿ ನಿರೀಕ್ಷೆಗೂ ಮೀರಿ ಸಹಾಯ ನೀಡಿದ ಸರ್ವರಿಗೂ ತಮ್ಮ ಕೃತಜ್ಞತೆ ಸಲ್ಲಿಸಿ ಕಡೆಯಲ್ಲಿ ಸಮಾರೋಪದ ಮಾತುಗಳನ್ನಾಡಿದರು.

"ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ ಬೆಳೆದೆನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು ಸುಜ್ಞಾನವೆಂಬ ತುಪ್ಪ
ಪಾರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ!
ಸಯವಪ್ಪ ಗಂಡಂಗೆ ಕೊಟ್ಟು ವಿವಾಹವ ಮಾಡಿದಿರಿ.
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲ ನೆರೆದು ಬಂದಿರಿ
ಬಸವಣ್ಣ ಮೆಚ್ಚುವಂತೆ ವಗೆತನವ ಮಾಡುವೆ
ಚನ್ನಮಲ್ಲಿಕಾರ್ಜುನನ ಕೈಹಿಡಿದು
ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು!

ಅಕ್ಕನ ಈ ಮಾತು ಎಂದೆಂದೂ ಅನ್ವಯವಾಗುವುದು. ತಾಯಿ ತಂದೆಗಳಿಂದ ಬಂದುದು ನಿಜ ಹುಟ್ಟಲ್ಲ, ಗುರುವಿನ ಹಸ್ತದಲ್ಲಿ ಬಂದುದು ನಿಜ ಹುಟ್ಟು. ಅಂಥ ಅಧ್ಯಾತ್ಮಿಕ ಹುಟ್ಟು ಪಡೆದು ಗುರುವಿನ ಕರಕಮಲದಲ್ಲಿ ಬಂದು, ಸಮಾಜ ಬಾಂಧವರ ಸಹೃದಯತೆಯಲ್ಲಿ ಬೆಳೆದೆನು, ನಿಮ್ಮ ಸದ್ಭಾವದ ಹಾಲು ನನ್ನನ್ನು ಸಬಲಗೊಳಿಸಿದೆ. ಇದು ನನ್ನ ತವರು ಮನೆ; ಮಾತೃಭೂಮಿ. ಇಲ್ಲಿಂದ ಧರ್ಮ ಪ್ರಸಾರಾರ್ಥ ನಾನು ಹೊರಟಿರುವಾಗ ಕಳಿಸಲೆಂದು ಅಸಂಖ್ಯಾತರೆಲ್ಲ ನೆರೆದು ಬಂದಿದ್ದೀರಿ. ತಂದೆ ಬಸವಣ್ಣನ ಸಾಕ್ಷಿಯಾಗಿ ನಾನು ಬಾಳುತ್ತ, ನಿಮ್ಮ ಮಂಡೆಗೆ-ಅಂದರೆ ಗುರುಗಳಿಗೆ, ಸಮಾಜ ಬಾಂಧವರಿಗೆ, ನನ್ನನ್ನು ಹೆತ್ತ ಮಾತೃಭೂಮಿಗೆ, ಸಮಾಜಕ್ಕೆ ಹೂವು (ಕೀರ್ತಿ) ತರುವೆನೇ ವಿನಾಃ ಹುಲ್ಲು (ಅಪಕೀರ್ತಿ) ತಾರೆನು. ಈ ಪ್ರತಿಜ್ಞೆಯನ್ನು ಸ್ವೀಕರಿಸಿದ ನಾನು ನಿಮ್ಮೆಲ್ಲರಿಂದ ಬೀಳ್ಕೊಳ್ಳುವೆ." ಪೂಜ್ಯ ಮಾತಾಜಿಯವರ ಮಾತು ಮುಗಿದಾಗ ಸಭೆ ಬೆರಗಿನಿಂದ ಮೌನವೊಡೆದಿತ್ತು.

ಕಳೆದ ವಾರವಷ್ಟೇ ವಿಶ್ವ ಪರ್ಯಟನೆ ಮುಗಿಸಿ ಬಂದಿದ್ದ ಶ್ರೀಮತಿ ಬಸವ ರಾಜೇಶ್ವರಿಯವರು ಅಧ್ಯಕ್ಷೀಯ ಮಾತುಗಳನ್ನಾಡುತ್ತ, ತಮ್ಮ ಪ್ರವಾಸದ ಅನುಭವಗಳನ್ನು ಹೇಳಿ, ಮಾತಾಜಿಯವರ ವಿಶೇಷ ಪ್ರತಿಭೆಯ ಬಗ್ಗೆ ಮಾತನಾಡಿ, ಅವರಿಂದ ಅಸಂಖ್ಯಾತರಿಗೆ ಮಾರ್ಗದರ್ಶನ ದೊರೆಯಲಿ ಎಂದು ಹಾರೈಸಿ ಶುಭ ಕೋರಿದರು.

ದೇಗುಲ ರಚಿಸಿ ಕಳಸವಿಟ್ಟಂತೆ ಕಡೆಯಲ್ಲಿ ಪೂಜ್ಯಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಆಶೀರ್ವಚನ.

"ಪೂಜ್ಯ ಮಾತಾಜಿಯವರ ವಿದೇಶ ಪ್ರವಾಸ ಒಂದು ದೃಷ್ಟಿಯಿಂದ ಸಂತೋಷಕರ, ಇನ್ನೊಂದು ದೃಷ್ಟಿಯಿಂದ ಹಾನಿಕರ. ಅವರು ಸಂಸ್ಥೆಗೆ ಅಸಾಮಾನ್ಯ ಶಕ್ತಿ ಚಟುವಟಿಕೆಗಳ ಆಗರ-ಯೋಜನೆಗಳು ಕಾರ್ಯಗತವಾಗಲು ಆದಾಯದ ಮೂಲ. ಆದರೂ ಧರ್ಮ ಪ್ರಸಾರದ ಉದಾತ್ತ ಉದ್ದೇಶದಿಂದ ಅವರನ್ನು ಕಳಿಸಿಕೊಡಬೇಕಾಗಿದೆ.

ಈ ಮಣಿಹದಲ್ಲಿ, ಸಂಸ್ಥೆಯ ಚೇರ್ಮನ್ ಆಗಿ ನಾನು ಹೆಚ್ಚಿನ ಜವಾಬ್ದಾರಿ ಮತ್ತು ವೆಚ್ಚ ಹೊರಬೇಕಾದ ಸಂದರ್ಭದಲ್ಲಿ ತಾವು ಧನ ಸಹಾಯ ನೀಡಿ ಬಹಳ ದೊಡ್ಡ ನೆರವು ನೀಡಿದ್ದೀರಿ. ಪೂಜ್ಯರ ಪ್ರತಿಭೆಯನ್ನರಿತು ಅವರನ್ನು ನೀವೆಲ್ಲ ಸೂಕ್ತವಾಗಿ ಗೌರವಿಸಿದ್ದೀರಲ್ಲದೆ, ಅವರ ಬಗ್ಗೆ ಅಭಿಮಾನದ ಮಾತನ್ನಾಡಿದ್ದೀರಿ. ನಮ್ಮ ಶಿಷ್ಯರನ್ನೇ ಹೊಗಳಿಕೊಳ್ಳುವುದು ಅನುಚಿತವಾದರೂ, ಅವರು ಕೈಕೊಂಡ ಸಾಧನೆಗಳು, ಕಾರ್ಯಗಳು ಸಂಕಲ್ಪಗಳು ತೀವ್ರವಾಗಿ ಸಾಧಿಸುವುದಕ್ಕೆ ಕಾರಣ, ಅವರು ಕಾರಣಿಕರು. ನಾವು ದೇವರನ್ನು ಹಿಡಿದಿದ್ದೇವೆ. ಆದರೆ ದೇವರೇ ಅವರನ್ನು ಹಿಡಿದಿದ್ದಾನೆ. ಬಸವಣ್ಣನವರು ತಮ್ಮ ಕಾರ್ಯ ಸಾಧನೆಗಾಗಿಯೇ ಇವರಿಗೆ ಇಂತಹ ಶಕ್ತಿ-ಪ್ರತಿಭೆನೀಡಿದ್ದಾನೆ. ಮತ್ತು ಅದು ಲೋಕ ಸೇವೆಗೆ ಮೀಸಲಾಗಿರುವುದನ್ನು ನೋಡಿದಾಗ ಅತ್ಯಂತ ಆನಂದವಾಗುವುದು. ಅವರ ಪ್ರವಾಸ ಯಶಸ್ವಿಯಾಗಲಿ, ಧರ್ಮ ಪ್ರಸಾರಮಣಿಹ ಚೆನ್ನಾಗಿ ಪೂರೈಸಲಿ. ಸುರಕ್ಷಿತವಾಗಿ ಹೋಗಿ ಮಣಿಹ ಪೂರೈಸಿ ಬರಲೆಂದು ಹಾರೈಸೋಣ. ಸರ್ವರಿಗೂ ವಿಶ್ವಗುರು ಬಸವಣ್ಣನು ಸನ್ಮಂಗಳವನ್ನುಂಟು ಮಾಡಲಿ "ಎಂದು ಹರಸಿದರು

"ಪೂಜ್ಯರ ಆಶೀರ್ವಚನಾನಂತರ ಅನೇಕ ಸಹೃದಯರು ಮಾತಾಜಿಯವರನ್ನು ಸಂದರ್ಶಿಸಿ, ಕಾಣಿಕೆ ಸಲ್ಲಿಸಿ ಶುಭವನ್ನು ಕೋರಿದರು." ಎಂದು ಬೀಳ್ಕೊಡುಗೆ ಸಮಾರಂಭದ ವಿವರಣೆಯನ್ನು ನೀಡಿ ನಿಲ್ಲಿಸಿದಾಗ, ಅವರು 'ಅಂತೂ, ಸಮಾರಂಭದಲ್ಲಿ ಭಾಗವಹಿಸಲಾಗದಿದ್ದರೂ, ಕೇಳಿಯಾದರೂ ಸಂತಸಿಸುವ ಅವಕಾಶ ಸಿಕ್ಕಿತಲ್ಲ. ಅದೇ ಪುಣ್ಯ. ಅನೇಕ ವಂದನೆಗಳು' ಎಂದರು.

ವಧುವರಾನ್ವೇಷಣ ವಿಭಾಗ

ವಧು ಬೇಕಾಗಿದೆ

1. ಹೆಸರು :- ಮ. ಉಮಾಪತಿ

ವಯಸ್ಸು : 28 ವರ್ಷಗಳು ; ಜನ್ಮ ದಿನಾಂಕ 5-11-1952 (ಮೃಗಶಿರ ನಕ್ಷತ್ರ) ಎತ್ತರ: 5 ಅಡಿ 6 ಅಂಗುಲ. ಉತ್ತಮ ಬಣ್ಣದ ಲಕ್ಷಣವಾಗಿರುವ ಸಾಧಾರಣ ಮೈಕಟ್ಟಿನ ಯುವಕ. ವಿದ್ಯೆ : ಬಿ. ಎ. ಪದವೀದರ. ಹುದ್ದೆ : ಮೈಸೂರು ನಗರ ನೀರು ಸರಬರಾಜು ಇಲಾಖೆಯಲ್ಲಿ ಮೂರನೇ ದರ್ಜೆ ನೌಕರ. ಹುಟ್ಟಿದ ಧರ್ಮ :ಲಿಂಗಾಯತ. **ವಧುವಿನ ಅರ್ಹತೆ:** ವಿದ್ಯೆ: ಕನಿಷ್ಟ ಎಸ್. ಎಸ್. ಎಲ್. ಸಿ. ವರೆಗೆ. ಸುಸಂಸ್ಕೃತ ಮನೆತನದವರಾಗಿದ್ದು ಬಸವ ಧರ್ಮದ ಅನುಯಾಯಿಯಾಗಿರಬೇಕು. ರೂಪ : ಸುಂದರ, ಉತ್ತಮಬಣ್ಣ. ವಯಸ್ಸು : ಸುಮಾರು ಇಪ್ಪತ್ತು ವರ್ಷಗಳಾಗಿರಬೇಕು. ಎತ್ತರ: 5 ಅಡಿ 3 ಅಂಗುಲ. ಸರ್ಕಾರಿ ಹುದ್ದೆಯಲ್ಲಿದ್ದರೂ ಸರಿ.

ವ್ಯವಹರಿಸುವ ವಿಳಾಸ : C/o ಕಲ್ಯಾಣ ಕಿರಣ.

೧೯೮೧ರ ಸಾಲಿನ ಶರಣರ ಜಯಂತಿಗಳು ಮತ್ತು ಹಬ್ಬಗಳು

೧. ಸಿದ್ಧರಾಮ ಜಯಂತಿ (ಮಕರ ಸಂಕ್ರಮಣ) ಜನವರಿ ೧೪
೨. ಗಣರಾಜ್ಯೋತ್ಸವ ದಿನ ಜನವರಿ ೨೬
೩. ಸ್ವಾಮಿ ವಿವೇಕಾನಂದ ಜಯಂತಿ ಜನವರಿ ೨೭
೪. ಮಾಧ್ವನವಮಿ ಫೆಬ್ರವರಿ ೧೩
೫. ಸರ್ವ ಶರಣರ ದಿನಾಚರಣೆ (ಮಹಾಶಿವರಾತ್ರಿ) ಮಾರ್ಚ್ ೪
೬. ಮಾತಾಜಿ ಜಯಂತಿ ಮಾರ್ಚ್ ೧೩
೭. ಅಲ್ಲಮಪ್ರಭು ಜಯಂತಿ (ಯುಗಾದಿ ಪ್ರತಿಪದೆ) ಏಪ್ರಿಲ್ ೫
೮. ಮಹಾವೀರ ಜಯಂತಿ ಏಪ್ರಿಲ್ ೧೭
೯. ಅಕ್ಕಮಹಾದೇವಿ ಜಯಂತಿ (ದವನದ ಹುಣ್ಣಿಮೆ) ಏಪ್ರಿಲ್ ೧೯
೧೦. ಶಿವಾಜಿ ಜಯಂತಿ ಮೇ ೫
೧೧. ಬಸವ ಜಯಂತಿ ಮೇ ೭
೧೨. ಶಂಕರ ಜಯಂತಿ ಮೇ ೮
೧೩. ರಾಮಾನುಜ ಜಯಂತಿ ಮೇ ೮
೧೪. ವಾಸವಿ ಜಯಂತಿ ಮೇ ೧೩
೧೫. ಬುದ್ಧ ಜಯಂತಿ ಮೇ ೧೮
೧೬. ಬಸವಲಿಂಗೈಕ್ಯ ದಿನಾಚರಣೆ (ಶ್ರಾವಣ ಶುದ್ಧ ಪಂಚಮಿ) ಆಗಸ್ಟ್ ೪
೧೭. ಸ್ವಾತಂತ್ರ್ಯೋತ್ಸವ ದಿನ ಆಗಸ್ಟ್ ೧೫
೧೮. ಸ್ವಾಮಿ ಲಿಂಗಾನಂದ ಜಯಂತಿ (ಗಣೇಶ ಚತುರ್ಥಿ) ಸೆಪ್ಟೆಂಬರ್ ೨
೧೯. ಮಹಾತ್ಮಾ ಗಾಂಧಿ ಜಯಂತಿ ಅಕ್ಟೋಬರ್ ೨
೨೦. ಕಲ್ಯಾಣ ಕ್ರಾಂತಿ ದಿನ (ಹರಳಯ್ಯ-ಮಧುವಯ್ಯ ಮಹಾನವಮಿ) ಅಕ್ಟೋಬರ್ ೯
೨೧. ಚನ್ನಬಸವ ಜಯಂತಿ (ಬಲಿ ಪಾಡ್ಯಮಿ) ಅಕ್ಟೋಬರ್ ೨೮
೨೨. ಕನ್ನಡ ರಾಜ್ಯೋತ್ಸವ ದಿನ ನವೆಂಬರ್ ೧
೨೩. ಗುರುನಾನಕ್ ಜಯಂತಿ ನವೆಂಬರ್ ೧೧
೨೪. ನಿಜಗುಣ ಶಿವಯೋಗಿ ಜಯಂತಿ ನವೆಂಬರ್ ೩೦
೨೫. ಶ್ರೀ ಗೀತಾ ಜಯಂತಿ ಡಿಸೆಂಬರ್ ೭
೨೬. ಮಾದಾರ ಚನ್ನಯ್ಯ ಜಯಂತಿ ಡಿಸೆಂಬರ್ ೧೧


(ಬೆಂಗಳೂರು ಮುದ್ರಣಾಲಯದ ಕ್ಯಾಲೆಂಡರ್ ಆಧರಿಸಿ)

ದೂರವಾಣಿ : ೮೨೩೩೫

ವಿಶ್ವಕಲ್ಯಾಣ ಮಿಷನ್

ಬಸವ ಮಂಟಪ, ಕಾರ್ಡ್ ರಸ್ತೆ, ೨ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೧೦

Regd. No. KRNB 312
Licenced to post without pre-payment No. WPP-25



ಎಡದಿಂದ ಬಲಕ್ಕೆ : ಶರಣರುಗಳಾದ 1) ಜಗದಾಂಬಾ 2) ಉಮಾದೇವಿ 3) ಗೊ. ರು. ಚನ್ನಬಸಪ್ಪ 4) ಕೆ. ಆರ್. ಲಿಂಗಪ್ಪ 5) ಸಚಿವ ಬೇಗಾನೆ ರಾಮಯ್ಯ 6) ಪೂಜ್ಯ ಮಾತಾಜಿ 7) ಬಸವರಾಜೇಶ್ವರಿ (ವಿ. ಪ. ಅಧ್ಯಕ್ಷೆ) 8) ಸ್ವಾಮಿ ಲಿಂಗಾನಂದರು 9) ಆಯ್. ಎಂ. ಮುಗದುಂ 10) ರಂ. ಶ್ರೀ. ಮುಗಳಿ 11) ಹೆಚ್. ಗಂಗಾಧರನ್ 12) ಗುಂಡಿ ಹಾಲಪ್ಪ 13) ಸ್ವಾಮಿ ದಯಾನಂದರು 14) ಹೀ. ಚಿ. ಶಾಂತವೀರಯ್ಯ